
ಲಂಕೇಶ್
ಏಪ್ರಿಲ್ 28, 2010 ರೂ. 12/-

ಗೋವು ಪವಿತ್ರ ಎಂಬ ಮಿಥ್ಯೆ







IPL

ಹಣ ಹೆಣ್ಣು ಹೆಂಡ

ಶಿವಪ್ಪನನ್ನು ಕೊಂದದ್ದು ಯಾರು?



ಪ್ರಜಾವಾಣಿಗೆ ಪೊಲೀಸ್ ಬೆದರಿಕೆ



ಲಿಂಗಾಯತರ ಜಗಳ

ಜಾನ್ಸನ್ ಎನ್‌ಕೌಂಟರ್ ಹಾಕಿಕೊಟ್ಟಿದ್ದು ಕಾಲಾಪತ್ಥರ್?



ಹೊಸ ಧಾರಾವಾಹಿ ಜಂಗ[illegible]ಾಮ


ನಕ್ಸಲರ ನಾಡಿನಲ್ಲಿ


ರಾಜೀವ್ ಗಾಂಧಿ ಆವಾಸ್ ಯೋಜನಾ (RAY)
RAY ಜಾರಿಗೆ ಬಂದರೆ ಸ್ಲಮ್ಮುಗಳ ಎತ್ತಂಗಡಿಯಾಗುವುದು ಖರೇ!

ಇಂದು ಮಹಾನಗರಗಳಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳು ಎದುರಿಸುತ್ತಿರುವ ಅತಿ ದೊಡ್ಡ ಸಮಸ್ಯೆ ಭೂಮಿಯದ್ದು. ನಗರಗಳ ಬೆಳವಣಿಗೆ ಯಾಗುತ್ತಾ ಈಗ ಸ್ಲಂಗಳಿರುವ ಜಾಗಕ್ಕೆ ಕೋಟ್ಯಾಂತರ ರೂಪಾಯಿ ಬೆಲೆಬಂದಿದೆ. ಆದರೆ ಅಲ್ಲಿಂದ ಸ್ಲಂ ಎತ್ತಂಗಡಿಯಾಗದೆ ಈ ಜಾಗ ಅವರಿಗೆ ಸಿಗುತ್ತಿಲ್ಲ. ಈಗ ಸ್ಲಂ ಜನರಿಗೆ ಮನೆ ಕಟ್ಟಿಸಿಕೊಡುವ ಕ್ಯಾರೆಟ್ಟನ್ನು ಅವರ ಮುಂದೆ ತೂಗಿಬಿಟ್ಟು ತಮ್ಮ ಎತ್ತಂಗಡಿಯನ್ನು ತಾವೇ ಒಪ್ಪಿಕೊಳ್ಳುವಂತೆ ಚಾಣಾಕ್ಷ ಯೋಜನೆಯಾಗಿ ಈ ರೇ ರೂಪಿತವಾಗಿದೆ.

ಬಳ್ಳಾರಿಯ ಗಣಿಗಾರಿಕೆಯ ಬಗ್ಗೆ ಡಾಕ್ಯುಮೆಂಟರಿ ಚಿತ್ರವೊಂದನ್ನು ಮಾಡಲು ಬಂದಿದ್ದ ದೆಹಲಿ ಮೂಲದ ಹಿರಿಯ ಟೀವಿ ಪತ್ರಕರ್ತರೊಬ್ಬರು ಕೆಲದಿನಗಳ ಹಿಂದೆ 'ಲಂಕೇಶ್' ಕಚೇರಿಗೂ ಬಂದಿದ್ದರು. ಅವರೊಡನೆ ಅದೂ ಇದೂ ಮಾತನಾಡುತ್ತಾ ಇಂದಿನ ರಾಜಕೀಯ ಪರಿಸ್ಥಿತಿ, ಯುಪಿಎ ಸರ್ಕಾರದ ರೀತಿನೀತಿಗಳ ಬಗ್ಗೆಯೂ ಚರ್ಚೆ ಹೊರಳಿತು. ಈ ಸ್ನೇಹಿತರು ಕಳೆದ 30 ವರ್ಷದಿಂದ ದೆಹಲಿ ಪತ್ರಿಕೋದ್ಯಮದಲ್ಲಿದ್ದಾರೆ. ಎಲ್ಲಾ ಪಕ್ಷಗಳ ಪ್ರಧಾನಿಗಳನ್ನು ಹತ್ತಿರದಿಂದ ಬಲ್ಲವರು. ಹೀಗಾಗಿ ಅವರೇನು ಹೇಳಬಹುದು ಎಂಬ ಬಗ್ಗೆ ಸಾಕಷ್ಟು ಕುತೂಹಲವಿತ್ತು.

ಅವರು ಹೇಳಿದ್ದಿಷ್ಟು, ಕಾಂಗ್ರೆಸ್ ಸರ್ಕಾರದಲ್ಲಿ ಎರಡು ಬಗೆಯ ಬಣಗಳಿವೆ. ಮೊದಲನೆ ಬಣದಲ್ಲಿ ಪ್ರಧಾನಿ ಮನಮೋಹನ್, ಚಿದಂಬರಂ, ಅಹ್ಲುವಾಲಿಯಾರಂಥ ಕಾರ್ಪೊರೇಟ್ ಪರ ನೀತಿಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಕ್ಕೆ ತರಬೇಕೆನ್ನುವವರು ಇದ್ದಾರೆ. ಎರಡನೆ ಬಣದಲ್ಲಿ ಹಣಕಾಸು ಮಂತ್ರಿ ಪ್ರಣಬ್, ರಕ್ಷಣಾ ಮಂತ್ರಿ ಆಂಟೋನಿಯಂಥವರು ಕಾಂಗ್ರೆಸ್ಸಿಗೆ ಎಡಪಂಥೀಯವೆಂಬ ಇಮೇಜನ್ನು ಕೊಡಲು ಪ್ರಯತ್ನಿಸುತ್ತಿದ್ದಾರೆ. ಇವರ ನಾಯಕಿ ಸೋನಿಯಾ ಗಾಂಧಿ. ರೋಜ್‌ಗಾರ್ ಯೋಜನಾ, ಮಾಹಿತಿ ಹಕ್ಕು ಕಾಯಿದೆ, ಶಿಕ್ಷಣವನ್ನು ಮೂಲಭೂತ ಹಕ್ಕಾಗಿಸಿದ ಕಾಯಿದೆ, ರಾಜೀವ್ ಗಾಂಧಿ ಆವಾಸ್ ಯೋಜನಾ ಇನ್ನಿತ್ಯಾದಿಗಳು ಈ ಎರಡನೆ ಬಣದ ಕನಸಿನ ಕೂಸುಗಳು. ಇವೆಲ್ಲವೂ ಜನಪರವಾದದ್ದು, ಕಾಂಗ್ರೆಸ್ಸಿನಲ್ಲಿ ಅಂತಿಮ ಅಧಿನಾಯಕಿ ಸೋನಿಯಾ ಗಾಂಧಿಯೇ! ಹೀಗಾಗಿ ಸೋನಿಯಾ ಗಾಂಧಿ ಇರುವಷ್ಟು ಕಾಲ ಸರ್ಕಾರ ಅತ್ಯಂತ ಜನವಿರೋಧಿ ಕ್ರಮಗಳನ್ನು ತೆಗೆದುಕೊಳ್ಳುವುದು ಕಷ್ಟ ಎಂದು ಅವರು ಅಭಿಪ್ರಾಯ ಪಟ್ಟರು. ಅಂತಿಮವಾಗಿ ಇವೆಲ್ಲಾ ನನ್ನ ಖಾಸಗಿ ಅಭಿಪ್ರಾಯ. ನನ್ನದು ತಪ್ಪಿದ್ದರೂ ಇರಬಹುದೂ ಎಂಬ ನಿರೀಕ್ಷಣಾ ಜಾಮೀನು ತೆಗೆದುಕೊಂಡರಾದರೂ ಈಗ ಅವರ ಮೇಲೆ ವೈಯಕ್ತಿಕ ದೂರು ಹೊರಿಸುವ ಉದ್ದೇಶವೇನೂ ನನಗಿಲ್ಲ.





ಶಿವಸುಂದರ್

ಏಕೆಂದರೆ ಕಾಂಗ್ರೆಸ್ ಪಕ್ಷದ ಬಗ್ಗೆ ಮತ್ತು ಸೋನಿಯಾ ಗಾಂಧಿಯ ಬಗ್ಗೆ ಈ ಬಗೆಯ ಅಭಿಪ್ರಾಯ ಹೊಸತೇನೂ ಅಲ್ಲ. ದೆಹಲಿ ಸ್ನೇಹಿತರಲ್ಲಿ ಮಾತ್ರವಲ್ಲ, ಹಲವಾರು ತಥಾಕಥಿತ ಪಕ್ಷಾತೀತ ರಾಜಕೀಯ ವೀಕ್ಷಕ ಮುತ್ಸದ್ದಿಗಳಲ್ಲಿ ಇರುವ ಅಭಿಪ್ರಾಯವನ್ನೇ ಈ ಸ್ನೇಹಿತರೂ ವ್ಯಕ್ತಪಡಿಸಿದ್ದರಷ್ಟೇ.

ಆದರೆ ನಿಜಕ್ಕೂ ಕೇಳಿಕೊಳ್ಳಲೇ ಬೇಕಿರುವ ಕೆಲವು ಪ್ರಶ್ನೆಗಳಿವೆ. ಕಾಂಗ್ರೆಸ್ಸಿನೊಳಗೆ ಈ ಬಗೆಯ ಅಭಿಪ್ರಾಯ ಭೇದಗಳು ಎಷ್ಟು 'ನಿಜವಾದದ್ದು?' ಸೋನಿಯಾ ಗಾಂಧಿಯವರ ಅಂತಿಮ ಆದೇಶದೊಂದಿಗೆ ಆಚರಣೆಗೆ ಬಂದಿರುವ 'ಜನಪರ' ಯೋಜನೆಗಳು ಎಷ್ಟು ಜನಪರ? ಎಲ್ಲಕ್ಕಿಂತ ಹೆಚ್ಚಾಗಿ ಸೋನಿಯಾ ಗಾಂಧಿಯನ್ನು ಬಿಡಿ, ನೆಹರೂ ಕಾಲದ ಕಾಂಗ್ರೆಸ್ಸಿನ ನೀತಿಗಳನ್ನೇ ದುರ್ಬಲವಾಗಿದ್ದ ಬಂಡವಾಳಶಾಹಿಗಳನ್ನು ಬೆಂಬಲಿಸಲು ಜನಪರ ತೆಯ ಮುಖವಾಡದಡಿ ಜಾರಿಯಾದ ನೀತಿಗ ಳೆಂದು ಜರೆಯುತ್ತಿದ್ದವರೂ ಸಹ ಈಗ ಸೋನಿಯಾ ಗಾಂಧಿಯಲ್ಲಿ 'ಜನಪರತೆ'ಯನ್ನು ಅರಸಲು ಹೊರಡುವಂತೆ ಮಾಡಿರುವ ಸಂದರ್ಭವೇನು? ಇದೇನು ಅಸಹಾಯಕತೆ ಸೃಷ್ಟಿಸಿರುವ ದೃಷ್ಟಿ ದೋಷವೋ ಅಥವಾ ವಿವೇಕ ಮಾಂದ್ಯತೆಯಿಂದ ಉಂಟಾಗಿರುವ ಹಗಲು ಕುರುಡೋ? .

ಕಾಂಗ್ರೆಸ್ಸಿನ ಈ 'ಎಡಪಂಥೀಯ' ಯೋಜನೆ ಗಳಾದ ರೋಜಗಾರ್ ಯೋಜನೆ ಅಥವಾ ರೈತರ ಸಾಲಮನ್ನಾದಂಥ ಯೋಜನೆಗಳು ಕಾಂಗ್ರೆಸ್ಸಿಗೆ ಓಟು ದೊರಕಿಸಿಕೊಳ್ಳಲು ಸಹಾಯ ಮಾಡಿದ ವೆಯೇ ವಿನಃ ತಳಮಟ್ಟದಲ್ಲಿ ನಿಜವಾದ ಬಾಧಿತ ರಿಗೆ ಯಾವುದೇ ಸಹಾಯ ನೀಡಿಲ್ಲವೆಂಬುದು ಈಗ ಒಂದೊಂದಾಗಿ ಬಯಲಿಗೆ ಬರುತ್ತಿದೆ.



ಇನ್ನು ಶಿಕ್ಷಣ ಹಕ್ಕಿನಂಥ ಕಾಯಿದೆಗಳು ವಾಸ್ತವದಲ್ಲಿ ಕಾಂಗ್ರೆಸ್ಸಿನ 'ಒಳಗೊಂದು ಹೊರಗೊಂದು' ಎಂಬ ಆಷಾಢಭೂತಿತನಕ್ಕೆ ಉದಾಹರಣೆಯಾಗಿದೆ. ಶಿಕ್ಷಣ ಹಕ್ಕು ಸಾರಾಂಶದಲ್ಲಿ ಶಿಕ್ಷಣ ಪದ್ಧತಿಯಲ್ಲಿ ಈಗಿರುವ ತಾರತಮ್ಯಗಳನ್ನು, ಶಿಕ್ಷಣದ ಖಾಸಗೀಕರಣವನ್ನು ಶಾಶ್ವತಗೊಳಿಸುವ ಯೋಜನೆಯೇ ಆಗಿದೆಯೆಂಬುದು ಈಗ ಸ್ಪಷ್ಟವಾಗಿದೆ.

ಇನ್ನು ರಾಜೀವ್ ಗಾಂಧಿ ಆವಾಸ್ ಯೋಜನೆ! ಇದು ಇಂಗ್ಲಿಷಿನಲ್ಲಿ RAY- ಅಂದರೆ ಕಿರಣ, ಭರವಸೆಯ ಕಿರಣ ಎಂಬ ಅರ್ಥಕೊಡುವ - ಸಂಕ್ಷೇಪಿತ ರೂಪದಲ್ಲಿ ಈಗಾಗಲೇ ಪ್ರಸಿದ್ಧವಾಗಿದೆ. ಈ ಯೋಜನೆಯು 2017ನೇ ಇಸವಿ ವೇಳೆಗೆ ಭಾರತದಲ್ಲಿ ಸ್ಲಮ್ಮುಗಳೇ ಇಲ್ಲದಂತೆ ಮಾಡುತ್ತ ದಂತೆ! 2010ರ ಕೊನೆಯಿಂದ ಜಾರಿಗೆ ಬರುವ ಈ ಯೋಜನೆಯ ಪ್ರಾರಂಭದ ಎರಡು ವರ್ಷಗಳಲ್ಲಿ ಪ್ರತಿ ನಗರದಲ್ಲಿ ಇರುವ ಸ್ಲಮ್ಮುಗಳು ಮತ್ತು ಅದರಲ್ಲಿ ವಾಸಿಸುವ ಜನಸಂಖ್ಯೆಯ ಸಮಗ್ರ ಯಾದಿಯನ್ನು ತಯಾರಿಸುತ್ತದೆ. ನಂತರದ ಐದು ವರ್ಷಗಳಲ್ಲಿ ಏನಿಲ್ಲವೆಂದರೂ 5 ಕೋಟಿ ಮನೆಗಳನ್ನು ನಿರ್ಮಾಣ ಮಾಡುವ ಬೃಹತ್ ಯೋಜನೆ ಈ ರೇ!

ಆದರೆ, ಈ ಬೃಹತ್ 'ರೇ' ಯೋಜನೆಗೆ ಹಣ ಎಲ್ಲಿಂದ ಬರುತ್ತದೆ? ಏಳು ವರ್ಷದ ಈ ಯೋಜನೆಗೆ 10 ಲಕ್ಷ ಕೋಟಿ ರೂಪಾಯಿಗಳು ಬೇಕೆಂದು ಅಂದಾಜು ಮಾಡಲಾಗಿದೆ. ಈಗಾಗಲೇ 11ನೇ ಯೋಜನೆಯಲ್ಲೂ ಸ್ಪಷ್ಟಗೊಳಿಸಿರುವಂತೆ ಇಡೀ ದೇಶಕ್ಕೆ 11ನೇ ಯೋಜನೆಯಡಿ ರಸ್ತೆ ಬಂದರು, ಮನೆ, ಶಿಕ್ಷಣ, ಆರೋಗ್ಯ ಇನ್ನಿತ್ಯಾದಿ ಮೂಲಸೌಕರ್ಯ ಗಳನ್ನು ಒದಗಿಸಲು 60 ಲಕ್ಷ ಕೋಟಿ ರೂಪಾಯಿ ಬಂಡವಾಳದ ಅಗತ್ಯವನ್ನು ನಿರೀಕ್ಷಿಸಲಾಗಿದೆ. ಆದರೆ ಸರ್ಕಾರದ ಬಳಿ ಹಣವಿಲ್ಲ, ಹೀಗಾಗಿ ಸೋನಿಯಾ ಗಾಂಧಿ ಮತ್ತವರ ಎಲ್ಲಾ 'ಎಡಪಂಥೀಯ' ಹಿರಿಯರ ಬೆಂಬಲದೊಂದಿಗೆ ಅನುಮೋದಿತವಾಗಿರುವ 11ನೇ ಯೋಜನೆಯಲ್ಲಿ ಹಣ ಕ್ರೋಢೀಕರಿಸಲು ಹಾಕಿಕೊಂಡಿ ರುವ ಯೋಜನೆ PPP- Public-Private Participation - ಸಾರ್ವಜನಿಕ-ಖಾಸಗಿ ಸಹಯೋಗ!

ಆದರೆ ಯಾವುದೇ ಯೋಜನೆಯಲ್ಲಿ ಖಾಸಗಿ ವ್ಯಕ್ತಿ ಬಂಡವಾಳ ಹೂಡುವುದೇ ಲಾಭದ ಉದ್ದೇಶದಿಂದ. ಹೀಗಾಗಿ ಈ ಬಗೆಯ ಪಿಪಿಪಿ ಯೋಜನೆಯಲ್ಲಿ ಛಬ್ಬ

16

ನೋ ಕಾಮೆಂಟ್ಸ್

"ಗುಜರಾತ್ ಹತ್ಯಾಕಾಂಡದಲ್ಲಿ ಗರ್ಭಿಣಿ ಕೌಸರ್‌ಬಾನುವಿನ ಹೊಟ್ಟೆಯನ್ನು ಬಗೆದು ಭ್ರೂಣವನ್ನು ತ್ರಿಶೂಲದಲ್ಲಿ ಚುಚ್ಚಿ ಹೊರತೆಗೆಯ ಲಾಗಿತ್ತು ಎಂಬ ಆಪಾದನೆಯನ್ನು ಡಾ.ಕನೋರಿಯಾ ನಿರಾಕರಿಸಿದ್ದಾರೆ. ಆಕೆಯ ಹೊಟ್ಟೆಯಲ್ಲಿ ಭ್ರೂಣ ಸುರಕ್ಷಿತವಾಗಿತ್ತು ಎಂದು ಹೇಳಿಕೆ ನೀಡಿದ್ದಾರೆ. ಆದರೆ ಆಕೆಯ ಹೊಟ್ಟೆ ಬಗೆದ ಬಾಬಾ ಭಜರಂಗಿ 'ಕುಟುಕು ಕಾರ್ಯಾಚರಣೆ' ಯಲ್ಲಿ ತಾನು ಆ ಭ್ರೂಣ ಬಗೆಯುವ 'ಸಾಹಸ' ಕಾರ್ಯ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಗುಜರಾತ್ ಹತ್ಯಾಕಾಂಡದಲ್ಲಿ ಸಂಭವಿಸಿದ ಇಂಥಾ 4000ಕ್ಕೂ ಹೆಚ್ಚು ಪ್ರಕರಣಗಳಲ್ಲಿ 2000ಕ್ಕೂ ಹೆಚ್ಚು ಪ್ರಕರಣಗಳನ್ನು ಗುಜರಾತ್ ಸರ್ಕಾರ ಕೈಬಿಟ್ಟಿದೆ. ಆದ್ದರಿಂದಲೇ ಸುಪ್ರೀಂಕೋರ್ಟ್ ಈ ಪ್ರಕರಣಗಳ ವಿವರಣೆಯು ಗುಜರಾತಿನ ಹೊರಗಡೆ ನಡೆಯಬೇಕೆಂದು ಆದೇಶ ನೀಡಿತ್ತು, ಒಂದು ರಾಜ್ಯದ ಮುಖ್ಯಮಂತ್ರಿಯನ್ನೇ ನಂಬಲು ಸಾಧ್ಯವಾಗದು ಎಂದು ಸುಪ್ರೀಂಕೋರ್ಟ್ ಹೇಳುತ್ತಿರುವಾಗ ಆ ರಾಜ್ಯದ ಒಬ್ಬ ಸರ್ಕಾರಿ ವೈದ್ಯಾಧಿಕಾರಿಯ ಮಾತನ್ನು ನಂಬಲು ಸಾಧ್ಯವೇ?"

- ದಿನೇಶ್ ಅಮೀನ್ ಮಟ್ಟು

"ಧರ್ಮಜಾಗೃತಿಗಾಗಿ ಮತ್ತು ಅವರು ಮಾಡುತ್ತಿರುವ ಸೇವಾ ಕಾರ್ಯಗಳಿಗಾಗಿ ಮಠಮಂದಿರಗಳಿಗೆ ಹಣ ಕೊಟ್ಟೇಕೊಡುತ್ತೇವೆ. ನೀವೇನು ಬೇಕಿದ್ದರೂ ಮಾಡಿಕೊಳ್ಳಿ."

- ಈಶ್ವರಪ್ಪ

"ಮುಸ್ಲಿಂ ಮದ್ರಸಾಗಳು ಉಗ್ರಗಾಮಿಗಳನ್ನು ಸೃಷ್ಟಿಸುತ್ತವೆ ಎಂಬುದು ತಪ್ಪು ತಿಳಿವಳಿಕೆ. ಇತ್ತೀಚಿನ ವರ್ಷಗಳಲ್ಲಿ ನಡೆದಿರುವ ಉಗ್ರಗಾಮಿ ದಾಳಿಗಳನ್ನು ಮಾಡಿದ ಬಹುಪಾಲು ಯುವಕರು ಉನ್ನತ ಇಂಜಿನಿಯರಿಂಗ್‌ನಂಥ ಶಿಕ್ಷಣ ಪಡೆದ ಸುಶಿಕ್ಷಿತರು. ಅವರಲ್ಲಿ ಬಹಳಷ್ಟು ಮಂದಿ ಎಂದೂ ಮದ್ರಸಾಗಳಲ್ಲಿ ಶಿಕ್ಷಣವನ್ನೇ ಪಡೆದಿಲ್ಲ."

- ದಿ ಮದ್ರಸಾ ಮಿಥ್' ಎಂಬ ಕೃತಿಯಲ್ಲಿ. ಲೇಖಕರು: ಪೀಟರ್ ಬರ್ಗನ್, ಸ್ವಾತಿ ಪಾಂಡೆ

"ಸ್ಲಂಗಳನ್ನು ಸಾಧ್ಯವಾದಷ್ಟೂ ಕಣ್ಣಿಗೆ ಕಾಣದಂತೆ ಮಾಡಬೇಕೆಂದು ಪ್ರಾಯಶಃ ಪ್ರತಿಯೊಬ್ಬ ಭಾರತೀಯನ ಮನಸ್ಸಿನಲ್ಲೂ ಅಪ್ರಜ್ಞಾಪೂರ್ವಕವಾಗಿಯೋ, ಪ್ರಜ್ಞಾಪೂರ್ವಕವಾಗಿಯೋ ಇದ್ದೇ ಇರುತ್ತದೆ. ಸ್ಲಂಗಳಿಂದ ಪಡೆಯಬೇಕಾದ ಸೇವೆಗಳನ್ನು ಮಾತ್ರ ಪಡೆದುಕೊಳ್ಳಬೇಕು ಆದರೆ ಅವು ಕಣ್ಣಿಗೆ ಮಾತ್ರ ಕಾಣಬಾರದೆಂಬ ಬಯಕೆ ಕಾಯಿಲೆಯಂತೆ ಎಲ್ಲೆಡೆ ಹರಡುತ್ತಿದೆ."

- ಅಶೀಶ್ ನಂದಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ತಂಪು ಪಾನೀಯಗಳನ್ನು ತಯಾರು ಮಾಡುವ ಕಂಪನಿಗಳಿಗೆ ಬೇಕಾಗುವ ಪ್ರಧಾನ ಕಚ್ಚಾ ವಸ್ತು ನೀರು. ಇತರ ಕಂಪನಿಗಳು ಉತ್ಪಾದಿಸುವ ಸರಕುಗಳಿಗೆ ತಗಲುವ ಉತ್ಪಾದನಾ ವೆಚ್ಚದಲ್ಲಿ ಪ್ರಮುಖವಾದದ್ದು ಕಚ್ಚಾ ವಸ್ತುಗಳನ್ನು ಕೊಳ್ಳಲು ತಗಲುವ ವೆಚ್ಚ. ಆದರೆ ಈ ದೇಶದಲ್ಲಿ ಈಗಿರುವ ಜಲನೀತಿಯ ಪ್ರಕಾರ ಯಾರ ವಶದಲ್ಲಿ ಜಮೀನಿರುತ್ತದೋ ಅಲ್ಲಿನ ಅಂತರ್ಜಲ ಅದೇ ಕಂಪನಿಯದ್ದೇ ಆಗುತ್ತದೆ. ಹೀಗಾಗಿ ಈ ತಂಪು ಪಾನೀಯ ಕಂಪನಿಗಳಿಗೆ ಬೇಕಾದ ಕಚ್ಚಾ ವಸ್ತುವಾದ ನೀರು ಮುಫತ್ತಾಗಿಯೇ ಸಿಗುತ್ತದೆ. ಈ ಕಂಪನಿಗಳು ಒಂದು ಲೀಟರ್ ತಂಪು ಪಾನೀಯವನ್ನು ತಯಾರು ಮಾಡಲು 4 ಲೀಟರ್ ನೀರನ್ನು ಬಳಸಿ 3 ಲೀಟರ್ ತ್ಯಾಜ್ಯವಾಗಿ ಹೊರಚೆಲ್ಲುತ್ತವೆ. ಇದಕ್ಕೆ ಮಾತ್ರ ಕಂಪನಿ ಸೆಸ್ ಕಟ್ಟಬೇಕಾಗುತ್ತದೆ. ಅದೂ 1000 ಲೀಟರ್‌ಗೆ 30 ಪೈಸೆ. ಅಂದರೆ ಲೀಟರ್‌ಗೆ 0.1 ಪೈಸೆ! ಆದರೆ ತಂಪು ಪಾನೀಯ ಮಾತ್ರ ಲೀಟರ್‌ಗೆ 40 ರೂ. ತನಕ ಮಾರಾಟವಾಗುತ್ತದೆ. ಇದು ಇವು ಗ್ರಾಹಕರನ್ನು ದೋಚುವ ಪರಿ."

- ಕೇರಳದ ಪ್ಲಾಚಿಮಾಡಾದಲ್ಲಿ ಕೋಕೋಕೋಲಾ ಕಂಪನಿ ಮಾಡಿರುವ ಅನಾಹುತದ ಬಗ್ಗೆ ನೀಡಿರುವ ವರದಿಯಲ್ಲಿ

"ಕುಂತಲ್ಲಿ, ನಿಂತಲ್ಲಿ ಬಿಜೆಪಿ ನಾಯಕರು ಸರ್ಕಾರದ ಸಾಧನೆಯ ಬಗ್ಗೆ ಹೇಳಿಕೊಳ್ಳಬೇಕು. ಆಗ ಬಿಜೆಪಿಗೆ ಮತ ಕೊಡಿ ಎಂದು ಜನರಿಗೆ ಹೇಳುವ ಅಗತ್ಯವೇ ಬೀಳುವುದಿಲ್ಲ, ಜನ ತಾವಾಗಿಯೇ ಓಟು ಹಾಕುತ್ತಾರೆ."

- ಯಡಿಯೂರಪ್ಪ

"ಕಳೆದ 3 ದಿನಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ. ಪ್ರವಾಸದ ಸಂದರ್ಭದಲ್ಲಿ ಎಲ್ಲೂ ನೀರಿನ ಸಮಸ್ಯೆ ಕಂಡುಬಂದಿಲ್ಲ, ನೀರಿನ ಸಮಸ್ಯೆ ಇದೆ ಎಂಬುದು ಸತ್ಯಕ್ಕೆ ದೂರವಾದ ಸಂಗತಿ."

- ಯಡಿಯೂರಪ್ಪ

"ಸರ್ವರಿಗೂ ಸಮಪಾಲು-ಸರ್ವರಿಗೂ ಸಮಬಾಳು ಎಂಬ ತತ್ವದಡಿಯಲ್ಲೇ ಕಾಂಗ್ರೆಸ್ ಕೆಲಸ ಮಾಡುತ್ತಿದೆ. ಬಸವಣ್ಣನ ಆದರ್ಶಗಳನ್ನು ಜಾರಿಗೆ ತರಬೇಕೆಂಬುದೇ ಕಾಂಗ್ರೆಸ್ಸಿನ ಆಶಯ."

- ಸೋನಿಯಾ ಗಾಂಧಿ

"ರಾಜ್ಯಸಭೆಯಲ್ಲಿ 200 ಜನ ಕೋಟ್ಯಾಧಿಪತಿಗಳಿದ್ದಾರೆ. 36 ಜನರ ಮೇಲೆ ಕ್ರಿಮಿನಲ್ ಮೊಕದ್ದಮೆಗಳಿವೆ."

- ಪತ್ರಿಕಾ ವರದಿ

ಇಂಥವರನ್ನು ಎಚ್ಚರಿಸಲು ಆ ಬ್ರಹ್ಮ ಬಂದರೂ ಸಾಧ್ಯವಿಲ್ಲ!

"ಚುನಾವಣೆಯಲ್ಲಿ ನಮ್ಮ ಕಡೆಯಿಂದ ಯಾವುದೇ ತಪ್ಪುಗಳಾಗಿಲ್ಲ, ಬಿಬಿಎಂಪಿ ಚುನಾವಣೆಯ ಫಲಿತಾಂಶಗಳಿಂದ ನಮಗೇನೂ ಬೇಸರವಿಲ್ಲ. ಬೆಂಗಳೂರಿನ ಶ್ರೀಮಂತರು ಮತ್ತು ಮೇಲ್‌ಮಧ್ಯಮ ವರ್ಗದ ಜನ ಬಂದು ಓಟು ಹಾಕಿದ್ದರೆ ನಾವೇ ಗೆಲ್ಲುತ್ತಿದ್ದವು."

- ದೇಶಪಾಂಡೆ, ಕಾಂಗ್ರೆಸ್ ಅಧ್ಯಕ್ಷ

ಇವರೂ ನಕ್ಸಲ್ ಬೆಂಬಲಿಗರಿರಬಹುದೇ?

"ದಂಗೆಗಳನ್ನು ನಿಯಂತ್ರಿಸಬೇಕೆಂದರೆ ಜನರಿಂದ ನಿಮಗೆ ಮಾಹಿತಿಗಳು ಹರಿದುಬರಬೇಕು. ಜನರೊಂದಿಗೆ ನೀವು ಸ್ನೇಹ ಸಂಬಂಧಗಳನ್ನು ಇಟ್ಟುಕೊಳ್ಳದೆ, ಅವರಿಗೆ ಆಹಾರ ಸರಬರಾಜನ್ನು ಕಡಿತ ಮಾಡುವಂಥ ಕಿರುಕುಳಗಳಿಗೆ ಮುಂದಾದರೆ ನೀವು ಮತ್ತಷ್ಟು ಮಾವೋವಾದಿಗಳನ್ನು ಸೃಷ್ಟಿಸುತ್ತೀರಿ."

- ಬ್ರಿಗೇಡಿಯರ್ ಬಿ.ಕೆ. ಪೊನ್ವಾರ್, ನಕ್ಸಲ್ ನಿಗ್ರಹ ಪಡೆಗಳ ಪ್ರಧಾನ ತರಬೇತುದಾರ

ಆದರೆ ಕಾಂಗ್ರೆಸ್ಸಿನಲ್ಲಿ ಇರುವವರೆಲ್ಲಾ MOUವಾದಿಗಳೇ!

"ಪ್ರತಿಯೊಬ್ಬ ಆದಿವಾಸಿಯೂ ಮಾವೋವಾದಿಯಲ್ಲ, ಪ್ರತಿಯೊಬ್ಬ ಮಾವೋವಾದಿಯೂ ಆದಿವಾಸಿಯಲ್ಲ."

- ಮನೀಶ್ ತಿವಾರಿ, ಕಾಂಗ್ರೆಸ್ ಮುಖಂಡ

YOU SAID IT!

"ವೀರಶೈವ ಧರ್ಮ ಹಿಂದೂ ಧರ್ಮವಲ್ಲ, ವೀರಶೈವ ಮತ್ತು ಹಿಂದೂ ಧರ್ಮದ ನಡುವೆ ಸಾಕಷ್ಟು ವೈರುಧ್ಯಗಳಿವೆ. ವೀರಶೈವ ಧರ್ಮದ ಮೂಲ ಆಶಯ ಜನಸಾಮಾನ್ಯರ ಹಿತ. ಆದರೆ ಹಿಂದೂ ಧರ್ಮ ಮೂಢನಂಬಿಕೆಗಳನ್ನು ಪ್ರೋತ್ಸಾಹಿಸುತ್ತಾ ಬಂದಿದೆ. ಅಂದು ವೇದಗಳನ್ನು ತಿರುಚಿದವರೇ ಇಂದು ವೀರಶೈವ ಧರ್ಮದ ಸಾರವನ್ನು ತಿರುಚಲು ಹೊರಟಿದ್ದಾರೆ. ಇಂಥವರಿಗೆ ಮಠಮಾನ್ಯಗಳು ಆಶ್ರಯ ಕೊಡಬಾರದು."

- ರಾಜ್ಯಪಾಲ ಭಾರದ್ವಾಜ್

...ಬ್ರಾಹ್ಮಣರೂ ಗೋಮಾಂಸ ಸೇವಿಸುತ್ತಿದ್ದರು...



ಕಂಡಹಾಗೆ

ಗೌರಿ ಲಂಕೇಶ್
editorlankesh@gmail.com

...ಲೀವರ ಹೆಸರು ಡಿ.ಎನ್. ಝಾ. 'ಡಿ' ಅಂದರೆ ...ಂದ್ರ (ಅಂದರೆ ಬ್ರಾಹ್ಮಣರಲ್ಲೇ ಅತಿ ಶ್ರೇಷ್ಠರಾದವರು ...ರು). 'ಎನ್' ಅಂದರೆ ನಾರಾಯಣ. ಇನ್ನು ಝಾ ...ದರೆ ಬಿಹಾರ ರಾಜ್ಯದ ಅಪ್ಪಟ ಸಂಪ್ರದಾಯಸ್ಥ ಮೈಥಿಲಿ ...ಹ್ಮಣರು ಎಂದೇ ಅರ್ಥ.

...ಇಂತಹ ಬ್ರಾಹ್ಮಣರಲ್ಲೇ ಶ್ರೇಷ್ಠರಾದ, ಸಂಪ್ರದಾಯಸ್ಥ ...ಹ್ಮಣರಾದ ಝಾ ಅವರು `Myth of the holy ...' (ಗೋವು ಪವಿತ್ರ ಎಂಬ ಮಿಥ್ಯೆ) ಎಂಬ ಪುಸ್ತಕವನ್ನು ...ದಿದ್ದಾರಲ್ಲದೆ, ಆ ಕೃತಿಯಲ್ಲಿ ಆರ್ಯನ್ನರ ಕಾಲದಿಂದ ...ಾರು 19ನೇ ಶತಮಾನದತನಕ ಬ್ರಾಹ್ಮಣರೂ ಸೇರಿದಂತೆ ...ಧ ವರ್ಗಗಳ ಹಿಂದೂಗಳೂ ಗೋಮಾಂಸ ...ಸುತ್ತಿದ್ದರು ಎಂದು ಹೇಳಿದ್ದಾರೆ.


ಅದಕ್ಕಿಂತಲೂ ಮುಖ್ಯವಾಗಿ ಗೋಮಾಂಸ ಸೇವನೆ ...ಸಲ್ಮಾನರ ಆಗಮನದೊಂದಿಗೆ ಭಾರತಕ್ಕೆ ಕಾಲಿಟ್ಟ ...ನೆ ಅಲ್ಲ, ಬದಲಾಗಿ ಅದಕ್ಕಿಂತಲೂ ಬಹಳ ಹಿಂದಿನ ...ದಿಂದಲೇ ಭಾರತದ ಋಷಿಗಳು ಮತ್ತು ಬ್ರಾಹ್ಮಣರು ...ವುಗಳನ್ನು ಯಜ್ಞಗಳಲ್ಲಿ ಬಲಿಕೊಡುತ್ತಿದ್ದರಲ್ಲದೆ ಆನಂತರ ...ಗಳ ಮಾಂಸವನ್ನು ಸೇವಿಸುತ್ತಿದ್ದರು ಎಂದು ವೇದ, ...ನಿಷತ್ ಇತ್ಯಾದಿ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ...ತುಪಡಿಸಿದ್ದಾರೆ. ಹಿಂದೂಗಳಲ್ಲದೆ ಬೌದ್ಧರು ಮತ್ತು ...ರೂ (ಮಹಾವೀರ ಸೇರಿದಂತೆ) ಮಾಂಸ ಸೇವಿಸುತ್ತಿದ್ದರು ...ದೂ ಹೇಳಿದ್ದಾರೆ.

ಝಾ ಅವರು ನೀಡಿರುವ ಮಾಹಿತಿಯಲ್ಲಿ ಹಲವು ...ದಾಹರಣೆಗಳನ್ನು ನೋಡಿ:

* ...ವೇದಕಾಲದ ದೇವತೆಗಳಲ್ಲಿ ಅತ್ಯಂತ ಬಲಿಷ್ಠನೂ, ...ಶಾಲಿಯೂ, ದೈತ್ಯನೂ ಆಗಿದ್ದ ಇಂದ್ರನ ಮನತಣಿಸಲು ...ಗಳ ಮಾಂಸವನ್ನು ಬೇಯಿಸಿ ಉಣಬಡಿಸಲಾಗುತ್ತಿತ್ತು ...ು ಋಗ್ವೇದದಲ್ಲಿ ಹಲವಾರು ಬಾರಿ ಪ್ರಸ್ತಾಪಿಸಲಾಗಿದೆ. ...ಂದು ಸಂದರ್ಭದಲ್ಲಿ ಇಂದ್ರನೇ "ಅವರು ನನಗಾಗಿ ...ವತ್ತೈದು ಎತ್ತುಗಳನ್ನು ಬೇಯಿಸುತ್ತಾರೆ" ಎಂದು ...ುತ್ತಾನೆ.
* ಅನೇಕ ವೇದಗ್ರಂಥಗಳಲ್ಲಿ, ವಿಶೇಷವಾಗಿ 'ಶತಪಥ ಬ್ರಾಹ್ಮಣ'ದಲ್ಲಿ ಮಾಂಸವೇ ಅತ್ಯುತ್ತಮವಾದ ಆಹಾರ ...ಎಂದು ಹೇಳಲಾಗಿದೆ.
* ಅಂತ್ಯಸಂಸ್ಕಾರವನ್ನು ಕುರಿತು ಋಗ್ವೇದದಲ್ಲಿ ಶವವನ್ನು ಮುಚ್ಚಲು ಗೋವಿನ ಚರ್ಮ ಮತ್ತು ದಪ್ಪನೆಯ ಗೋವಿನ ಕೊಬ್ಬನ್ನು ಉಪಯೋಗಿಸಲಾಗುತ್ತಿತ್ತು ಎಂದು ಹೇಳಲಾಗಿದೆ. ಅಥರ್ವಣ ವೇದದಲ್ಲಿ ಮೃತಪಟ್ಟ ವ್ಯಕ್ತಿಯು ಅನ್ಯಲೋಕಕ್ಕೆ ಪಯಣಿಸಲು ಅನುಕೂಲವಾಗುವಂತೆ ಮೃತನ ಜೊತೆಯಲ್ಲಿ ಎತ್ತನ್ನೂ ದಹನ ಮಾಡುತ್ತಿದ್ದದ್ದು ಉಲ್ಲೇಖವಾಗಿದೆ. ಶವಸಂಸ್ಕಾರದ ನಂತರದ ಶ್ರಾದ್ಧದಲ್ಲೂ ಗೋಮಾಂಸವೇ ಪ್ರಮುಖ ಆಹಾರವಾಗಿತ್ತು.
* ಶ್ರಾದ್ಧ ಕರ್ಮಗಳಲ್ಲಿ ಬ್ರಾಹ್ಮಣರು ಗೋಮಾಂಸವನ್ನೇ ಅಪೇಕ್ಷಿಸುತ್ತಿದ್ದದ್ದನ್ನು ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ.
* ಜಾನುವಾರುಗಳ ಚರ್ಮವನ್ನು ಹಲವಾರು ರೀತಿಯಲ್ಲಿ ಬಳಸಲಾಗುತ್ತಿತ್ತು. ಬಿಲ್ಲಿನ ಹೆಡೆಯನ್ನು ತಯಾರಿಸಲು ಜಾನುವಾರುಗಳ ಚರ್ಮವನ್ನು ಬಳಸುತ್ತಿದ್ದರು. ರಥದ ವಿವಿಧ ಭಾಗಗಳನ್ನು ಚರ್ಮದ ಪಟ್ಟಿಗಳಿಂದ ಬಿಗಿದು ...ಟ್ಟಲಾಗುತ್ತಿತ್ತು. ಬಾಣಗಳನ್ನು ಭರ್ಜಿಗೆ ಕಟ್ಟಲೂ ...ಆ ಪಟ್ಟಿಗಳನ್ನು ಉಪಯೋಗಿಸಲಾಗುತ್ತಿತ್ತು. ಪ್ರಾಣಿ...ಗಳನ್ನು ಓಡಿಸಲು ಬಳಸುತ್ತಿದ್ದ ಚಾವಟಿಯ ತಯಾರಿಕೆ...ಯಲ್ಲಿ ಗೋವಿನ ಚರ್ಮ ಅಥವಾ ಬಾಲವನ್ನು ಉಪಯೋಗಿಸಲಾಗುತ್ತಿತ್ತು.
* ಮನುಸ್ಮೃತಿಯಲ್ಲಿ ಮುಳ್ಳಹಂದಿ, ಘೇಂಡಾಮೃಗ, ಆಮೆ ಇತ್ಯಾದಿ ಪ್ರಾಣಿಗಳನ್ನು ಸೇವನಾ ಯೋಗ್ಯವಲ್ಲದ ಪ್ರಾಣಿಗಳೆಂದು ನಮೂದಿಸಲಾಗಿದೆಯಾದರೂ ಆ ಪಟ್ಟಿಯಲ್ಲಿ ಗೋವಿನ ಪ್ರಸ್ತಾಪವೇ ಇಲ್ಲ.
* ಮಹಾಭಾರತದಲ್ಲಿ ಯುದಿಷ್ಠಿರನು ಹಿಂಸೆಯನ್ನು ಖಂಡಿಸುತ್ತಿದ್ದನಾದರೂ ತನ್ನ ಸಹೋದರರ ಮತ್ತು ದ್ರೌಪದಿಯ ಆಹಾರಕ್ಕಾಗಿ ಹಾಗೂ ಅರಣ್ಯದಲ್ಲಿನ ಬ್ರಾಹ್ಮಣರ ಭೋಜನಕ್ಕಾಗಿ ಯಾವಾಗಲೂ ರುರು ಎಂಬ ಜಾತಿಯ ಜಿಂಕೆಯನ್ನು, ಕೃಷ್ಣಮೃಗವನ್ನು ಬೇಟೆಯಾಡುತ್ತಿದ್ದನೆಂದು ಅರಣ್ಯಪರ್ವದಲ್ಲಿ ಹೇಳಲಾಗಿದೆ.
* ಅದೇ ಅರಣ್ಯಪರ್ವದಲ್ಲಿ ರಾಜಾರತಿದೇವನ ಅರಮನೆಯ ಅಡುಗೆ ಮನೆಯಲ್ಲಿ ಪ್ರತಿದಿನ ಎರಡು ಸಾವಿರ ಗೋವುಗಳನ್ನು ಕೊಲ್ಲಲಾಗುತ್ತಿತ್ತೆಂದೂ, ರಾಜನು ಬ್ರಾಹ್ಮಣರಿಗೆ ಆಹಾರಧಾನ್ಯಗಳ ಜೊತೆಗೆ ಗೋಮಾಂಸವನ್ನೂ ನೀಡುತ್ತಿದ್ದನೆಂದೂ ಹೇಳಲಾಗಿದೆ.
* ಮಹಾಭಾರತದಂತೆಯೇ ವಾಲ್ಮೀಕಿಯ ರಾಮಾಯಣ ಮಹಾಕಾವ್ಯದಲ್ಲೂ ಪ್ರಾಣಿಹತ್ಯೆಯ ಬಗ್ಗೆ ಆಹಾರಕ್ಕಾಗಿ, ಯಜ್ಞಗಳಲ್ಲಿ ಜಾನುವಾರುಗಳನ್ನು ಬಲಿ ನೀಡುವುದರ ಬಗ್ಗೆ ಅಸಂಖ್ಯಾತ ಪ್ರಸ್ತಾಪಗಳಿವೆ.
* ಮಾಂಸ ಸೇವನೆ ಬಗ್ಗೆ ಸೀತಾಮಾತೆಗೆ ಇದ್ದ ಒಲವು ವಿವಿಧ ಅಧ್ಯಾಯಗಳಲ್ಲಿ ಪ್ರಸ್ತಾಪವಾಗಿದೆ. ಗಂಗೆಯನ್ನು ದಾಟುವ ಸಂದರ್ಭದಲ್ಲಿ ಸೀತೆ ತಾನು ತನ್ನ ಪತಿಯೊಡನೆ ವನವಾಸದಿಂದ ಹಿಂದಿರುಗುವಾಗ ಮಾಂಸದೊಂದಿಗೆ ತಯಾರಿಸಿದ ಅನ್ನವನ್ನೂ, ಸಾವಿರಾರು ಕೊಡಗಳಷ್ಟು ಮದಿರೆಯನ್ನೂ ಗಂಗೆಗೆ ಅರ್ಪಿಸುವುದಾಗಿ ಹೇಳುತ್ತಾಳೆ. ಹಾಗೆಯೇ ಯಮುನಾ ನದಿಯನ್ನು ದಾಟುವಾಗ ತನ್ನ ಪತಿಯು ತನ್ನ ಪ್ರತಿಜ್ಞೆಯನ್ನು ಸಾರ್ಥಕಗೊಳಿಸಿದಲ್ಲಿ ತಾನು ಸಾವಿರ ಗೋವುಗಳು ಮತ್ತು ಸಾವಿರಾರು ಕೊಡಗಳಷ್ಟು ಮದಿರೆಯಿಂದ ಯಮುನೆಯನ್ನು ಪೂಜಿಸುತ್ತೇನೆಂದು ಹೇಳುತ್ತಾಳೆ.
* ಅದೇ ರಾಮಾಯಣದಲ್ಲಿ ಭಾರದ್ವಾಜ ಮುನಿಯು ಭರತನ ಸೇನಾಪಡೆಗೆ ಮಾಂಸ ಮತ್ತು ದ್ರಾಕ್ಷಾರಸವನ್ನು ಒದಗಿಸುವ ಮೂಲಕ ಆತಿಥ್ಯ ನೀಡುತ್ತಾನಲ್ಲದೆ, ರಾಮನನ್ನು ಸ್ವಾಗತಿಸುವ ಸಂದರ್ಭದಲ್ಲಿ ಕೊಬ್ಬಿದ ಕರುವನ್ನು ಬಲಿ ನೀಡುವುದು ಉಲ್ಲೇಖವಾಗಿದೆ.
* ಒಂಟೆ ಮತ್ತು ನಾಯಿ ಈ ಎರಡು ಪ್ರಾಣಿಗಳ ಹೊರತಾಗಿ ಗೋವು ಮತ್ತು ಹಾವು ಸೇರಿದಂತೆ ಎಲ್ಲಾ 'ಹಿಂದೂ'ಗಳು ಹಲವಾರು ಪ್ರಾಣಿಗಳ ಮಾಂಸ ತಿನ್ನುತ್ತಿದ್ದರು.
* ಮಹಾಪರಿನಿಬ್ಬಾಣ ಸೂತ್ರದಲ್ಲಿ ದಾಖಲಿಸಿರುವ ಬುದ್ಧನ ಕಡೆಯ ಭೋಜನದ ವರ್ಣನೆಯಲ್ಲಿ ಕುಂದ ಎಂಬ ಅಕ್ಕಸಾಲಿಗನ ಆತಿಥ್ಯ ಸ್ವೀಕರಿಸುವ ಬುದ್ಧ ಪುಷ್ಕಳವಾದ, ಮೆದುವಾದ ಕರಡಿ ಮಾಂಸವನ್ನು ಸೇವಿಸಿದ್ದನೆಂದು ಹೇಳಲಾಗಿದೆ. ಹಾಗೆಯೇ ಬುದ್ಧನು ಹಂದಿ ಮಾಂಸವನ್ನು ಸೇವಿಸಿದ ಬಗ್ಗೆ ಪುರಾವೆಗಳೂ ಇವೆ. ಬುದ್ಧನು ಗೋಮಾಂಸವನ್ನೂ ಸೇವಿಸುತ್ತಿದ್ದದ್ದು ನಿರ್ವಿವಾದ ಅಂತವಾಗಿದೆ.
* ಜೈನರ ಭಗವತಿ ಸೂತ್ರದಲ್ಲಿ ಒಮ್ಮೆ ಮಹಾವೀರನು ತನ್ನ ಶಿಷ್ಯರನ್ನು ಕರೆದು ತನಗಾಗಿ ಭೋಜನ ತಯಾರಿಸುವವರಿಗೆ ಅಡುಗೆಯಲ್ಲಿ ಪಾರಿವಾಳವನ್ನು ಬಳಸದೆ ಅದರ ಬದಲಾಗಿ ಆಗತಾನೇ ಬೆಕ್ಕಿನ ಕೈಗೆ ಸಿಕ್ಕು ಮೃತಪಟ್ಟಿದ್ದ ಎರಡು ಎಳೆಯ ಹುಂಜದ ಮಾಂಸವನ್ನು (ಕುಕ್ಕುಟ ಮಾಂಸ) ಬಳಸುವಂತೆ ಆಜ್ಞಾಪಿಸುತ್ತಾನೆ.
* ಗೋವನ್ನು ಪ್ರತಿನಿಧಿಸುವ ಯಾವುದೇ ದೇವತೆಯಾಗಲಿ, ಗೋವಿನ ಗೌರವಾರ್ಥ ದೇವಾಲಯವಾಗಲೀ ಎಲ್ಲಿಯೂ ಕಂಡುಬರುವುದಿಲ್ಲ. ಆದಾಗ್ಯೂ ಗೋವನ್ನು ಪೂಜ್ಯ ಭಾವನೆಯಿಂದ ನೋಡುವ ಪರಂಪರೆಯನ್ನು, ಆಧುನಿಕ ಕಾಲಘಟ್ಟದಲ್ಲಿ ಅಸ್ತಿತ್ವದಲ್ಲೇ ಇಲ್ಲದ 'ಅಖಂಡ ಹಿಂದೂ ಧರ್ಮ'ದ ಪ್ರಮುಖ ಲಕ್ಷಣವನ್ನಾಗಿ ಹಿಂದೂತ್ವವಾದಿಗಳು ಪ್ರಚಾರ ಮಾಡುತ್ತಿದ್ದಾರೆ....

..... ಇಂತಹ ಹಲವಾರು ಕುತೂಹಲಕಾರಿ ಸಾಕ್ಷ್ಯಗಳನ್ನು ಝಾ ತಮ್ಮ ಪುಸ್ತಕದಲ್ಲಿ ನೀಡಿದ್ದಾರೆ. ಆದರೆ ಇದನ್ನು ಹಿಂದೂತ್ವವಾದಿಗಳು ಸಹಿಸುತ್ತಾರೆಯೇ? ಆದ್ದರಿಂದ ಅವರಲ್ಲಿ ಹಲವರು ಝಾರವರನ್ನು ಬೆದರಿಸಲಾರಂಭಿಸಿದ್ದರಲ್ಲದೇ ಹಲವರು ಈ ಪುಸ್ತಕ ಮಾರಾಟವಾಗದಂತೆ ತಡೆಯಲು ನ್ಯಾಯಾಲಯದ ಮೆಟ್ಟಿಲುಗಳನ್ನು ಏರಿದ್ದರು. ಅದನ್ನೆಲ್ಲ ಝಾ ಎದುರಿಸಿ ಈ ಪುಸ್ತಕದ ವಿರುದ್ಧ ಯಾವ ಅಡ್ಡಿಯೂ ಬಾರದಂತೆ ನೋಡಿಕೊಂಡರು.

ಆದರೆ ಝಾರಂತೆ ಹಿಂದೂತ್ವವಾದಿಗಳನ್ನು ಎದುರಿಸುವ ಧೈರ್ಯ ಎಷ್ಟು ಜನಕ್ಕಿರುತ್ತದೆ? ಹಾಗೆ ಹೆದರಿದವರಲ್ಲಿ ಈ ಪುಸ್ತಕವನ್ನು ಪ್ರಕಟಿಸಲು ಮುಂದಾಗಿದ್ದ ಪ್ರಕಾಶಕರೂ ಒಬ್ಬರು. ಆಗ ವಿಧಿಇಲ್ಲದೆ ಇದನ್ನು ಇಂಗ್ಲೆಂಡಿನಲ್ಲಿ ಮೊದಲ ಬಾರಿ ಪ್ರಕಟಿಸಲಾಯಿತು. ಕಳೆದ ವರ್ಷ ಎಸ್. ಆನಂದ್ ಎಂಬ ಖ್ಯಾತ ಲೇಖಕ ಮತ್ತು ಪತ್ರಕರ್ತ ತಮ್ಮ ದೆಹಲಿಯ ಮೂಲದ 'ನವಯಾನ' ಎಂಬ ಪ್ರಕಾಶನ ಸಂಸ್ಥೆಯಿಂದ ಇದನ್ನು ಹೊರತಂದು ಭಾರತದಲ್ಲೂ ಲಭ್ಯವಾಗುವಂತೆ ನೋಡಿಕೊಂಡರು. ಈಗ ಝಾ ಮತ್ತು ಆನಂದರ ಅನುಮತಿ ಪಡೆದು ಇದನ್ನು ನಮ್ಮ ಲಂಕೇಶ್ ಪ್ರಕಾಶನ ಕನ್ನಡಕ್ಕೆ ತರುತ್ತಿದೆ.



ಈ ಪುಸ್ತಕದಿಂದಾಗಿ ಹಿಂದೂಗಳು ಮಾತ್ರವಲ್ಲ ಜೈನರೂ ಝಾ ವಿರುದ್ಧ ಕುಪಿತಗೊಂಡರು. ಅವರು ತಕರಾರೆತ್ತಿದಾಗ ಝಾರವರು "ನಾನೇನೂ ಹೊಸದನ್ನು ಹೇಳಿಲ್ಲ, ನಿಮ್ಮ ಧರ್ಮ ಗ್ರಂಥಗಳಲ್ಲಿರುವುದನ್ನೇ ಹೇಳಿದ್ದೇನೆ. ಆ ಗ್ರಂಥಗಳನ್ನು ನಾನು ಕೊಂಡದ್ದೂ ಅಪ್ಪಟ ಜೈನ ಧಾರ್ಮಿಕರಾದ ಮೋತಿಲಾಲ್ ಬನಾರಸಿದಾಸ್‌ರಂತಹ ಪುಸ್ತಕ ವ್ಯಾಪಾರಿಗಳಿಂದ" ಎಂದು ಹೇಳಿದರಲ್ಲದೆ "ನನ್ನ ಪುಸ್ತಕವನ್ನು ಓದುವ ಮುನ್ನ ನೀವು ನಿಮ್ಮ ಧಾರ್ಮಿಕ ಗ್ರಂಥಗಳನ್ನೇ ಸರಿಯಾಗಿ ಓದಿ" ಎಂದು ಸೂಚಿಸಿ ಅವರನ್ನೆಲ್ಲ ಕಳುಹಿಸಿದರು.

"ಭಾರತೀಯ ಸಮಾಜ ಇವತ್ತು ಎಂತಹ ಸಂಧಿಕಾಲದಲ್ಲಿದೆ ಅಂದರೆ ಇತಿಹಾಸಜ್ಞರು ಮುಖ್ಯ ಪಾತ್ರ ವಹಿಸಿ ಮೂಢನಂಬಿಕೆಗಳನ್ನು ಮತ್ತು ವಿಚಾರಹೀನತೆಯನ್ನು ತೊಡದುಹಾಕಬೇಕು" ಎಂದೇ ನಂಬಿರುವ ಝಾ ಪ್ರಕಾರ 19ನೇ ಶತಮಾನದಲ್ಲಿ ದಯಾನಂದ ಸರಸ್ವತಿ ಅವರು ಗೋರಕ್ಷಣಾ ಆಂದೋಲನವನ್ನು ಪ್ರಾರಂಭಿಸುವ ತನಕ ಗೋವನ್ನು ಪೂಜ್ಯ ಎಂದಾಗಲಿ, ಪವಿತ್ರ ಎಂದಾಗಲಿ ಬಹಳಷ್ಟು ಜನ ನಂಬಿರಲಿಲ್ಲ. ಆದರೆ ಅಂದಿನಿಂದ ಇಂದಿನತನಕ ಗೋವಿನ ಬಗ್ಗೆ ಧಾರ್ಮಿಕ ಮೂಢನಂಬಿಕೆಯನ್ನು ಹೆಚ್ಚಿಸುವಲ್ಲಿ ಹಿಂದೂತ್ವವಾದಿಗಳು ಎಷ್ಟು ಸಫಲರಾಗಿದ್ದಾರೆಂದರೆ ಇವತ್ತು ಬಹಳಷ್ಟು ಜನ ಗೋವನ್ನು ಪೂಜ್ಯ ಎಂದೇ ಭಾವಿಸುತ್ತಾರೆ.

"ಇದೊಂದು ಸಾಂಸ್ಕೃತಿಕ ಯುದ್ಧ. ಈ ಯುದ್ಧದಲ್ಲಿ ಗೋವು ಪೂಜ್ಯ/ಪವಿತ್ರ ಎಂಬ ಮೂಢನಂಬಿಕೆಯ ವಿರುದ್ಧ ಇತಿಹಾಸಕಾರರು ಸಾಕ್ಷ್ಯಗಳನ್ನು ನೀಡಬೇಕು. ನಾನು ಅಂತಹ ಸಾಕ್ಷ್ಯಗಳನ್ನು ನೀಡಿದ್ದೇನೆ. ನಿಮ್ಮ ಬಳಿ ಇದಕ್ಕೆ ವಿರುದ್ಧವಾದ ಸಾಕ್ಷ್ಯಗಳಿದ್ದರೆ ನೀಡಿ ಎಂದು ಹಿಂದೂತ್ವವಾದಿಗಳಿಗೆ ಮತ್ತು ಇತರರಿಗೆ ಹೇಳಿದ್ದೇನೆ. ಆದರೆ ಅವರೆಲ್ಲ ಎಂತಹ ಅಜ್ಞಾನಿಗಳೆಂದರೆ ಅವರು ಆ ಧಾರ್ಮಿಕ ಗ್ರಂಥಗಳನ್ನು ಓದುವುದಿರಲಿ, ಅವುಗಳ ಹೆಸರುಗಳನ್ನೂ ಅವರು ಕೇಳಿಯೂ ಇಲ್ಲ. ಅವರದ್ದು ಅಂಧ ನಂಬಿಕೆಯಾದರೆ ನನ್ನದು ದೃಢವಾದ ಸಾಕ್ಷ್ಯ. ಹೀಗಿರುವಾಗಲೂ ಅವರು ನನ್ನ ಪುಸ್ತಕದ ಮೇಲೆ ನಿರ್ಬಂಧ ಹೇರಬೇಕು ಎನ್ನುವುದಾದರೆ ಮೊದಲು ಅವರು ವೇದ, ಉಪನಿಷತ್‌ಗಳು, ಸೂತ್ರ ಮತ್ತು ಮಹಾಭಾರತ ಹಾಗೂ ರಾಮಾಯಣದಂತಹ ಮಹಾಕಾವ್ಯಗಳ ಮೇಲೂ ನಿರ್ಬಂಧವನ್ನು ಹೇರಿಸಲಿ" ಎಂದು ಝಾ ಸವಾಲು ಹಾಕುತ್ತಾರೆ.

ಈಗ ಝಾ ಅವರಿಗೆ 70 ವರ್ಷ ವಯಸ್ಸಾಗಿದ್ದರೂ ಅವರು ನಿವೃತ್ತಿಜೀವನ ನಡೆಸುತ್ತಿಲ್ಲ. ಮೊದಲಿನಿಂದಲೂ ಇತಿಹಾಸವನ್ನು ತಿರುಚುವ ಹಿಂದೂತ್ವವಾದಿಗಳನ್ನು ವಿರೋಧಿಸುತ್ತಲೇ ಬಂದಿರುವ ಝಾ ಈಗಲೂ ಅದನ್ನು ಮುಂದುವರೆಸುತ್ತಲೇ ಇದ್ದಾರೆ.

ಇಂತಹ ಝಾ ಅವರ ಪುಸ್ತಕವನ್ನು ಕನ್ನಡದಲ್ಲಿ ಪ್ರಕಟಿಸುತ್ತಿರುವುದು ನಮಗೆ ಹೆಮ್ಮೆಯ ವಿಚಾರವಾಗಿದೆ.

(ಅಂದಹಾಗೆ ಕಳೆದ ವಾರ 'ಗೋವು ಪವಿತ್ರ ಎಂಬ ಮಿಥ್ಯೆ' ಪುಸ್ತಕ ಬಿಡುಗಡೆ ಕಾರ್ಯಕ್ರಮದ ಆಹ್ವಾನದಲ್ಲಿ ತಪ್ಪಾಗಿ 23, ಶನಿವಾರ ಎಂದು ಪ್ರಕಟಿಸಲಾಗಿತ್ತು. ಸರಿಯಾದದ್ದು ಶುಕ್ರವಾರ ಏಪ್ರಿಲ್ 23, ದಯವಿಟ್ಟು ಬನ್ನಿ) ●



ಪ್ಯಾಲಿಸ್ಟೇನಿಯನ್ನರ ಸಾಮೂಹಿಕ ವಲಸೆ

ಪ್ಯಾರಿಸ್‌ನಲ್ಲಿ ನರಹಂತಕನ ಹೆಸರಿನ ಉದ್ಯಾನ!


ಒಬ್ಬ ಯಹೂದಿಯ ಹೆಸರನ್ನೇ ತನ್ನ ಉದ್ಯಾನಕ್ಕೆ ಇಡಬೇಕೆಂದು ಪ್ಯಾರಿಸ್ ಮುನಿಸಿಪಾಲಿಟಿಗೆ ಬಲವಾಗಿ ಅನ್ನಿಸಿದ್ದರೆ ಬೇಕಾದಷ್ಟು ಜನನಾಯಕರು ಸಿಗುತ್ತಿದ್ದರು. ಕೇವಲ ಇಸ್ರೇಲ್‌ನಲ್ಲಿ ಮಾತ್ರವಲ್ಲದೇ ಅರಬ್ಬರ ನಾಡಿನಲ್ಲೂ, ಪ್ರಪಂಚದ ಇನ್ನಿತರ ಪ್ರದೇಶಗಳಲ್ಲೂ ಜನ ಬಹಳವಾಗಿ ಗೌರವಿಸುವ ಶಾಹಕ್ ಎಂಬ ಬುದ್ಧಿಜೀವಿಯಿರಲಿಲ್ಲವೆ? ಜಗತ್ತಿನ ಕಣ್ಣನ್ನೇ ತೆರೆಸಿದ ಜಗದ್ವಿಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಇರಲಿಲ್ಲವೆ? ಆದರೆ ಇವರನ್ನೆಲ್ಲ ಬಿಟ್ಟು ಅರಬ್ಬರ ಮಾರಣಹೋಮ ನಡೆಸಿದ ನರಹಂತಕ ಬೆನ್ ಗುರಿಯನ್ ಹೆಸರನ್ನು ಇಡುತ್ತಿದೆ.

ವಿಮಾನನಿಲ್ದಾಣ, ಬಸ್‌ನಿಲ್ದಾಣ, ಉದ್ಯಾನವನ, ರಸ್ತೆ, ವೃತ್ತ, ಸೇತುವೆ ಮುಂತಾದ ಸಾರ್ವಜನಿಕ ಸ್ಥಳಗಳಿಗೆ ಚರಿತ್ರೆಯಲ್ಲಿ ಮನುಕುಲದ ಶ್ರೇಯೋಭಿವೃದ್ಧಿಗೆ ಅಪಾರವಾಗಿ ಶ್ರಮಿಸಿದ ಮಹನೀಯರ ಹೆಸರನ್ನು ಇಡುವುದು ಸಾಮಾನ್ಯ. ಆ ಮಹಾತ್ಮರು ಮಾನವಕೋಟಿಯ ಸರ್ವತೋಮುಖ ಅಭಿವೃದ್ಧಿಗಾಗಿ, ಶಾಂತಿ-ಸಹಬಾಳ್ವೆವಾಗಿ ಪಟ್ಟ ಪರಿಶ್ರಮವನ್ನು ನೆನೆದು ಅವರ ಉದಾತ್ತ ಧ್ಯೇಯಗಳನ್ನು ಎಲ್ಲರೂ ಮೈಗೂಡಿಸಿಕೊಳ್ಳಲಿ ಎಂಬ ಆಶಯವೇ ಅದರ ಹಿಂದಿರುತ್ತದೆ. ಅವರು ತೋರಿದ ಮಾನವ ಪ್ರೀತಿಯೇ ನಮ್ಮೆಲ್ಲರ ಬದುಕಿನ ತಳಹದಿಯಾಗಲಿ ಎಂಬ ಉದ್ದೇಶವಿರುತ್ತದೆ. ಆದರೆ, ಮಕ್ಕಳುಮರಿಗಳೆನ್ನದೇ, ವೃದ್ಧರು-ಮಹಿಳೆಯರೆನ್ನದೇ ಸಾವಿರಾರು ಜನರನ್ನು ನಿರ್ದಾಕ್ಷಿಣ್ಯವಾಗಿ ಕೊಂದುಹಾಕಿದ, ಜೀವನದುದ್ದಕ್ಕೂ ಜನಾಂಗೀಯ ದ್ವೇಷವನ್ನು ಕಾರುತ್ತಾ ಜೊತೆಗೂಡಿ ಸಹಬಾಳ್ವೆ ನಡೆಸಬೇಕಿದ್ದ ಎರಡು ಸಮುದಾಯಗಳು ಬರೊಬ್ಬರಿ ಅರ್ಧ ಶತಮಾನಗಳ ಕಾಲ ಪರಸ್ಪರ ದ್ವೇಷದಿಂದ ಕಚ್ಚಾಡುವುದಕ್ಕೆ ಕಾರಣನಾದ ರಕ್ತಪಿಪಾಸು ನರಹಂತಕನೊಬ್ಬನ ಹೆಸರನ್ನು ಸಾರ್ವಜನಿಕ ಸ್ಥಳಕ್ಕೆ ಇಟ್ಟರೆ ಹೇಗಿರುತ್ತದೆ? ಅಂತಹ ಅವಿವೇಕದ ನಿರ್ಧಾರವನ್ನು ಪ್ಯಾರಿಸ್ ನಗರದ ಮುನಿಸಿಪಾಲಿಟಿ ಮಾಡಿದೆ. ತನ್ನ ಪ್ರತಿಷ್ಠಿತ 'ಬೆನ್-ಗುರಿಯನ್ ಉದ್ಯಾನ'ವನ್ನು ನಿನ್ನೆ ಏಪ್ರಿಲ್ 14ರಂದು ಸಾರ್ವಜನಿಕರಿಗಾಗಿ ತೆರೆದಿದೆ. ಬೆನ್-ಗುರಿಯನ್‌ನ 'ಮಹತ್ಸಾಧನೆಗಳನ್ನು' ಒಮ್ಮೆ ನೋಡಿದರೆ ಪ್ಯಾರಿಸ್ ಮುನಿಸಿಪಾಲಿಟಿಯ ಈ ಅವಿವೇಕ ಅರ್ಥವಾಗುತ್ತದೆ.

ಬೆನ್-ಗುರಿಯನ್‌ನ ಪೂರ್ಣ ಹೆಸರು ಡೇವಿಡ್ ಬೆನ್-ಗುರಿಯನ್. ಮಧ್ಯಪ್ರಾಚ್ಯದಲ್ಲಿ ಅಸ್ತಿತ್ವದಲ್ಲೇ ಇರದಿದ್ದ ಇಸ್ರೇಲ್ ಎಂಬ ಹೊಸ ರಕ್ಕಸ ರಾಷ್ಟ್ರವನ್ನು ಕಟ್ಟಿದಾತ; ದ್ವೇಷ, ಅಸೂಯೆ, ವೈರತ್ವ ಹಾಗೂ ನರಮೇಧಗಳ ಬುನಾದಿಯ ಮೇಲೆ. ನಂತರ ಅದಕ್ಕೆ ಪ್ರಪ್ರಥಮ ಪ್ರಧಾನಿಯಾಗಿದ್ದಾತ.


ಬೆನ್‌ಗುರಿಯನ್

ತನ್ನ ಯೌವನದ ದಿನಗಳಲ್ಲಿ ಕಮ್ಯೂನಿಸ್ಟ್ ಸಿದ್ಧಾಂತಗಳಿಂದ ಪ್ರೇರೇಪಿತನಾಗಿ ವಾರ್ಸಾ ವಿಶ್ವವಿದ್ಯಾನಿಲಯದ ಯಹೂದಿ ಕಾರ್ಮಿಕ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಬೆನ್ ಗುರಿಯನ್ 1905ರ ರಶಿಯಾ ಕ್ರಾಂತಿಯ ಸಂದರ್ಭದಲ್ಲಿ ತನ್ನ ಕ್ರಾಂತಿಕಾರಿ ಚಳವಳಿಯ ಕಾರಣಕ್ಕಾಗಿಯೇ ಎರಡು ಬಾರಿ ಬಂಧಿತನಾಗಿದ್ದ. ಕೆಲವೇ ವರ್ಷಗಳಲ್ಲಿ 'ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು' ಎಂಬ ಕಮ್ಯೂನಿಸ್ಟ್ ಧ್ಯೇಯಕ್ಕೆ ಗುಡ್‌ಬೈ ಹೇಳಿ ಪ್ಯಾಲಿಸ್ಟೇನ್‌ಗೆ ಮರಳಿ ತನ್ನ ಯಹೂದಿ ಜನಾಂಗವೇ ಸರ್ವರಿಗಿಂತ ಶ್ರೇಷ್ಠ ಎಂಬ ಜನಾಂಗೀಯ ದುರಭಿಮಾನಿ ಸಿದ್ಧಾಂತವನ್ನು ಪ್ರತಿಪಾದಿಸಲಾರಂಭಿಸಿದ. ಯಹೂದಿಗಳು ಹುಟ್ಟಿರುವುದೇ ಆಳುವುದಕ್ಕೆ ಎಂಬ ದುರಹಂಕಾರ ಆತನ ನರನಾಡಿಗಳಲ್ಲಿ ಹರಿಯಲಾರಂಭಿಸಿತು. ತನ್ನ ಈ ಜಿಯೋನಿಸ್ಟ್ ದುರಭಿಮಾನ ಬಹುತೇಕ ಯಹೂದ್ಯರ ನರನಾಡಿಗಳಲ್ಲೂ ಹರಿಯುವಂತೆ ಮಾಡಿದ. ಆ ಮೂಲಕ ಪ್ಯಾಲಿಸ್ಟೇನ್‌ನಲ್ಲಿ ಸಾಪೇಕ್ಷವಾಗಿ ಕೂಡಿಬಾಳುತ್ತಿದ್ದ ಅರಬ್ ಮತ್ತು ಯಹೂದ್ಯರ ನಡುವೆ ಪರಸ್ಪರ ದ್ವೇಷ, ಅಸೂಯೆ, ವೈರತ್ವಗಳನ್ನು ಬಿತ್ತಿದ. ಯಾವಾಗ ಯಹೂದಿಗಳ ನರನಾಡಿಗಳಲ್ಲಿ ಜಿಯೋನಿಸ್ಟ್ ವಿಷ ಹರಿಯಲಾರಂಭಿಸಿತೋ, ಯಾವಾಗ ಅವರು ಅರಬ್ಬರನ್ನು ಪ್ರಪ್ರಥಮ ಶತ್ರುಗಳೆಂದು ಪರಿಗಣಿಸಲಾರಂಭಿಸಿದರೋ ಆಗ ಬೆನ್ ಗುರಿಯನ್ ದುರಭಿಮಾನಿ ಯಹೂದಿಗಳ ಸಶಸ್ತ್ರ ಪಡೆಗಳನ್ನು ಕಟ್ಟಿ ಅರಬ್ಬರ ಬೇಟೆಯನ್ನು ಪ್ರಾರಂಭಿಸಿದ. ಈ ಪ್ರಕ್ರಿಯೆಯಲ್ಲೇ ಆತ ಯಹೂದ್ಯರ ಪ್ರಶ್ನಾತೀತ ನಾಯಕನಾಗಿ ಹೊರಹೊಮ್ಮಿದ. ಅಂತಿಮವಾಗಿ ಅರಬ್ಬರನ್ನು ತಮ್ಮ ತಾಯ್ನಾಡಾದ ಪ್ಯಾಲಿಸ್ಟೇನ್‌ನಿಂದ ಓಡಿಸುವುದಕ್ಕಾಗಿ 1948ರಲ್ಲಿ ಅವರ ಮೇಲೆ ಯುದ್ಧ ಸಾರಿದ. ಅರಬ್-ಇಸ್ರೇಲಿ ಯುದ್ಧ ಎಂದೇ ಪ್ರಸಿದ್ಧವಾಗಿರುವ ಈ ಕಾಳಗದಲ್ಲಿ ಯಹೂದಿ ಪಡೆಗಳಿಗೆ ಈತನೇ ಖುದ್ದಾಗಿ ಮಾರ್ಗದರ್ಶನ ಮಾಡಿದ. ಈ ಪಡೆಗಳು ಪ್ಯಾಲಿಸ್ಟೇನ್ ನಾಗರಿಕರ ಮೇಲೆ ಮಾಡಿದ ದೌರ್ಜನ್ಯಗಳಿಗೆ ಲೆಕ್ಕವಿಲ್ಲ. ಬೆನ್ ಗುರಿಯನ್‌ನ ಆದೇಶದ ಮೇರೆಗೆ ಯಹೂದಿ ಪಡೆಗಳು 450 ಅರಬ್ ಹಳ್ಳಿಗಳ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿ 450 ಅರಬ್ಬರನ್ನು ಕೊಂದುಹಾಕಿದವು. ಈ ಪಡೆಗಳನ್ನು ಮುನ್ನಡೆಸುತ್ತಿದ್ದ ಬೆನ್ ಗುರಿಯನ್‌ನ ಸೇನಾಧಿಕಾರಿ ಜನರಲ್ ಯಾಲನ್ "ಬದುಕುಳಿದಿರುವ ಸುಮಾರು ಏಳೂವರೆ ಲಕ್ಷ ಜನರನ್ನು ಏನು ಮಾಡಬೇಕು?" ಎಂದು ಬೆನ್ ಗುರಿಯನ್‌ನನ್ನು ಕೇಳಿದಾಗ "ಅವರನ್ನೆಲ್ಲಾ ಪ್ಯಾಲಿಸ್ಟೇನ್‌ನಿಂದ ಓಡಿಸಿಬಿಡಿ" ಎಂದು ಗುರಿಯನ್ ಆದೇಶ ಕೊಟ್ಟ. ಅಂತೆಯೇ ಈ ಏಳೂವರೆ ಲಕ್ಷ ಪ್ಯಾಲಿಸ್ಟೇನಿಯನ್ನರು ಮನೆಮಠ ಕಳೆದುಕೊಂಡು, ತಾಯ್ನಾಡನ್ನು ತೊರೆದು ಜೋರ್ಡಾನ್ ಮತ್ತಿತರ ದೇಶಗಳಿಗೆ ಸಾಮೂಹಿಕವಾಗಿ ವಲಸೆಹೋಗಬೇಕಾಯಿತು. ಅಂದರೆ ಈಗ ಇಸ್ರೇಲ್ ದೇಶವೆಂದು ಕರೆಯಲ್ಪಡುವ ಪ್ರದೇಶದ ಶೇಕಡಾ 80 ರಷ್ಟು ಅರಬ್ಬರು ತಮ್ಮ ತಾಯ್ನಾಡನ್ನು ತೊರೆದರು. ನಂತರ ಆ ಜಾಗವನ್ನೆಲ್ಲಾ ಆಕ್ರಮಿಸಿಕೊಂಡು ಅದಕ್ಕೆ ಸ್ವತಂತ್ರ ಇಸ್ರೇಲ್ ದೇಶವೆಂದು ನಾಮಕರಣ ಮಾಡಿ ಇದೇ ಬೆನ್ ಗುರಿಯನ್ ಅದರ ಪ್ರಪ್ರಥಮ ಪ್ರಧಾನಮಂತ್ರಿಯೂ ಆದ. ಹೀಗೆ 1948ರಲ್ಲಿ ಪ್ಯಾಲಿಸ್ಟೇನಿಯನ್ನರ ಸಮಾಧಿಯ ಮೇಲೆ ಇಸ್ರೇಲ್ ಸ್ಥಾಪನೆಯಾದ ದಿನವನ್ನು ಯಹೂದಿಗಳು ದೇಶದ ಹುಟ್ಟುಹಬ್ಬವೆಂದು ಆಚರಿಸಿದರೆ ಪ್ಯಾಲಿಸ್ಟೇನಿಯನ್ನರು ಅದನ್ನು ನಕ್ಬಾ ದಿನವನ್ನಾಗಿ (ಮಹಾದುರಂತ ದಿನ) ಆಚರಿಸುತ್ತಿದ್ದಾರೆ. ಅರಬ್ಬರ ಮಾರಣಹೋಮ ಮಾಡುವ ಮೂಲಕ ಇಸ್ರೇಲ್ ಎಂಬ ರಕ್ಕಸ ರಾಜ್ಯವನ್ನು ಕಟ್ಟಿ ಅದಕ್ಕೆ ಅಧಿಪತಿಯಾದ ಬೆನ್ ಗುರಿಯನ್ ತಾನೂ ಅಧಿಕಾರದಲ್ಲಿದ್ದಷ್ಟು ಕಾಲ ಫ್ರಾನ್ಸ್ ದೇಶದ ನೆರವಿನೊಂದಿಗೆ ತನ್ನ ಸಶಸ್ತ್ರ ಪಡೆಗಳನ್ನು ಬಲಗೊಳಿಸಿಕೊಳ್ಳುತ್ತಾ ಪ್ಯಾಲಿಸ್ಟೇನಿಯನ್ನರ ಮೇಲೆ ನಿರಂತರವಾಗಿ ದಾಳಿಮಾಡುತ್ತಾ ಮಧ್ಯಪ್ರಾಚ್ಯದ ರಕ್ತಸಿಕ್ತ ಅಧ್ಯಾಯವನ್ನು ಮುಂದುವರೆಸಿದ.



kumarburadikatti@gmail.com
ಸುತ್ತ-ಮುತ್ತ
ಕುಮಾರ್ ಬುರಡಿಕಟ್ಟಿ

ಇದು ಬೆನ್ ಗುರಿಯನ್‌ನ ಕರಾಳ ಚರಿತ್ರೆ. ಇದೇನು ತಿರುಚಲ್ಪಟ್ಟ ಚರಿತ್ರೆಯಲ್ಲ, ಯಹೂದಿ ಜನಾಂಗೀಯವಾದವನ್ನು ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಒಪ್ಪಿಕೊಳ್ಳುವ ದುರಭಿಮಾನಿಗಳನ್ನೂ ಒಳಗೊಂಡಂತೆ ಅದಕ್ಕೆ ಬಲಿಪಶುವಾಗಿರುವ ಅರಬ್ಬರ ತನಕ ಎಲ್ಲರೂ ಒಪ್ಪಿಕೊಳ್ಳುವ ಚರಿತ್ರೆ. ಪ್ಯಾರಿಸ್ ಮುನಿಸಿಪಾಲಿಟಿಯ ಸದಸ್ಯರು ಮತ್ತು ಅಧಿಕಾರಿಗಳೂ ಚೆನ್ನಾಗಿ ಬಲ್ಲ ಚರಿತ್ರೆ. ಹೀಗಿದ್ದರೂ ಅವರು ಇಂಥ ನರಹಂತಕನೊಬ್ಬನ


One year after the Nakba: April 1949


Sixty years later: April 2009

ಪ್ಯಾಲಿಸ್ಟೇನಿಯನ್ ಒಡೆಸ್ಸಿ!


ಇಲ್ಲಿರುವ ಎರಡೂ ಫೋಟೋಗಳನ್ನು ಸೂಕ್ಷ್ಮವಾಗಿ ಗಮನಿಸಿ. ಫೋಟೋದಲ್ಲಿರುವುದು ಐದು ಜನ ಪ್ಯಾಲಿಸ್ಟೇನಿಯನ್ ಸಹೋದರರು ಮತ್ತು ಅವರ ಒಬ್ಬ ಸಹೋದರಿ. ಮೊದಲನೇ ಫೋಟೋವನ್ನು 1949ರ ಏಪ್ರಿಲ್ 8ರಂದು ತೆಗೆದರೆ ಎರಡನೇ ಫೋಟೋವನ್ನು 2009ರ ಏಪ್ರಿಲ್ 8ರಂದು ತೆಗೆಯಲಾಗಿದೆ. ವಿಶೇಷ ಎಂದರೆ ಎರಡೂ ಗುರುವಾರಗಳೇ ಆಗಿದ್ದವು. ಮೊದಲನೇ ಫೋಟೋದಲ್ಲಿ ಯಾರ್‍ಯಾರು ಯಾರ್‍ಯಾರ ಪಕ್ಕ ನಿಂತಿದ್ದರೋ ಅವರು ಅವರವರ ಪಕ್ಕವೇ ಅರವತ್ತು ವರ್ಷಗಳ ನಂತರ ತೆಗೆದ ಫೋಟೋದಲ್ಲೂ ನಿಂತಿದ್ದಾರೆ. ಯಹೂದಿ ದುರಭಿಮಾನಿ ನಾಯಕ ಹಾಗೂ ಇಸ್ರೇಲ್‌ನ ಮೊದಲ ಪ್ರಧಾನಿ ಬೆನ್ ಗುರಿಯನ್ 1948ರಲ್ಲಿ ಪ್ಯಾಲಿಸ್ಟೇನಿಯನ್ನರ ಮೇಲೆ ಮಾರಣಾಂತಿಕ ದಾಳಿ ಪ್ರಾರಂಭಿಸಿದಾಗ ಪ್ರಾಣ ರಕ್ಷಿಸಿಕೊಳ್ಳಲು ತಮ್ಮ ತಾಯ್ನಾಡು ತೊರೆದ ಸುಮಾರು ಏಳೂವರೆ ಲಕ್ಷ ಪ್ಯಾಲಿಸ್ಟೇನಿಯನ್ನರಲ್ಲಿ ಈ ಚಿತ್ರದಲ್ಲಿರುವವರೂ ಇದ್ದರು. 1948ರ ಏಪ್ರಿಲ್ 8ರಂದು (ವಿಶೇಷ ಎಂದರೆ ಅದೂ ಗುರುವಾರವೇ) ಬೆನ್ ಗುರಿಯನ್‌ನ ಇಸ್ರೇಲಿ ಸಶಸ್ತ್ರ ಪಡೆಗಳು ಪ್ಯಾಲಿಸ್ಟೇನಿನ ಹಫಿಯಾ ನಗರಕ್ಕೆ ನುಗ್ಗಿ ದಾಳಿ ಮಾಡಿದಾಗ ಅವರ ತಂದೆ ಅಲ್-ಮಿನ ತನ್ನೆಲ್ಲಾ ಮಕ್ಕಳನ್ನು ಒಂದು ಟ್ರಕ್ಕಿನಲ್ಲಿ ತುಂಬಿಕೊಂಡು ಉತ್ತರ ಲೆಬನಾನ್‌ನತ್ತ ಗುಳೇ ಹೋಗಿ ಲೆಬನಾನ್ ತ್ರಿಪೋಲಿ ಎಂಬ ನಗರದಲ್ಲಿ ನೆಲೆಯೂರಿದರು. ತಮ್ಮನ್ನು ತಮ್ಮ ತಾಯ್ನಾಡಿನಿಂದ ಹೊರದಬ್ಬಿದ ಈ ದುರಂತ ದಿನದ ಮೊದಲನೇ ವರ್ಷಾಚರಣೆಯ ಸಂದರ್ಭದಲ್ಲಿ, ಅಂದರೆ 1949ರ ಏಪ್ರಿಲ್ 8ರಂದು, ಅಲ್-ಮಿನ ಅವರು ತ್ರಿಪೋಲಿ ನಗರದಲ್ಲಿ ತನ್ನ ಮಕ್ಕಳನ್ನೆಲ್ಲಾ ಜೊತೆಗೆ ನಿಲ್ಲಿಸಿ ಒಂದು ಫೋಟೋ ತೆಗೆದರು. ಇಲ್ಲಿರುವುದು ಅದೇ ಫೋಟೋ.

ಈ ಅರವತ್ತು ವರ್ಷಗಳ ಅವಧಿಯಲ್ಲಿ ಈ ಮಕ್ಕಳ ತಂದೆ, ತಾಯಿ ಇಬ್ಬರೂ ಸತ್ತು ಹೋದರು. ಮಕ್ಕಳೂ ಕೂಡ ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಹೋಗಿ ಬೇರೆ ಬೇರೆ ದೇಶಗಳಲ್ಲಿ ಚದುರಿಹೋದರು. ಅವರೆಲ್ಲರೂ ತಮ್ಮ ಬದುಕಿನ ದುರಂತ ದಿನದ ಅರವತ್ತನೇ ವರ್ಷಾಚರಣೆಗಾಗಿ 2009ರ ಏಪ್ರಿಲ್ 8ರಂದು ಲಂಡನ್‌ನಲ್ಲಿ ಸೇರಿಕೊಂಡರು. ವಿಶೇಷ ಎಂದರೆ ಅದೂ ಗುರುವಾರವೇ ಆಗಿತ್ತು. ಅವರ ತಂದೆ ಅರವತ್ತು ವರ್ಷಗಳ ಹಿಂದೆ ತೆಗೆದಿದ್ದ ಫೋಟೋವನ್ನು ಇಟ್ಟುಕೊಂಡು ಯಾರ್‍ಯಾರು ಯಾರ್‍ಯಾರ ಪಕ್ಕದಲ್ಲಿ ನಿಂತಿದ್ದರೋ ಹಾಗೇ ನಿಂತುಕೊಂಡು ಇನ್ನೊಂದು ಫೋಟೋ ತೆಗೆಸಿದರು. ಇಲ್ಲಿರುವ ಎರಡನೇ ಫೋಟೋ ಅದೇ.

ಈ ಪ್ಯಾಲಿಸ್ಟೇನಿಯನ್ ಕುಟುಂಬವನ್ನು ತಮ್ಮ ನೆಲದಿಂದ ಓಡಿಸುವ ಮೂಲಕ ಅವರ ಬದುಕನ್ನು ಕಿತ್ತುಕೊಳ್ಳುವುದಕ್ಕೆ ಇಸ್ರೇಲಿ ದುರಭಿಮಾನಿಗಳು ಪ್ರಯತ್ನಿಸಿದ್ದರು. ಆದರೆ, ಅರವತ್ತು ವರ್ಷಗಳಲ್ಲಿ ಈ ಆರೂ ಜನ ಬದುಕಿನ ಒಂದೊಂದು ಕ್ಷೇತ್ರದಲ್ಲೂ ಯಶಸ್ವೀ ಸಾಧನೆಗಳನ್ನು ಮಾಡಿ ಮತ್ತೆ ಒಂದುಗೂಡಿ ಈ ಫೋಟೋದಲ್ಲಿ ನಿಂತಿರುವುದನ್ನು ನೋಡಿದರೆ ಒಂದು ರೀತಿಯಲ್ಲಿ ಇಸ್ರೇಲ್‌ನ ದುರಹಂಕಾರಕ್ಕೆ ಸೆಡ್ಡು ಹೊಡೆದು ನಿಂತಂತೆ ಕಾಣುತ್ತದೆಯಲ್ಲವೆ?

ಹೆಸರನ್ನು ತಮ್ಮ ಸಾರ್ವಜನಿಕ ಸ್ಥಳಕ್ಕೆ ಇಟ್ಟಿದ್ದಾರೆಂದರೆ ಅದನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ಇದನ್ನು ಸುಮ್ಮನೇ ಕಡೆಗಣಿಸಿ ಕೈಬಿಟ್ಟರೆ ಇಂದಲ್ಲಾ ನಾಳೆ ಇಡೀ ಮನುಕುಲದ ಚರಿತ್ರೆಯಲ್ಲಿ ಯಾರೂ ಮಾಡಿರದಂತಹ ದೌರ್ಜನ್ಯಗಳನ್ನು ನಡೆಸಿದ ಹಿಟ್ಲರ್ ಕೂಡ ಜನರ ಆದರ್ಶ ನಾಯಕನಾಗುವ ಕಾಲ ದೂರವಿರುವುದಿಲ್ಲ ಎನ್ನಿಸುತ್ತದೆ.


ಒಬ್ಬ ಯಹೂದಿಯ ಹೆಸರನ್ನೇ ತನ್ನ ಉದ್ಯಾನಕ್ಕೆ ಇಡಬೇಕೆಂದು ಪ್ಯಾರಿಸ್ ಮುನಿಸಿಪಾಲಿಟಿಗೆ ಬಲವಾಗಿ ಅನ್ನಿಸಿದ್ದರೆ ಬೇಕಾದಷ್ಟು ಜನನಾಯಕರು ಸಿಗುತ್ತಿದ್ದರು. ಕೇವಲ ಇಸ್ರೇಲ್‌ನಲ್ಲಿ ಮಾತ್ರವಲ್ಲದೇ ಅರಬ್ಬರ ನಾಡಿನಲ್ಲೂ, ಪ್ರಪಂಚದ ಇನ್ನಿತರ ಪ್ರದೇಶಗಳಲ್ಲೂ ಜನ ಬಹಳವಾಗಿ ಗೌರವಿಸುವ ಶಾಹಕ್ ಎಂಬ ಬುದ್ಧಿಜೀವಿಯಿರಲಿಲ್ಲವೆ? ಖುದ್ದು ಯಹೂದಿಯಾಗಿದ್ದೂ ಅವರು ತಮ್ಮ ಜೀವನದ ಕೊನೆಯ ಉಸಿರಿರುವ ತನಕವೂ ಪ್ಯಾಲೆಸ್ಟೀನಿಯನ್ನರ ಮೇಲೆ ಯಹೂದಿ ಇಸ್ರೇಲ್ ನಡೆಸುತ್ತಿದ್ದ ದೌರ್ಜನ್ಯಗಳ ವಿರುದ್ಧವಾಗಿ ಹೋರಾಡುತ್ತಲೇ ಬಂದವರು. ಅರಬ್ಬರು ಮತ್ತು ಯಹೂದ್ಯರು ಶಾಂತಿ ಮತ್ತು ನೆಮ್ಮದಿಯಿಂದ ಸಹಬಾಳ್ವೆ ನಡೆಸಬೇಕೆಂಬ ಕನಸು ಹೊತ್ತು ತಮ್ಮ ಇಡೀ ಜೀವಮಾನವನ್ನೇ ತೇಯ್ದವರು. ಬೇಡವೆಂದರೆ ತನ್ನ ಸಾಪೇಕ್ಷತಾ ಸಿದ್ಧಾಂತದಿಂದ ಭೌತಶಾಸ್ತ್ರವನ್ನೇ ಕ್ರಾಂತಿಕಾರಕಗೊಳಿಸಿ ಜಗತ್ತಿನ ಕಣ್ಣನ್ನೇ ತೆರೆಸಿದ ಜಗದ್ವಿಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟಿನ್ ಇರಲಿಲ್ಲವೆ? ಐನ್‌ಸ್ಟಿನ್ ಕೂಡ ಯಹೂದ್ಯರು ಮತ್ತು ಅರಬ್ಬರು ಜೊತೆಗೂಡಿ ಸಹಬಾಳ್ವೆ ನಡೆಸುವ ಐಕ್ಯ ದೇಶವೇ ಇರಲಿ, ಯಹೂದ್ಯರಿಗಾಗಿ ಪ್ರತ್ಯೇಕ ಇಸ್ರೇಲ್ ಸ್ಥಾಪನೆಯಾಗುವುದು ಬೇಡ ಎಂದೇ ವಾದಿಸಿದ್ದರು. ಮಧ್ಯಪ್ರಾಚ್ಯದಲ್ಲಿ ಯಹೂದ್ಯರ ಇಸ್ರೇಲ್ ದೇಶ ಅಸ್ತಿತ್ವಕ್ಕೆ ಬಂದರೆ ಆಗಬಹುದಾದ ಅನಾಹುತಗಳನ್ನು ಮೊದಲೇ ನಿರೀಕ್ಷಿಸಿ ಆತಂಕಪಟ್ಟಿದ್ದರು. 1938ರ ಏಪ್ರಿಲ್ 17ರಂದು ನ್ಯೂಯಾರ್ಕ್ ಕಮ್ಮೋಡೋರ್ ಹೋಟೆಲ್‌ನಲ್ಲಿ ಭಾಷಣ ಮಾಡುತ್ತಾ ಅವರು ಹೀಗೆ ಹೇಳಿದ್ದರು: "I should much rather see reasonable agreement with the Arabs on the basis of living together in peace than the creation of a Jewish state. Apart from practical consideration, my awareness of the essential nature of Judaism resists the idea of a Jewish state with borders, an army, and a measure of temporal power no matter how modest. I am afraid of the inner damage Judaism will sustain -- especially from the development of a narrow nationalism within our own ranks, against which we have already had to fight strongly, even without a Jewish state." ಆದರೆ, ಪ್ಯಾರಿಸ್ ಕೌನ್ಸಿಲರುಗಳಿಗೆ ಕಾಮನ್ ಸೆನ್ಸ್ ಇದ್ದಿದ್ದರೆ ಇದೆಲ್ಲವನ್ನು ಕಣ್ಣುತೆರೆದು ನೋಡುತ್ತಿದ್ದರು. ಮೂಲತಃ ಪೋಲ್ಯಾಂಡ್‌ನವನಾದ, ಸಾವಿರಾರು ಅರಬ್ಬರ ಮಾರಣಹೋಮ ನಡೆಸುವುದಕ್ಕಾಗಿ ಪ್ಯಾಲಿಸ್ಟೇನ್‌ಗೆ ಬಂದು ನೆಲೆನಿಂತ ನರಹಂತಕನ ಹೆಸರನ್ನು ತಮ್ಮ ಪಾರ್ಕಿಗೆ ಇಡುತ್ತಿರಲಿಲ್ಲ.



ಇನ್ನೊಂದು ದುರಂತ ನೋಡಿ. ಇದೇ ಪ್ಯಾರಿಸ್ ಮುನಿಸಿಪಾಲಿಟಿ ತನ್ನ ಒಂದು ರಸ್ತೆಗೆ ಪ್ಯಾಲಿಸ್ಟೇನಿನ ಹೆಸರಾಂತ ಕವಿ ಮಹಮೂದ್ ದರ್ವಿಶ್ ಅವರ ಹೆಸರನ್ನಿಡುವುದಾಗಿಯೂ ಘೋಷಿಸಿದೆ. ದರ್ವಿಶ್ ಅವರು ತಮ್ಮ ಅಮೋಘ ಕಾವ್ಯದ ಮೂಲಕ ಮಾನವಪ್ರೀತಿ, ಶಾಂತಿ ಮತ್ತು ಸಹಬಾಳ್ವೆಗಳ ಆದರ್ಶಗಳನ್ನು ಮಿಲಿಯಾಂತರ ಜನರ ಹೃದಯಗಳಲ್ಲಿ ಬಿತ್ತಿದ ಮಹಾನ್ ಕವಿ. ಆದರೆ ಇಲ್ಲಿನ ವ್ಯಂಗ್ಯ ಏನೆಂದರೆ ಬೆನ್ ಗುರಿಯನ್‌ನ ದಾಳಿಗೆ ಬಲಿಯಾಗಿ ತಮ್ಮ ತಾಯ್ನಾಡನ್ನು ತೊರೆದ ಏಳೂವರೆ ಲಕ್ಷ ಜನರಲ್ಲಿ ಮಹಮೂದ್ ದರ್ವಿಶ್ ಅವರೂ ಒಬ್ಬರು. 1948ರಲ್ಲಿ ಇಸ್ರೇಲಿ ಪಡೆಗಳು ಆಲ್ ಬಿರ್ವಾ ಎಂಬ ಹಳ್ಳಿಯ ಮೇಲೆ ದಾಳಿ ಮಾಡಿದಾಗ ಪ್ರಾಣಾಪಾಯದಿಂದ ತಪ್ಪಿಸಿಕೊಳ್ಳಲು ಹಳ್ಳಿಯ ಜನರೊಂದಿಗೆ ಅವರು ತಮ್ಮ ಹಳ್ಳಿಯನ್ನೇ ತೊರೆದು ವಿದೇಶಕ್ಕೆ ವಲಸೆ ಹೋಗಿದ್ದರು. ದೌರ್ಜನ್ಯ ಎಸಗಿದವನನ್ನೂ ಹಾಗೂ ಅದೇ ವೇಳೆಯಲ್ಲಿ ದೌರ್ಜನ್ಯಕ್ಕೊಳಗಾದವನನ್ನೂ ಏಕಕಾಲದಲ್ಲಿ ಪ್ಯಾರಿಸ್ ಮುನಿಸಿಪಾಲಿಟಿ ಗೌರವಿಸುತ್ತಿದೆ ಎಂದರೆ ಅದನ್ನು ಹೇಗೆ ಅರ್ಥಮಾಡಿಕೊಳ್ಳಬೇಕು?

ಅಸಲಿಗೆ ಬೆನ್ ಗುರಿಯನ್‌ನನ್ನು ನೆನಪು ಮಾಡಿಕೊಳ್ಳುವುದಕ್ಕೆ ಯಾವುದೇ ಸ್ಮಾರಕದ ಅವಶ್ಯಕತೆಯಿಲ್ಲ, ಆತನ ಕ್ರೌರ್ಯಗಳನ್ನು ಲಕ್ಷಾಂತರ ಬಲಿಪಶುಗಳು ತಮ್ಮ ನೆನಪುಗಳಲ್ಲಿ ಪೀಳಿಗೆಯಿಂದ ಪೀಳಿಗೆಗೆ ಕೊಂಡೊಯ್ಯುತ್ತಿರುತ್ತಾರೆ. ಪ್ಯಾರಿಸ್ ನಗರಕ್ಕಾಗಲೀ ಅಥವ ಪ್ಯಾರಿಸ್‌ಗೆ ಭೇಟಿ ನೀಡುವ ಪ್ರವಾಸಿಗರಿಗಾಗಲೀ ಕ್ರೂರಿಗಳು ಹರಿಸಿದ ರಕ್ತದ ಹೊಳೆಗಳನ್ನು ನೆನಪುಮಾಡಿಕೊಡುವ ಅವಶ್ಯಕತೆಯಿಲ್ಲ.

ಮಂತ್ರಿ ಕಾಗೇರಿ ಕರಾಮತ್ತು; ಜೆಓಸಿ ಆಕಾಂಕ್ಷಿಗಳಿಗೆ ಆಪತ್ತು!



ಮತಾಂಧ ಮುಖ್ಯಮಂತ್ರಿ ಯಡ್ಡಿಯ ಚೆಡ್ಡಿ ಸರ್ಕಾರದ ಆಯಕಟ್ಟಿನ ಜಾಗದಲ್ಲಿರುವಷ್ಟೇ ಸಚಿವಾಗ್ರೇಸರ ಎಡವಟ್ಟು ಕಾರ್ಯವೈಖರಿ ಕಂಡರೆ ಸಾಕು; ಇಡೀ ಕ್ಯಾಬಿನೆಟ್‌ನ ಕ್ಯಾಲಿಬರ್ ಎಂಥವರಿಗೂ ಅರ್ಥವಾಗಿ ಹೋಗುತ್ತದೆ, ಗಡಿಗೆಯೊಳಗಿನ ಅಕ್ಕಿ ಅನ್ನವಾಗಿದೆಯಾ ಎಂದು ನೋಡಲು ಒಂದೆರಡು ಅಗಳು ಪರೀಕ್ಷಿಸಿದರೆ ಸಾಕಲ್ಲವೇ?

ಅಗಾಧ ಹಸಿವಿನ ದೇಶಭಕ್ಷಕರೇ ಯಡ್ಡಿ ಸಂಪುಟದಲ್ಲಿ ತುಂಬಿ ತುಳುಕುತ್ತಿದ್ದಾರೆ. ಹೇತ್ಲಾಂಡಿ ಹೋಮ್ ಮಿನಿಸ್ಟರ್, ಪರ್ಸೆಂಟೇಜ್ ಪರಾಕ್ರಮಿ ಪಿಡಬ್ಲ್ಯೂಡಿ ಮಂತ್ರಿ, ಸ್ವಾಹಾ ಸೂರ ಸಾರಿಗೆ ಸಚಿವ, ಧನದಾಹಿ ಶಿಕ್ಷಣ ಮಂತ್ರಿಗಳು.... ಹೀಗೆ ಅಡ್ಡ ಕಸುಬಿಗಳ ದೊಡ್ಡ ಲಿಸ್ಟೇ ಹೊರಬರುತ್ತದೆ. ಪ್ರೌಢ ಮತ್ತು ಪ್ರಾಥಮಿಕ ಶಿಕ್ಷಣ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ ಸಂಘಪರಿವಾರದ ಎಬಿವಿಪಿ ಗರಡಿಯಲ್ಲಿ ಪಳಗಿದ ನಾಜೂಕಯ್ಯ, ಶಿಕ್ಷಣವನ್ನು ಕೇಸರೀಕರಣಗೊಳಿಸುವ ಹಿಡನ್ ಅಜೆಂಡಾ ಇಟ್ಟುಕೊಂಡಿರುವ ಈ ಶುದ್ಧ ವೈದಿಕವಾದಿಯ ಗುಳುಂ-ಗೋಲ್‌ಮಾಲ್‌ಗಳು ನಾಜೂಕಾಗೇ ನಡೆದಿವೆ!


ಈ ಎರಡು ವರ್ಷದಲ್ಲಿ ವಿದ್ಯಾ ಇಲಾಖೆಯ ಆಳ-ಅಗಲವೇ ಅರಿಯಲಾಗದ ಕಾಗೇರಿಯ ಅಯೋಗ್ಯತೆಯಿಂದ ಭಾಷಾ ಮಾಧ್ಯಮ ಭಾನ್ಗಡಿ, ಸೈಕಲ್ ಕಿಕ್‌ಬ್ಯಾಕ್ ಗೌಜಿ ನಡೆದಿದೆಯೇ ಹೊರತು ವಿದ್ಯಾರ್ಥಿಗಳ ಭವಿಷ್ಯ ಬೆಳಗಿಸುವಂಥ, ಶುದ್ಧ ಅಕಾಡೆಮಿಕ್ ಪರಿಸರ ನಿರ್ಮಾಣ ಮಾಡುವಂಥ ಯೋಚನೆ-ಯೋಜನೆ ಯಾವುದೂ ಆಗಿಲ್ಲ. ಈಗಂತೂ ಕಾಗೇರಿ ಸಾಹೇಬರು ಗ್ರಾಮೀಣ ಪ್ರದೇಶದ ಬಡ ಪ್ರತಿಭಾನ್ವಿತರ ಬದುಕಿಗೆ ಆಧಾರವಾಗಿದ್ದ ಜಾಬ್ ಓರಿಯಂಟೆಡ್ ಕೋರ್ಸ್ (ಜೆಓಸಿ) ಮುಚ್ಚಿ ಕಾಸು ಗೆಬರಲು ಅನುಕೂಲವಾಗುವ ಐಟಿಐ ಕಾಲೇಜು ಸ್ಥಾಪನೆಯ ಸಂಚು ನಡೆಸಿರುವುದು ಅನೇಕ ಅನುಮಾನಗಳನ್ನು ಮೂಡಿಸಿದೆ. ಬಾಯಿ ಬಿಟ್ಟರೆ ಪ್ರಾಮಾಣಿಕತೆ, ಪಾರದರ್ಶಕತೆಯ ಉದ್ದುದ್ದ ವ್ಯಾಖ್ಯಾನ ಬಿಗಿವ ಕಾಗೇರಿ ಮಾಣಿಯ ಈ ಆತ್ಮಘಾತುಕ ನಿರ್ಧಾರ ಆತನ ಧಗಾ-ದಗಲುಬಾಜಿತನ ಮತ್ತು ಶಿಕ್ಷಣ ರಂಗದ ಬಗೆಗಿನ ಅಜ್ಞಾನ-ಅಸಡ್ಡೆ ಸಾಬೀತುಪಡಿಸುವಂತಿದೆ.

ಜೆಓಸಿ ಗ್ರಾಮೀಣ ಭಾಗದ ಆರ್ಥಿಕವಾಗಿ ಹಿಂದುಳಿದ ಅಥವಾ ಕಲಿಕೆಯ ಸೌಲಭ್ಯಗಳಿಲ್ಲದೆ ಶೈಕ್ಷಣಿಕವಾಗಿ ಹಿಂದೆ ಬಿದ್ದಿರುವ ಹುಡುಗ-ಹುಡುಗಿಯರ ಬಾಳಿಗೊಂದು ದಾರಿ ತೋರಿಸುತ್ತ ಬಂದಿದೆ. ವೃತ್ತಿ ಕೌಶಲ್ಯ-ಜೀವನೋಪಾಯ ಕೋರ್ಸುಗಳು ಕಾಸು ಕೇಳುವ-ಕೀಳುವ ಐಟಿಐ, ಡಿಪ್ಲೊಮಾಗಳಿಗಿಂತ ಬೆಟರ್. ಈ ಜಾಬ್ ಓರಿಯಂಟೆಡ್ ಕೋರ್ಸ್‌ನಲ್ಲಿ ಕೃಷಿ, ರೇಷ್ಮೆ, ಮೀನುಗಾರಿಕೆ, ಹೊಲಿಗೆ, ಫ್ಯಾಷನ್ ಡಿಸೈನಿಂಗ್, ಎಂಬ್ರಾಯ್ಡರಿ, ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್... ಮುಂತಾದ 919 ಬೇರೆ-ಬೇರೆ ತರಬೇತಿ ಶಿಕ್ಷಣವಿದೆ.

ಇವತ್ತು ಈ ಜೆಓಸಿ ಎಂಬ ವಿನೂತನ ಶಿಕ್ಷಣ ವಿಧಾನ ದೇಶದಲ್ಲಿ ಸಾಕಷ್ಟು ಯಶಸ್ವಿಯಾಗಿದೆ. 1977 ರಲ್ಲಿ ಭಾರತದಲ್ಲಿ ಪ್ರಪ್ರಥಮವಾಗಿ ಜಾರಿಗೊಳಿಸಲಾದ ಈ ಶಿಕ್ಷಣದಿಂದ ಸಹಸ್ರಾರು ಮಂದಿ ಸ್ವಾವಲಂಬಿಗಳಾಗಿದ್ದಾರೆ. ಬದುಕಿಗೊಂದು ಉದ್ಯೋಗ ಈ ವಿದ್ಯೆಯಿಂದ ಕಂಡುಕೊಂಡಿದ್ದಾರೆ. ಕರ್ನಾಟಕದಲ್ಲಿ ಬಡ ವಿದ್ಯಾರ್ಥಿಗಳಿಗೆ ವರದಾನದಂತಾಗಿದೆ. ಯುವಕರಲ್ಲಿ ಆತ್ಮವಿಶ್ವಾಸ ತುಂಬುವ ಈ ತರಬೇತಿಯಿಂದ ಅನೇಕರು ಉದ್ಯಮಿಗಳಾಗಿ ಹೆಸರೂ ಮಾಡಿದ್ದಾರೆ. ಪಕ್ಕದ ಕೇರಳ, ಆಂಧ್ರ, ಮಹಾರಾಷ್ಟ್ರ ಮತ್ತು ತಮಿಳುನಾಡಲ್ಲಿ ಕರ್ನಾಟಕಕ್ಕಿಂತಲೂ ಯಶಸ್ವಿಯಾಗಿ ಜೆಓಸಿ ನಡೆಯುತ್ತಿದೆ.

ಜೆಓಸಿಗಳಲ್ಲಿ ವೃತ್ತಿ ಶಿಕ್ಷಣದ ಜೊತೆಗೆ ಭಾಷಾ ವಿಷಯಗಳೂ ಇರುವುದರಿಂದ ಈ ಕೋರ್ಸ್‌ನ್ನು ಪಿಯುಸಿಗೆ ತತ್ಸಮಾನವೆಂದು ಪರಿಗಣಿಸಲಾಗಿದೆ. ಹೀಗಾಗಿ ಶಿಕ್ಷಣ ಡಿಪ್ಲೊಮಾ, ಐಟಿಐಗಳಿಗಿಂತ ಒಳ್ಳೆಯದು. ಏಕೆಂದರೆ ಐಟಿಐ ಮತ್ತು ಡಿಪ್ಲೊಮಾ ಆದವ ಒಂದೋ ನೇರ ಉದ್ಯೋಗಕ್ಕೆ ಹೋಗಬೇಕು; ಇಲ್ಲವೇ ತಾಂತ್ರಿಕ ಶಿಕ್ಷಣ ಮುಂದುವರಿಸಬೇಕು. ಆದರೆ ಜೆಓಸಿ ಕಲಿತವರು ಬೇಕಿದ್ದರೆ ಬಿಎ, ಬಿಕಾಂ, ಬಿಬಿಎಂದಂಥ ಡಿಗ್ರಿ ಓದುವ ಅವಕಾಶವಿದೆ. ಹಾಗಾಗಿ ಜೆಓಸಿ ಪಿಯುಗಿಂತಲೂ ಉಪಯುಕ್ತ ಮತ್ತು ಮಹತ್ವದ ಶಿಕ್ಷಣ!

ರಾಜ್ಯದಲ್ಲಿ ಸುಮಾರು 650 ಕಾಲೇಜುಗಳಲ್ಲಿ ಜೆಓಸಿ ಬೋಧಿಸಲಾಗುತ್ತಿದೆ. ಪ್ರತಿ ವರ್ಷ ಅರ್ಧ ಲಕ್ಷದಷ್ಟು ವಿದ್ಯಾರ್ಥಿ, ವಿದ್ಯಾರ್ಥಿನಿಯರು ತರಬೇತಿ ಪಡೆದು ಹೊರಬರುತ್ತಿದ್ದಾರೆ. ಅಷ್ಟೇ ಅಲ್ಲ ತಕ್ಷಣಕ್ಕೆ ಬಹುತೇಕ ಎಲ್ಲರೂ ಬದುಕಿನಲ್ಲಿ ನೆಲೆ ಕಂಡುಕೊಳ್ಳುತ್ತಿದ್ದಾರೆ; ಯಾರದೇ ಹಂಗಿಲ್ಲದೆ ಉದ್ಯೋಗಸ್ಥರಾಗುತ್ತಿದ್ದಾರೆ. ಅಥವಾ ಸ್ವಯಂ ಉದ್ಯೋಗ ಶುರು ಮಾಡಿಕೊಳ್ಳುತ್ತಿದ್ದಾರೆ. ನಮ್ಮ ರಾಜ್ಯದ ಸುತ್ತಲಿನ ರಾಜ್ಯಗಳಲ್ಲಿ ಈ ಜೆಓಸಿಗೆ ಅದೆಷ್ಟುಪ್ರಾಮುಖ್ಯತೆ ಕೊಡಲಾಗಿದೆಯೆಂದರೆ, ಜೆಓಸಿ ಶಿಕ್ಷಣ ನೀಡುವ ಸಿಬ್ಬಂದಿ ಐದು ವರ್ಷಕ್ಕಿಂತ ಹೆಚ್ಚು ಚಾಕರಿ ಮಾಡಿದರೆ ಅಂಥವರನ್ನು ಅಲ್ಲಿನ ಸರ್ಕಾರ ಕಾಯಂ ಮಾಡಿದೆ.



ಕರ್ನಾಟಕದ ಜೆಓಸಿ ಕಾಲೇಜುಗಳಲ್ಲಿ ಸುಮಾರು ನಾಲ್ಕು ಸಾವಿರ ಉಪನ್ಯಾಸಕರು ಮತ್ತಿತರ ಸಿಬ್ಬಂದಿ ಇದೆ. ಇವರಲ್ಲಿ ಕೇವಲ 68 ಮಂದಿಯನ್ನಷ್ಟೇ ಕಾಯಂ ಮಾಡಲಾಗಿದೆ. ಉಳಿದವರೆಲ್ಲ ಕಾಯಮಾತಿ ನಿರೀಕ್ಷೆಯಲ್ಲಿ ಜೀವ ಸವೆಸುತ್ತಿದ್ದಾರೆ. ಕೆಲವರಂತೂ ಖಾಲಿ ಕೈಲಿ ನಿವೃತ್ತಿಯಾಗಿದ್ದಾರೆ. ಈ ಅರೆಕಾಲಿಕ-ಸಿಬ್ಬಂದಿಯನ್ನು ಕಾಯಂ ಮಾಡುವುದು ಕಷ್ಟವೆಂಬ ಒಂದೇ ಕಾರಣಕ್ಕೆ ಶಿಕ್ಷಣ ಮಂತ್ರಿ ಕಾಗೇರಿ ಕೋರ್ಸುಗಳನ್ನೇ ರದ್ದು ಮಾಡುವ ಪೆದ್ದುಪೆದ್ದು ಮಾತಾಡುತ್ತಿದ್ದಾರೆ! ಗ್ರಾಮೀಣ ಭಾಗದ ಅಸಹಾಯಕ ತರುಣ-ತರುಣಿಯರ ಬದುಕು ರೂಪಿಸುತ್ತಿದ್ದ ಮಹತ್ವದ ಜೆಓಸಿ ಕೋರ್ಸುಗಳ ಕಾಲೇಜುಗಳಿಗೆ ಸರ್ಕಾರಿ ಸೌಲಭ್ಯ-ಸೌಕರ್ಯ ಒದಗಿಸಿ ಸ್ಕೋಪ್ ಕೊಡಬೇಕಿದ್ದ ಶಿಕ್ಷಣ ಸಚಿವ ಕಾಗೇರಿಯೇ ಕುಂಟು ನೆಪದಿಂದ ಈ ವೃತ್ತಿ ಪರ ಕೌಶಲ್ಯದ ಕೋರ್ಸ್ ಮುಚ್ಚಲು ಮುಂದಾಗಿರುವುದು ವಿಪರ್ಯಾಸವೇ ಸರಿ!

ಕಲೆ ವಿಷಯಗಳ ಜತೆ ತಾಂತ್ರಿಕ ಕೌಶಲ್ಯ ಕಲಿಸಿಕೊಡುವ ಜೆಓಸಿ ಬಂದ್ ಮಾಡಿ ಹೆಚ್ಚೆಚ್ಚು ಐಟಿಐ ಕಾಲೇಜು ಸ್ಥಾಪಿಸುವ ಸ್ಕೆಚ್ ಕಾಗೇರಿ ಹಾಕಿಕೊಂಡು ಕುಂತಿದ್ದಾರೆ. ಈ ಐಟಿಐ ಹಣಮಂತರ ಸಂತೆಯಲ್ಲಿ ಮಾರ್ಕೆಟ್ ಇರುವ ಶಿಕ್ಷಣ ಪ್ರಕಾರ, ಹುಚ್ಚು ಕ್ರೇಜ್ ಈ ಶಿಕ್ಷಣಕ್ಕಿದೆ. ಹೀಗಾಗಿ ಕಾಗೇರಿ ಒಂದು ಸಾವಿರದಷ್ಟು ಇಂಥ ಐಟಿಐ ಕಾಲೇಜು ತೆರೆಯಲು ಪರವಾನಗಿ ಕೊಡುವ ರಹಸ್ಯ ಪ್ಲಾನ್ ಹಾಕಿದ್ದಾರಂತೆ. ಇದರಲ್ಲಿ ಶೇ. 30 ರಷ್ಟು ಸರ್ಕಾರಿ ಕಾಲೇಜುಗಳಾದರೆ ಉಳಿದ ಶೇ. 70 ಖಾಸಗಿಯವರಿಗೆ 'ಮಾರಾಟ' ಮಾಡಲಾಗುತ್ತದೆ.


ಒಂದು ಐಟಿಐ ಕಾಲೇಜು ಪರ್ಮಿಷನ್‌ಗೆ ಕನಿಷ್ಠ ಎರಡು ಲಕ್ಷ ರೂಪಾಯಿ ಅಂಡರ್ ಹ್ಯಾಂಡ್ ಡೀಲ್ ಅನ್ನು ಶಿಕ್ಷಣ ಮಂತ್ರಿ ಬಳಗ ಕುದುರಿಸಿದರೂ ಅದು ಹತ್ತಿರತ್ತಿರ ಒಂದೂವರೆ ಕೋಟಿ ಕಮಾಯಿ ಆಗುತ್ತದೆ. ಮಿನಿಸ್ಟರ್ ಕಾಗೇರಿಯ ತಮ್ಮನೊಬ್ಬ ಇಂಥ ಲೇವಾದೇವಿಯಲ್ಲಿ ನಿಸ್ಸೀಮ. ಆತ ಶಿರಸಿಯ ಸುತ್ತಲಿನ ಭ್ರಷ್ಟ ಅಧಿಕಾರಿಗಳಿಂದ ಹಫ್ತಾ ಸಂಗ್ರಹಿಸುವುದು, ಟ್ರಾನ್ಸ್‌ಫರ್ ದಂಧೆ ನಡೆಸುವುದು, ಮಂತ್ರಿಗಳ ಹತ್ತಿರದ ಸಂಬಂಧಿಯೊಬ್ಬ ದೋಖಾ ಪ್ರವಾಸೋದ್ಯಮ ಸರ್ಕಾರಿ ಹಣದಲ್ಲಿ ನಡೆಸುತ್ತಿರುವುದೆಲ್ಲ ಜಗಜ್ಜಾಹಿರಾಗಿರುವ ರಹಸ್ಯ. ಸಜ್ಜನರ ಗೆಟಪ್‌ನಲ್ಲಿ ಅಂಡಲೆಯುತ್ತಿದ್ದ ಕಾಗೇರಿಯ ಬಣ್ಣ ಮಂತ್ರಿಯಾಗುತ್ತಲೇ ಬಯಲಾಗಿದೆ. ಹಾಗಂತ ಶಿರಸಿಯ ಹವ್ಯಕರ ವಲಯದಲ್ಲಿ ಚರ್ಚೆಗಳು ನಡೆಯುತ್ತಿವೆ.


ಇದೆಲ್ಲ ಏನೇ ಇರಲಿ. ಇರುವ ಸರ್ಕಾರಿ ಐಟಿಐ ಕಾಲೇಜುಗಳಿಗೇ ಮೂಲಭೂತ ಸೌಕರ್ಯಗಳಿಲ್ಲದೆ ವಿದ್ಯಾರ್ಥಿಗಳು ಒದ್ದಾಡುತ್ತಿದ್ದಾರೆ. ಕಾಗೇರಿಯ ಶಿರಸಿ ಸಾಮ್ರಾಜ್ಯದ ಮುಂಡಗೋಡಲ್ಲಿ ಈಚೆಗೆ ತೆರೆಯಲಾದ ಐಟಿಐ ಕಾಲೇಜು ಇಲ್ಲಗಳ ಕೇಂದ್ರದಂತಾಗಿದೆ. ಸರಿಯಾದ ಕಟ್ಟಡವಿಲ್ಲ, ಪೀಠೋಪಕರಣವಿಲ್ಲ, ಉಪನ್ಯಾಸಕರಿಲ್ಲ, ಇರುವವರು ಸರಿಯಾಗಿ ಬರದೇ ಚಕ್ಕರ್ ಹೊಡೆಯುತ್ತಿದ್ದಾರೆ, ಅತೀ ಅವಶ್ಯವಾದ ಪ್ರಯೋಗಾಲಯವೇ ಇಲ್ಲ. ಇತ್ತ ಕಾಗೇರಿ ಗಮನ ಹರಿಸುವುದು ಬಿಟ್ಟು ಹೊಸ ಐಟಿಐ ಕಾಲೇಜು ತೆರೆಯಲು ಹವಣಿಸುತ್ತಿರುವುದು ಏಕೆ? ವಿನಾಕಾರಣ ಜೆಓಸಿ ಮುಚ್ಚುವ ಕಿತಾಪತಿ ಶುರುಮಾಡಿರುವ ಕಾಗೇರಿ ಗುಮಾನಿಗೀಡಾಗಿದ್ದಾರೆ.

ಕಾಗೇರಿಯ ಐಟಿಐ ಕಾಲೇಜು ದಂಧೆಗೆ ಗ್ರಾಮೀಣ ಯುವ ಜನಾಂಗದ ಆಶಾಕಿರಣವಾಗಿದ್ದ ಜೆಓಸಿಗಳು ಬಲಿಯಾಗುತ್ತಿವೆಯಾ?

• ನಹುಶ

ಜಾನ್ಸನ್ ಎನ್‌ಕೌಂಟರ್ ಹಾಕಿಕೊಟ್ಟಿದ್ದು ಕಾಲಾಪತ್ಥರ್?





ಕಾಲಾಪತ್ಥರ್

ಸದ್ಯ ಹಾವಳಿಯಿಡುತ್ತಿರುವ ಖತರ್ ನಾಕ್‌ಗಳಿಗೆ ಹೋಲಿಸಿದರೆ ಜಾನ್ಸನ್ ದೊಡ್ಡ ರೌಡಿಯೇನಲ್ಲ. ಪ್ರತಿನಿತ್ಯ ಪೊಲೀಸರಿಗೆ ತಲೆನೋವಾಗಿರಲಿಲ್ಲ. ತನ್ನದೇ ಸಾಮ್ರಾಜ್ಯವಾಗಲಿ, ಸಿಂಡಿಕೇಟ್ಟಾಗಲಿ, ವಸೂಲಿ ಜಾಲವಾಗಲಿ, ಶಿಷ್ಯರ ಪಡೆಯಾಗಲಿ ಯಾವುದೂ ಇರಲಿಲ್ಲ.

ಹಾಗಿದ್ದೂ ಏಕೆ ಆತನನ್ನು ಎನ್‌ಕೌಂಟರ್ ಹೆಸರಲ್ಲಿ ಪೊಲೀಸರು ಕೊಂದರು?

ಇದು ಏಪ್ರಿಲ್ 12 ರ ಬೆಳ್ಳಂಬೆಳಿಗ್ಗೆ ನಾಗವಾರದ ರಿಂಗ್‌ರಸ್ತೆಯಲ್ಲಿ ಪೊಲೀಸ್ ಗುಂಡಿಗೆ ಬಲಿಯಾದ ರೌಡಿ ಜಾನ್ಸನ್ ಅಲಿಯಾಸ್ ವಿಜು ಹತ್ಯೆಯ ಸುತ್ತ ಎದ್ದು ನಿಲ್ಲುವ ಮೊದಲ ಪ್ರಶ್ನೆ.

ಜಾನ್ಸನ್ ಮಾರುತಿ 800 ಕಾರೊಂದರಲ್ಲಿ ನಾಗವಾರ ರಿಂಗ್‌ರಸ್ತೆಯತ್ತ ಬರುತ್ತಿದ್ದಾನೆಂಬ ಮಾಹಿತಿ ಸಿಕ್ಕಿದ್ದೇ ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರಾಜೇಶ್ ಬೆನ್ನತ್ತಿದರಂತೆ. ಅದೇ ಹೊತ್ತಿಗೆ ಕಾಡುಗೊಂಡನಹಳ್ಳಿಯ ಇನ್ಸ್‌ಪೆಕ್ಟರ್ ರಂಗಪ್ಪ ಮತ್ತು ಮಹದೇವಪುರದ ಮಹಮ್ಮದ್ ರಫಿ ಕೂಡ ಜಾನ್ಸನ್‌ನನ್ನು ಹಿಂಬಾಲಿಸಿ ಬಂದರಂತೆ. ವೈಯಾಲಿಕಾವಲ್ ಸೊಸೈಟಿ ಲೇಔಟ್ ಬಳಿ ಮೊದಲೇ ಒಂದಷ್ಟು ಮಂದಿ ಪೊಲೀಸರು ಹೊಂಚು ಹಾಕಿ ಬರುತ್ತಿದ್ದ ಜಾನ್ಸನ್‌ನ ಕಾರನ್ನು ಅಡ್ಡಗಟ್ಟಲು ಯತ್ನಿಸುತ್ತಿದ್ದಂತೆ ಜಾನ್ಸನ್ ಕಾರಿನೊಳಗಿನಿಂದಲೇ ಫೈರ್ ಮಾಡಲು ಯತ್ನಿಸಿದನಂತೆ. ಅದೇ ಹೊತ್ತಿಗೆ ಹಿಂಬಾಲಿಸಿ ಬರುತ್ತಿದ್ದ ಇನ್ಸ್‌ಪೆಕ್ಟರ್ ರಾಜೇಶ್ ಎದುರಿಗೆ ಬಂದದ್ದೇ ಶರಣಾಗುವಂತೆ ಕೂಗಿ ಹೇಳಿದರೆ ಜಾನ್ಸರ್ ಅವರ ಮೇಲೆಯೇ ಗುಂಡು ಹಾರಿಸಿದನಂತೆ. ಹಾಗೇ ಜಾನ್ಸನ್ ಹಾರಿಸಿದ ಗುಂಡೊಂದು ಇನ್ಸ್‌ಪೆಕ್ಟರ್ ರಾಜೇಶ್ ಕೈಯನ್ನು ಸವರಿತಂತೆ. ಗುಂಡು ತಗುಲಿದ ರಾಜೇಶ್ ನೆಲಕ್ಕೆ ಬೀಳುತ್ತಿದ್ದಂತೆಯೇ ಹಿಂಬಾಲಿಸಿ ಬರುತ್ತಿದ್ದ ಇನ್ಸ್‌ಪೆಕ್ಟರ್‌ಗಳಾದ ರಂಗಪ್ಪ ಮತ್ತು ಮಹಮ್ಮದ್ ರಫಿಯ ಬುಲೆಟ್ಟು ಆತನ ತಲೆಗೂ ಬಡಿದು ಜಾನ್ಸನ್ on the spot ಹೆಣವಾದನಂತೆ!

ಇದು ಪೊಲೀಸರು ಹೇಳುತ್ತಿರುವ ಕತೆ. ಹಾಗೊಮ್ಮೆ ಹಿಂಬದಿಯಿಂದ ಪೊಲೀಸರು ಹಾರಿಸಿದ ಗುಂಡಿಗೆ ಜಾನ್ಸನ್ ಬಲಿಯಾಗಿದ್ದೇ ಆದರೆ ಆತನ ಕಾರಿನ ಹಿಂಬದಿಯ ಗಾಜು ಪುಡಿಯಾಗಿರಬೇಕು. ಗುಂಡು ಎದೆಗೇ ಬಂದು ನಾಟಲು ಹೇಗೆ ಸಾಧ್ಯ? ಡ್ರೈವಿಂಗ್ ಸೀಟಿನ ಹಿಂಭಾಗದಲ್ಲಿ ಗುಂಡು ಬಿದ್ದಿರಬೇಕು. ಅಥವಾ ತಲೆಗೆ ಬಡಿಯಬೇಕಿದ್ದ ಬುಲೆಟ್ಟು ಡ್ರೈವಿಂಗ್ ಶೀಟಿನ ಶಿರಕ್ಕೆ ಬಡಿದಿರಬೇಕಿತ್ತು. ಸೀಟಿನಲ್ಲಿ ತಲೆಭಾಗವನ್ನು ಸೀಟಿನ ಪ್ಲಾಸ್ಟಿಕ್ ತಟ್ಟೆಯೇ ರಕ್ಷಿಸಬೇಕಿತ್ತು. ಹಿಂಬದಿಯ ಸೀಟನ್ನೂ ಮೀರಿ ಡ್ರೈವಿಂಗ್ ಸೀಟಿಗೂ ತಾಗದೇ ಗುಂಡು ನೇರವಾಗಿ ಎದೆ ಮತ್ತು ತಲೆಗೇ ಹೊಕ್ಕಲು ಹೇಗೆ ಸಾಧ್ಯ?



ಗಾಯಗೊಂಡ ಇನ್ಸ್‌ಪೆಕ್ಟರ್ ರಾಜೇಶ್

ಕಾರನ್ನು ಡ್ರೈವ್ ಮಾಡುತ್ತಿದ್ದಂತೆಯೇ ಎನ್‌ಕೌಂಟರ್ ನಡೆದಿದ್ದರೆ ಕಾರಿನ ಒಳಭಾಗದಲ್ಲಿ ರಕ್ತ ಸಿಡಿದಿರಬೇಕಿತ್ತು. ಚಲಿಸುತ್ತಿದ್ದ ಕಾರು ಆಯತಪ್ಪಿ ಎದುರಿದ್ದ ಪೊಲೀಸ್ ಜೀಪಿಗೋ, ರಸ್ತೆಗೋ ಗುದ್ದಿರಬೇಕಿತ್ತು. ಗುಂಡು ಬಡಿದಿದ್ದು ಮುಂಭಾಗದಿಂದಲೇ ಹೊರತು ಹಿಂದಿನಿಂದ ನುಗ್ಗಿದ ಯಾವುದೇ ಕುರುಹುಗಳಿಲ್ಲ. ಇದರರ್ಥ ಜಾನ್ಸನ್‌ನನ್ನು ಎಲ್ಲಿಂದಲೋ ತಂದು ನಿರ್ಜನ ನಾಗವಾರ ರಿಂಗ್ ರಸ್ತೆಯಲ್ಲಿ ಬೆಳಗಿನ ಜಾವಕ್ಕೇ ನಿಲ್ಲಿಸಿ ಗುಂಡು ಹಾರಿಸಲಾಯ್ತೆ?

ಇದು ಜಾನ್ಸನ್‌ನ ಎನ್‌ಕೌಂಟರ್ ಸುತ್ತ ಹೊಗೆಯಾಡುತ್ತಿರುವ ಪ್ರಶ್ನಾವಳಿ. ಅಸಲಿಗೆ ಜಾನ್ಸನ್ ಯಾರು? ಎಲ್ಲಿಯವನು? ಆತನ ಕ್ರೈಮುಗಳೇನು? ಇತ್ಯಾದಿ ಏನೊಂದೂ ಬೆಂಗಳೂರಿನ ಜನಕ್ಕೆ ಗೊತ್ತಿರಲಿಲ್ಲ. ವಿಶೇಷವೆಂದರೆ ಬೆಂಗಳೂರಿನ ಯಾವೊಂದು ಪೊಲೀಸ್ ಠಾಣೆಯಲ್ಲೂ ಆತನ ವಿರುದ್ಧ ರೌಡಿ ಶೀಟರಲಿಲ್ಲ. ಯಾವುದೋ ಕಾಲದ ಹಳೆಯ ಫೋಟೋ ಒಂದನ್ನು ಬಿಟ್ಟರೆ ಆತನ ನಿಜವಾದ ಫೋಟೋನಾ? ಆತ ಹೇಗಿದ್ದಾನೆ? ಎಲ್ಲಿ ಅಡ್ಡೆ ಹಾಕುತ್ತಿದ್ದ? ಮುಂತಾದ ಯಾವೊಂದು ಮಾಹಿತಿಯೂ ಪೊಲೀಸರಿಗಿರಲಿಲ್ಲ. ಹಾಗಂತ ಜಾನ್ಸನ್ ದೊಡ್ಡ ರೌಡಿಯಲ್ಲವೆಂದಾಗಲಿ, ಭಯಂಕರ ಪಾತಕಿಯಲ್ಲ ಎಂದಾಗಲಿ ಹೇಳುವಂತಿರಲಿಲ್ಲ.

ಮೊದಲ ಬಾರಿಗೆ ಆತನ ಹೆಸರನ್ನು ಪೊಲೀಸರು ಕೇಳಿದ್ದೇ ವಿವೇಕ್‌ನಗರದ ರೌಡಿ ಪಳನಿಯ ಕೊಲೆ ಕೇಸಿನಲ್ಲಿ. 2006 ರಲ್ಲಿ ಪ್ರತಿಷ್ಠಿತ ಹಾಸ್‌ಮ್ಯಾಟ್ ಆಸ್ಪತ್ರೆಗೇ ನುಗ್ಗಿದ ಜಾನ್ಸನ್ ಪಳನಿಯನ್ನು ಆಸ್ಪತ್ರೆಯ ಹಾಸಿಗೆಯಲ್ಲೇ ಕೊಚ್ಚಿ ಹಾಕಿದ್ದ!

ಮೂಲತಃ ವಿವೇಕ್‌ನಗರದ ಈಜಿಪುರದವನಾದ ಜಾನ್ಸನ್‌ನ ತಂದೆಯ ಹೆಸರು ಆಂಜನಪ್ಪ. ಆ ಕಾಲಕ್ಕೆ ಯಶವಂತಪುರಕ್ಕೆ ಕೌನ್ಸಿಲರ್ ಆಗಿದ್ದ ಪ್ರಭಾಕರ್‌ಗೆ ಈತ ಡ್ರೈವರ್ ಆಗಿದ್ದ. ಮಲೆಯಾಳಿ ಹೆಂಗಸೊಬ್ಬಳನ್ನು ಪ್ರೀತಿಸಿ ಮದುವೆಯಾದ ಡ್ರೈವರ್ ಆಂಜನಪ್ಪ ಕನ್ನಡಿಗನಾದರೂ ತಾಯಿಯಿಂದಾಗಿ ಜಾನ್ಸನ್ ತಮಿಳರ ಸಂಗಕ್ಕೆ ಬಿದ್ದ. ರಟ್ಟೆ ಬಲಿಯುತ್ತಿದ್ದಂತೆ ತಂದೆಯ ನಿಯತ್ತಿಗೆ ಜೊತೆಯಾದ ಜಾನ್ಸನ್ ರಾಜಕೀಯವಾಗಿ ಯಾರೆಲ್ಲ ಪ್ರಭಾಕರ್ ವಿರುದ್ಧ ಕತ್ತಿಮಸೆಯುತ್ತಿದ್ದರೋ ಅಂಥವರನ್ನು ಹುಡುಕಿ ತದುಕುತ್ತಿದ್ದ. ಯಶವಂತಪುರ ಪೊಲೀಸ್ ಠಾಣೆಯಲ್ಲಿ ಲಾಕಪ್ಪು ರುಚಿ ಕಂಡಿದ್ದು ಕೂಡ ಕೌನ್ಸಿಲರ್ ಪ್ರಭಾಕರ್ ಕಾರಣಕ್ಕೇ!



ಎನ್‌ಕೌಂಟರ್ ನಡೆದದ್ದು ಹೀಗಾ?

ಈತನ ಅಕ್ಕ ಸುನೀತಾ ಸದ್ಯ ಪೊಲೀಸ್ ಕಮೀಷನರ್ ಕಚೇರಿಯ ವಲಸೆ ಸೆಕ್ಷನ್ನಿನಲ್ಲಿ ಹೆಡ್‌ಕಾನ್ಸ್‌ಟೇಬಲ್. ಹೀಗಿದ್ದೂ ಯಶವಂತಪುರದ ಪೊಲೀಸರ ಕೆಂಗಣ್ಣಿಗೆ ಬಿದ್ದ ಜಾನ್ಸನ್ 2001 ರ ಹೊತ್ತಿಗೆ ಈಜಿಪುರಕ್ಕೆ ವಲಸೆ ಬಂದ. ಅಲ್ಲಿ ಆತನ ಜೊತೆಯಾದವನು ದೀಡಿ ರವಿಯ ತಮ್ಮ ಉಮಾಶಂಕ್ರ.

ಆ ಹೊತ್ತಿಗಾಗಲೇ ವಿವೇಕ್‌ನಗರದ ಮತ್ತೊಬ್ಬ ರೌಡಿ ಪಳನಿಗೂ ದೀಡಿ ರವಿಯ ತಮ್ಮ ಉಮಾಶಂಕ್ರನಿಗೂ ಕೇಬಲ್ ವಾರ್ ಶುರುವಾಗಿತ್ತು. ಹೀಗೆ ಶುರುವಾದ ಗ್ಯಾಂಗ್ ವಾರ್‌ನಲ್ಲಿ ರಫೀಕ್ ಎಂಬ ಪುಡಿ ರೌಡಿಯೊಬ್ಬನನ್ನು ಪಳನಿ ಗ್ಯಾಂಗ್ ಕೊಚ್ಚಿ ಹಾಕಿತ್ತು. ಈತ ಜಾನ್ಸನ್ ತಮ್ಮ ವಿನೋದ್ ಅಲಿಯಾಸ್ 'ಪಪ್ಪಿ' ಎಂಬಾತನ ಚೆಡ್ಡಿ ದೋಸ್ತ್, ಗೆಳೆಯನ ಹತ್ಯೆಗೆ ಪ್ರತೀಕಾರ ಹೇಳಲು ನಿಂತ 'ಪಪ್ಪಿ' ಕೂಡ ಅಲಸೂರಿನ ಪಳನಿ ಶಿಷ್ಯರ ಕೈಯಲ್ಲಿ ಕೊಲೆಯಾಗಿ ಹೋದ.

ಇದೆಲ್ಲವನ್ನೂ ಪಳನಿಯೇ ಮಾಡಿಸಿದ್ದಾನೆಂದು ಜಾನ್ಸನ್ ಲೆಕ್ಕ ಹಾಕಿದ. ಅದಕ್ಕೆ ತಕ್ಕಂತೆ ದೀಡಿ ರವಿ ತಮ್ಮ ಉಮಾಶಂಕ್ರ ಜಾನ್ಸನ್‌ಗೆ ಸಾಥ್ ಕೊಡುತ್ತಿದ್ದ. ಹೀಗೆ ದೀಡಿ ರವಿ ಗ್ಯಾಂಗಿನಲ್ಲಿದ್ದುಕೊಂಡೇ ಜಾನ್ಸನ್ ಕಾಲಾಪತ್ಥರ್‌ಗೆ ಆತ್ಮೀಯನಾದ. ಹಳೇ ಪಾತಕಿ ಕಾಲಾಪತ್ಥರ್ ನೇಪಕ್ಕಷ್ಟೇ ಅಂಡರ್‌ವರ್ಲ್ಡ್ ಚಟುವಟಿಕೆಗಳಿಂದ ದೂರವಿದ್ದನಾದರೂ ಪಾತಕ ಜಗತ್ತಿನಲ್ಲಿ ತನಗಿದ್ದ ಹಿಡಿತವನ್ನು ಬಿಟ್ಟುಕೊಟ್ಟಿರಲಿಲ್ಲ. ಕಾಟನ್‌ಪೇಟೆಯ ಪುಷ್ಪ, ಶ್ರೀರಾಂಪುರದ ಮಣಿಭಾರತಿ, ವಿವೇಕ್‌ನಗರದ ದೀಡಿ ರವಿ, ಭಕ್ಷಿ ಗಾರ್ಡನ್ನಿನ ಚಾಮರಾಜ, ಕಾಟನ್‌ಪೇಟೆಯ ಸಂಪಂಗಿ, ಟ್ಯಾನರಿ ರಸ್ತೆಯ ಮ್ಯಾಥ್ಯೂ, ಕಾಕ್ಸ್‌ಟೌನಿನ ಕೇಬಲ್ ಶ್ರೀಧರ, ಆಂಜನಪ್ಪ ಗಾರ್ಡನ್ನಿನ ಕುಟ್ಟಿ ರಾಜಾ-ಹೀಗೆ ಬೆಂಗಳೂರಿನ ಅರ್ಧ ಡಜನ್ ತಮಿಳು ರೌಡಿಗಳ ನೆಟ್‌ವರ್ಕ್ ಕಟ್ಟಿಕೊಂಡಿದ್ದ ಕಾಲಾಪತ್ಥರ್ ಪಾಲಿಗೆ ಮನೆ ಹುಡುಗನಂತೆ ಚಾಲ್ತಿಯಲ್ಲಿದ್ದವನು ಜಾನ್ಸನ್.

ಅದು 2006 ರ ಕಾಲ. ನೀಲಸಂದ್ರದ ರೌಡಿ ಮುಬಾರಕ್ ಆಲಿಯ ತಮ್ಮ ರಹೀಮ್ ಆಲಿಯನ್ನು ದೀಡಿ ರವಿ ತಮ್ಮ ಉಮಾಶಂಕ್ರನ ಗ್ಯಾಂಗ್ ಕೊಂದು ಹಾಕಿತ್ತು. ಅದಕ್ಕೆ ಪ್ರತಿಯಾಗಿ ಮುಬಾರಕ್ ಆಲಿ ಮತ್ತು ಪಳನಿ ಸೇರಿಕೊಂಡು ಉಮಾಶಂಕ್ರನನ್ನು ಆತ ಪಾರ್ಟಿ ನಡೆಸುತ್ತಿದ್ದ ಮನೆಯಲ್ಲೇ ಕೂಡಿ ಹಾಕಿ ಗ್ಯಾಸ್ ಸಿಲೆಂಡರ್ ಸಿಡಿಸಿ ಸುಟ್ಟು ಹಾಕಿತ್ತು.



ಪಳನಿ ಮತ್ತು ಮುಬಾರಕ್ ಇಬ್ಬರೂ ಉಮಾಶಂಕ್ರನ ಕೊಲೆ ಕೇಸಲ್ಲಿ ಜೈಲುಪಾಲಾದರೆ ಇತ್ತ ದೀಡಿ-ರವಿ ಗ್ಯಾಂಗ್ ಜಿದ್ದಿಗಾಗಿ ಹಾತೊರೆಯುತ್ತಿತ್ತು. ಹೀಗೆ ಪಳನಿ ಅಥವಾ ಮುಬಾರಕ್ ಆಲಿ ಯಾರು ಸಿಕ್ಕರೂ ಕತ್ತರಿಸಿ ಹಾಕಲು ಹಾತೊರೆಯುತ್ತಿದ್ದ ದೀಡಿ ರವಿ ಗ್ಯಾಂಗಿಗೆ ಲೇಟೆಸ್ಟ್ ಸೇರ್ಪಡೆಯಂತಿದ್ದವನು ಜಾನ್ಸನ್!

ಏಕೆಂದರೆ ಜಾನ್ಸನ್ ತಮ್ಮ ಪಪ್ಪಿ ಅಲಿಯಾಸ್ ವಿನೋದ್ ಕೂಡ ಪಳನಿ ಶಿಷ್ಯರಿಂದ ಹತನಾಗಿಹೋಗಿದ್ದ. ತಮ್ಮನ ಹತ್ಯೆಗೆ ಪ್ರತಿಯಾಗಿ ಪಳನಿಯನ್ನು ಕೊಂದೇ ತೀರುತ್ತೇನೆಂದು ಜಾನ್ಸನ್ ಶಪಥಗೈದಿದ್ದ. ಆದರೆ ಪಳನಿ ಸುಲಭಕ್ಕೆ ಸಿಗುವವನಲ್ಲ. ಆತನನ್ನು ಕೊಲ್ಲಬೇಕೆಂದರೆ ಪ್ರಚಂಡ ಪಾತಕಿಗಳೇ ಬೇಕು. ಅದಕ್ಕೆಂದು ಜಾನ್ಸನ್ ಕೈಜೋಡಿಸಿದ್ದು ಮಹಾಲಕ್ಷ್ಮಿ ಲೇಔಟಿನ ಕಾಟ್‌ರವಿ ಎಂಬ ಮತ್ತೊಬ್ಬ ರೌಡಿಯ ಜೊತೆ. ಈ ಕಾಟ್‌ರವಿಗೆ ಫೈಜಲ್ ಎಂಬಾತ ಕಡುವೈರಿ. ಆತನನ್ನು ನೀನು ಮುಗಿಸಿಕೊಟ್ಟರೆ ಪಳನಿ ಮುಗಿಸಲು ನಾನು ನಿನಗೆ ನೆರವಾಗುತ್ತೇನೆಂದು ಕಾಟ್‌ರವಿ ಭರವಸೆ ಕೊಟ್ಟಿದ್ದಾನೆ. ಅಷ್ಟೇ, ಜಾನ್ಸನ್ ಮಹಾಲಕ್ಷ್ಮಿ ಲೇಔಟಿಗೆ ನುಗ್ಗಿದ್ದೇ ಫೈಜಲ್‌ನನ್ನು ನಡುರಸ್ತೆಯಲ್ಲೇ ಅಟ್ಟಾಡಿಸಿ ಕೊಚ್ಚಿ ಹಾಕಿದ್ದ. ಇದಾಗಿ ತಿಂಗಳಿಗೇ ಪಳನಿ ಆಕ್ಸಿಡೆಂಟ್ ಮಾಡಿಕೊಂಡು ಹಾಸ್‌ಮ್ಯಾಟ್ ಆಸ್ಪತ್ರೆಗೆ ದಾಖಲಾದ ಸುದ್ದಿ ಬಂತು. ಅದು 2006 ರ ಫೆಬ್ರವರಿ ತಿಂಗಳು. ತನ್ನನ್ನು ಆಸ್ಪತ್ರೆಗೇ ನುಗ್ಗಿ ಕೊಲ್ಲುತ್ತಾರೆಂಬ ಲೆಕ್ಕಾಚಾರವಾದರೂ ಪಳನಿಗೆಲ್ಲಿತ್ತು?

ಬೆಂಗಾವಲಿಗೆಂದು ಒಂದಿಬ್ಬರು ಹುಡುಗರನ್ನಿಟ್ಟುಕೊಂಡು ಕಾಲಿಗೆ ಬ್ಯಾಂಡೇಜ್ ಸುತ್ತಿಕೊಂಡು ಮಲಗಿದ್ದ ಪಳನಿಗೆ ಪರಿಸ್ಥಿತಿ ಅರ್ಥವಾಗುವ ಹೊತ್ತಿಗೆ ಆತನ ಪ್ರಾಣವೇ ಹಾರಿಹೋಗಿತ್ತು. ಜಾನ್ಸನ್, ಸೂಸೈ, ಸನ್ನು ಮತ್ತು ಕಾಟ್‌ರವಿಯ ಕೆಲ ಹುಡುಗರು ಸೇರಿಕೊಂಡಿದ್ದೇ ರಾತ್ರೋರಾತ್ರಿ ಹಾಸ್‌ಮ್ಯಾಟ್ ಆಸ್ಪತ್ರೆಗೆ ನುಗ್ಗಿದ್ದಾರೆ. ಅಲ್ಲಿದ್ದ ಸಿಬ್ಬಂದಿಯನ್ನೆಲ್ಲ ಕೊಠಡಿಯೊಂದಕ್ಕೆ ಕೂಡಿ ಹಾಕಿ ಮಲಗಿದ್ದ ಪಳನಿಯನ್ನು ಮನಸ್ವೇಚ್ಛೆ ಕತ್ತರಿಸಿ ಹಾಕಿದ್ದಾರೆ.

ಅಲ್ಲಿಗೆ ಪಳನಿಯ ಕತೆಯೇನೋ ಮುಗಿದಿತ್ತು, ಆದರೆ ಜಾನ್ಸನ್ ಬೇಟೆಗಾಗಿ ಬೆಂಗಳೂರಿನ ಅರ್ಧ ಪೊಲೀಸ್ ಪಡೆಯೇ ನಿದ್ದೆಗೆಟ್ಟು ಹುಡುಕಲಾರಂಭಿಸಿತ್ತು. ಮೊದಲು ಫೈಜಲ್ ಕೊಲೆ, ನಂತರ ಪಳನಿ ಹತ್ಯೆ; ಹೀಗೆ ಒಂದಲ್ಲ ಎರಡು ಕೊಲೆಗಳನ್ನೆಸಗಿಯೂ ಜಾನ್ಸನ್ ಮಾತ್ರ ಪೊಲೀಸರಿಗೆ ಸಿಗಲೇ ಇಲ್ಲ. ಹಾಗಂತ ಜಾನ್ಸನ್ ಅಷ್ಟಕ್ಕೇ ಸುಮ್ಮನಾಗಲಿಲ್ಲ. ಮೇಲುನೋಟಕ್ಕೆ ಬೆಂಗಳೂರು ಬಿಟ್ಟನಾದರೂ ಪದೇಪದೇ ಬೆಂಗಳೂರಿಗೆ ಬಂದು ಒಂದಲ್ಲಾ ಒಂದು ಕ್ರೈಮ್‌ಗೆ ಕೈಯಿಡುತ್ತಲೇ ಇದ್ದ. ಕಾಲಾಪತ್ಥರ್‌ನ ಪರಮಾಪ್ತನಾಗಿದ್ದ ಕೇಬಲ್ ಶ್ರೀಧರ್‌ನ ಪರವಾಗಿ ಬಹುಜನ ಸಮಾಜ ಪಕ್ಷದ ಟ್ಯಾನರಿ ರೋಡಿನ ನಾಯಕ ಶಕ್ತಿವೇಲ್ ಎಂಬಾತನನ್ನು ಮುಗಿಸಿದ. ಹೆಸರಿಗಷ್ಟೇ ಅದು ರೌಡಿ ಮ್ಯಾಥ್ಯೂ ಮತ್ತು ಕುಟ್ಟಿ-ರಾಜರ ಕೃತ್ಯವಾಗಿತ್ತಾದರೂ ಅಸಲಿಗೆ ಹಂತಕರ ಪಡೆಯಲ್ಲಿದ್ದುದು ಜಾನ್ಸನ್!

ಇದಾಗಿ ಕೆಲ ತಿಂಗಳಿಗೇ ಬನಶಂಕರಿಯಲ್ಲಿ ಜಲ್ಲಿ ವೆಂಕಟೇಶನ ಕೊಲೆಯಾಯಿತು. ಜಲ್ಲಿ ವೆಂಕಟೇಶ ಬನಶಂಕರಿ ಅರಸಯ್ಯನ ತಮ್ಮ ಸಿದ್ಧಲಿಂಗನನ್ನು ಕೊಲ್ಲಿಸಿದ್ದ. ಅದಕ್ಕೆ ಪ್ರತಿಯಾಗಿ ರಂಗನಾಥ ಎಂಬಾತನನ್ನು ಕೊಂದು ಜೈಲು ಸೇರಿದ್ದ ಅರಸಯ್ಯನಿಗೆ ಜೈಲಲ್ಲಿ ಜೊತೆಯಾದವನು ದೀಡಿ ರವಿ. ಇದೇ ದೀಡಿ ರವಿಯ ಆದೇಶದ ಮೇರೆಗೆ ಜಾನ್ಸನ್ ಜಲ್ಲಿ ವೆಂಕಟೇಶನನ್ನು ಆತನ ಅಡ್ಡೆಗೇ ನುಗ್ಗಿ ಕೊಂದು ಹಾಕಿದ್ದ. ಇಲ್ಲೂ ಅಷ್ಟೇ, ಜಲ್ಲಿ ವೆಂಕಟೇಶನ ಹತ್ಯೆಯ ಆರೋಪ ಹೊತ್ತು ಅರಸಯ್ಯನ ಶಿಷ್ಯ ಅಲ್ಯೂಮಿನಿಯಂ ಬಾಬು ಜೈಲು ಸೇರಿದನೇ ಹೊರತು ಜಾನ್ಸನ್ ಮಾತ್ರ ಮುಗುಮ್ಮಾಗಿಯೇ ಉಳಿದುಬಿಟ್ಟಿದ್ದ.

ಮಹಾಲಕ್ಷ್ಮಿ ಲೇಔಟಿನ ಫೈಜಲ್ ಮತ್ತು ವಿವೇಕ್‌ನಗರದ ಪಳನಿ ಕೊಲೆ ಕೇಸಿನಲ್ಲಷ್ಟೇ ಆತನ ಹೆಸರಿತ್ತು. ಬೇರೆಲ್ಲಾ ರೌಡಿಗಳು ಹೇಗೋ ಪೊಲೀಸರಿಗೆ ಸಿಕ್ಕುಬೀಳುತ್ತಿದ್ದರೆ, ಜಾನ್ಸನ್ ಮಾತ್ರ ಚಳ್ಳೆಹಣ್ಣು ತಿನ್ನಿಸುತ್ತಲೇ ಇದ್ದ. ಸಿಸಿಬಿ ಇನ್ಸ್‌ಪೆಕ್ಟರ್‌ಗಳಾದ ರೇವಣ್ಣ ನಂಜುಂಡೇಗೌಡ, ಎಸ್.ಕೆ. ಉಮೇಶ್, ಬಾಳೇಗೌಡ, ಅಶೋಕನ್, ರವಿಪ್ರಕಾಶ್, ಕೃಷ್ಣಕುಮಾರ್-ಹೀಗೆ ಬಂದ ಬಂದ ಪೊಲೀಸ್ ಅಧಿಕಾರಿಗಳೆಲ್ಲ ಜಾನ್ಸನ್‌ಗಾಗಿ ಅದೆಷ್ಟು ದಿನ ನಿದ್ದೆಗೆಟ್ಟರೋ!

ಹೀಗೆ ಐದು ವರ್ಷಗಳ ಕಾಲ ತಲೆಮರೆಸಿಕೊಂಡೇ ಓಡಾಡಿಕೊಂಡಿದ್ದ ಜಾನ್ಸನ್ ಅಸಂಖ್ಯಾತ ಸಿಮ್‌ಕಾರ್ಡುಗಳನ್ನಿಟ್ಟುಕೊಂಡಿದ್ದ. ಯಾವ್ಯಾವುದೋ ಊರಿಗೆ ಹೋಗಿ ಅಲ್ಲಿಂದ ತನ್ನ ಪ್ರೇಯಸಿಗೆ ಫೋನ್ ಮಾಡುತ್ತಿದ್ದ. ಈ ಮಧ್ಯೆ ಸಿಸಿಬಿಯ ಇನ್ಸ್‌ಪೆಕ್ಟರ್ ಒಬ್ಬರು ಉಪಾಯವಾಗಿ ಕಾಲಾಪತ್ಥರ್‌ನನ್ನು ಸಂಪರ್ಕಿಸಿದ್ದಾರೆ. ಜಾನ್ಸನ್‌ನನ್ನು ಹಿಡಿದುಕೊಟ್ಟರೆ ಆತನ ಪ್ರಾಣಕ್ಕೇನೂ ಅಪಾಯವಾಗದಂತೆ ನೋಡಿಕೊಳ್ಳುತ್ತೇನೆಂಬ ಭರವಸೆಯನ್ನು ಕೊಟ್ಟಿದ್ದಾರೆ. ನಂಬಿದ ಕಾಲಾಪತ್ಥರ್ ವಿವೇಕ್ ನಗರದ ಇನ್‌ಫ್ಯಾಂಟ್ ಜೀಸಸ್ ಚರ್ಚ್ ಬಳಿಯಿರುವ ಆತನ ಪ್ರೇಯಸಿಯನ್ನು ತೋರಿಸಿಕೊಟ್ಟಿದ್ದಾನೆ. ತಿಂಗಳಾನುಗಟ್ಟಲೇ ಹೊಂಚು ಹಾಕಿದ ಪೊಲೀಸರಿಗೆ ಅಂತಿಮವಾಗಿ ಏಪ್ರಿಲ್ 11 ರ ರಾತ್ರಿ ತನ್ನ ಪ್ರೇಯಸಿಯ ಮನೆಯಲ್ಲೇ ಜಾನ್ಸನ್ ಸಿಕ್ಕಿಬಿದ್ದಿದ್ದಾನೆ. ಮೊದಲೇ ಐದು ವರ್ಷ ಕಾಲ ಸತಾಯಿಸಿದ ಸಿಟ್ಟು ಬೇರೆ ಇತ್ತಲ್ಲ, ಹಾಗೇ ಬಿಟ್ಟರೆ ಇನ್ನೇನು ಅನಾಹುತ ಮಾಡಿಯಾನೋ ಎಂಬ ಆತಂಕಕ್ಕೆ ಬಿದ್ದ ಪೊಲೀಸರು ಎನ್‌ಕೌಂಟರ್ ಮಾಡೇ ತೀರಲು ನಿರ್ಧರಿಸಿದ್ದಾರೆ.


ಅದು ಜಾರಿಗೆ ಬಂದದ್ದು ಏಪ್ರಿಲ್ 12 ರ ಬೆಳ್ಳಂಬೆಳಿಗ್ಗೆ. ಪಾತಕಿಯೊಬ್ಬನ ರಕ್ತಗಾಥೆ ಪೊಲೀಸ್ ಬುಲೆಟ್ಟಿನಲ್ಲಿ ಅಂತ್ಯಗೊಂಡಿದೆ.

● ರಾ. ಸೋಮನಾಥ್
ra.somanath2010@gmail.com

ಕಾಟ್‌ರವಿಯ ಸುಪಾರಿ ಕೈಗೂಡುವ ಮೊದಲೇ.....?

ಸೈಕಲ್ ರವಿಯ ನಂತರ ಅಂಡರ್‌ವರ್ಲ್ಡ್ ಕಂಡ ನಿಸ್ಸೀಮ ಸುಪಾರಿ ಹಂತಕನೆಂದರೆ ಆತ ಜಾನ್ಸನ್!

ಹೀಗೆಂದು ವ್ಯಾಖ್ಯಾನಿಸಿದ್ದು ಓರ್ವ ಸಿಸಿಬಿ ಇನ್ಸ್‌ಪೆಕ್ಟರ್. ಮೂಲತಃ ಕಾಲಾಪತ್ಥರ್ ಶಿಷ್ಯನಾದರೂ ಜಾನ್ಸನ್ ಇತ್ತೀಚೆಗೆ ವಿಪರೀತ ಅವಲಂಬಿಸಿದ್ದು ದೀಡಿ ರವಿಯನ್ನೇ. ಆತನ ಖರ್ಚುವೆಚ್ಚಗಳನ್ನೆಲ್ಲ ಜೈಲಲ್ಲಿದ್ದುಕೊಂಡೇ ದೀಡಿ ರವಿ ನಿಭಾಯಿಸುತ್ತಿದ್ದ. ಮುಖ್ಯವಾಗಿ ಕಾಟ್‌ರವಿ ಆತನ ಮತ್ತೊಬ್ಬ ಅನ್ನದಾತನಾಗಿದ್ದ. ಏಕೆಂದರೆ ಕಾಟ್‌ರವಿಗೆ ಇವತ್ತಲ್ಲಾ ನಾಳೆ ಜೇಕೆ ವಿರುದ್ಧ ಹಗೆ ಸಾಧಿಸಲೇಬೇಕಿತ್ತು!




ಕಾಟ್‌ರವಿ

ತನ್ನ ಗುರು ಲೇಔಟ್ ಮಂಜನನ್ನು ಮುಗಿಸಿದ ಜಿದ್ದಿಗೆ ಕಾಟ್‌ರವಿ ಜೈಲೊಳಗಿದ್ದೇ ಜೇಕೆ ವಿರುದ್ಧ ಕತ್ತಿಮಸೆಯುತ್ತಿದ್ದನಂತೆ. ಜೇಕೆ ವಿರುದ್ಧ ಸೇಡಿಗೆ ನಿಸ್ಸೀಮ ಕಿಲ್ಲರ್ ಜಾನ್ಸನ್‌ನನ್ನೇ ಛೂಬಿಡುವುದು ಕಾಟ್‌ರವಿಯ ಉದ್ದೇಶವಾಗಿತ್ತಂತೆ. ಅದಕ್ಕೆಂದು ಲೇಔಟ್ ಮಂಜನ ತಮ್ಮನನ್ನು ರೆಡಿ ಮಾಡಿ ಜಾನ್ಸನ್ ಜೊತೆ ಬಿಟ್ಟಿದ್ದನಂತೆ ಕಾಟ್‌ರವಿ. ವಿಪರ್ಯಾಸವೆಂದರೆ ಜೇಕೆ ವಿರುದ್ಧ ಹಗೆ ಸಾಧಿಸುವ ಮೊದಲೇ ಜಾನ್ಸನ್ ಪೊಲೀಸರಿಗೆ ಬಲಿಯಾಗಿದ್ದಾನೆ.

ಪೊಲೀಸರು ಕೊಲ್ಲದೇ ಸರೆಂಡರ್ ಮಾಡಿಸಿಕೊಂಡು ಜೈಲಿಗೆ ಬಿಟ್ಟು ಬರುತ್ತಾರೆಂಬ ಕಾಲಾಪತ್ಥರ್‌ನ ಲೆಕ್ಕಾಚಾರ ತಲೆಕೆಳಗಾಗಿದೆ. ●

ಆಯೋಗದ ಸ್ಥಾನಮಾನಕ್ಕೆ ಕತ್ತರಿ

"ಇದು ಹಿಂದುಳಿದ ವರ್ಗಗಳ ವಿರುದ್ಧ ಆರ್‌ಎಸ್‌ಎಸ್ ಪಿತೂರಿ..."



• ಡಾ. ಸಿ.ಎಸ್. ದ್ವಾರಕಾನಾಥ್

ಸದ್ಯದ ಹಿಂದುಳಿದ ವರ್ಗಗಳ ಆಯೋಗದ ಮಹತ್ವವನ್ನು ಕಡೆಗಣಿಸುತ್ತಲೇ ಬಂದಿರುವ ರಾಜ್ಯ ಬಿಜೆಪಿ ಸರ್ಕಾರವೀಗ ಮತ್ತೊಮ್ಮೆ ಆಯೋಗಕ್ಕೆ ಆಘಾತ ನೀಡಿದೆ. ಇದು ಕೇವಲ ಆಯೋಗದ ಮೇಲಿನ ದಾಳಿಯಷ್ಟೇ ಅಲ್ಲ, ಹಿಂದುಳಿದ ವರ್ಗವನ್ನು ವ್ಯವಸ್ಥಿತವಾಗಿ ತುಳಿಯುವ ಹುನ್ನಾರವಾಗಿದೆ.

ಮೊದಲಿನಿಂದಲೂ ಡಾ. ಸಿ.ಎಸ್. ದ್ವಾರಕಾನಾಥ್ ನೇತೃತ್ವದ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಜೊತೆ ಅಸಹಕಾರ ತೋರುತ್ತಲೇ ಬಂದಿರುವ ಯಡಿಯೂರಪ್ಪರ ಚೆಡ್ಡಿ ಸರ್ಕಾರ ಆರಂಭದಲ್ಲಿ ಅಧ್ಯಕ್ಷ ಸ್ಥಾನದಿಂದ ದ್ವಾರಕಾನಾಥರನ್ನು ಕೆಳಗಿಳಿಸುವ ಪ್ರಯತ್ನ ಮಾಡಿ ಮುಖಭಂಗ ಅನುಭವಿಸಿತ್ತು, ಆಯೋಗ ನಡೆಸುತ್ತಿರುವ ಹಿಂದುಳಿದ ವರ್ಗಗಳ ಜಾತಿವಾರು ಸಮೀಕ್ಷೆಗೆ ಉದ್ದೇಶಪೂರ್ವಕವಾಗಿ ಅಡ್ಡಗಾಲು ಹಾಕುತ್ತಿರುವ ಸಂಘಪರಿವಾರ ನಿರ್ದೇಶಿತ ರಾಜ್ಯ ಸರ್ಕಾರ ಈಗ ಅಧ್ಯಕ್ಷರ, ಸದಸ್ಯರ ಸ್ಥಾನಮಾನ, ಭತ್ಯೆ ಹಾಗೂ ಸೌಲಭ್ಯಗಳಿಗೆ ಕತ್ತರಿ ಹಾಕುವ ಮೂಲಕ ಸಮೀಕ್ಷೆಗೆ ಹಿನ್ನಡೆಯುಂಟುಮಾಡುವ ನೀಚ ಕೆಲಸಕ್ಕೆ ಕೈಹಾಕಿದೆ. ಮಂಡಲ್ ಆಯೋಗದ ವರದಿ ಅನುಸಾರ ರಾಜ್ಯದಲ್ಲಿ 1997 ರಲ್ಲಿ ರಚನೆಯಾದ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಿಗೆ ಹೈಕೋರ್ಟ್ ನ್ಯಾಯಮೂರ್ತಿಗಳ ಸ್ಥಾನಮಾನ ನೀಡಲಾಗಿತ್ತು, ಆದರೀಗ ಏಕಾಏಕಿ ಆ ಸ್ಥಾನಮಾನವನ್ನು ಹಿಂಪಡೆದಿರುವ ಚೆಡ್ಡಿ ಸರ್ಕಾರ ಸಚಿವರ ಸ್ಥಾನಮಾನ ನೀಡಲು ಹೊರಟಿದೆ. ಆಯೋಗದ ಸದಸ್ಯ ಕಾರ್ಯದರ್ಶಿಗೆ ಹೆಚ್ಚಿನ ಅಧಿಕಾರ ನೀಡಿರುವ ಸರ್ಕಾರ ಆ ಮೂಲಕ ಆಯೋಗದ ಮೇಲೆ ತನ್ನ ಅಧಿಪತ್ಯ ಸ್ಥಾಪಿಸಲು ಹೊರಟಿದೆ.

ಇದೆಲ್ಲದರ ಹಿಂದೆ ಆರೆಸ್ಸೆಸ್‌ನ ಕುತಂತ್ರವಿದ್ದು, ಆಯೋಗ ನಡೆಸುತ್ತಿರುವ ಹಿಂದುಳಿದ ವರ್ಗಗಳ ಜಾತಿವಾರು ಸಮೀಕ್ಷೆಯನ್ನು ಹತ್ತಿಕ್ಕುವ ಹುನ್ನಾರವಿದೆ. ಅಥವಾ ಈ ಸಮೀಕ್ಷಾ ಕಾರ್ಯವನ್ನು ಆರ್‌ಎಸ್‌ಎಸ್‌ನ ಕೇಡರುಗಳ ಖಾಸಗಿ ಸಂಸ್ಥೆಯೊಂದಕ್ಕೆ ನೀಡುವ ಹುನ್ನಾರವಿದೆ.

ಈ ಹಿನ್ನೆಲೆಯಲ್ಲಿ ಆಯೋಗದ ಅಧ್ಯಕ್ಷ ಡಾ. ಸಿ.ಎಸ್. ದ್ವಾರಕಾನಾಥ್‌ರೊಂದಿಗೆ 'ಲಂಕೇಶ್' ನಡೆಸಿದ ಸಂದರ್ಶನದ ಮುಖ್ಯಾಂಶಗಳನ್ನು ಇಲ್ಲಿ ನೀಡಿದ್ದೇವೆ:

● *ಈಗ ಆಯೋಗದ ಸ್ಥಾನಮಾನ, ಸೌಲಭ್ಯಗಳಿಗೆ ಕತ್ತರಿ ಹಾಕುವ ಮೂಲಕ ರಾಜ್ಯ ಸರ್ಕಾರ ಮತ್ತೆ ಏಕಾಏಕಿ ಆಯೋಗದ ವಿರುದ್ಧ ಪಿತೂರಿ ನಡೆಸುತ್ತಿರುವುದರ ಕಾರಣವೇನು?*

ದ್ವಾರಕಾನಾಥ್: ಈ ಸರ್ಕಾರ ಬಂದಾಗಿನಿಂದ ಅದಕ್ಕೆ ಈ ಆಯೋಗವೇ ಇಷ್ಟವಿಲ್ಲ, ಅದು ನ್ಯಾಚುರಲ್ ಕೂಡಾ. ಏಕೆಂದರೆ ಮೂಲಭೂತವಾಗಿ ನಾವೆಲ್ಲ ಅವರ ಸಿದ್ಧಾಂತಗಳ ವಿರೋಧಿಗಳು ಎಂಬ ಅಂಶವೇ ಅವರಿಗೆ ಭಾರೀ ಕಿರಿಕಿರಿಯುಂಟು ಮಾಡುತ್ತಿದೆ. ನನ್ನನ್ನು ಇಲ್ಲಿಂದ ಒತ್ತೊಗೆಯಲು ಅಥವಾ ನನ್ನ ಕೈಕಟ್ಟಿ ಹಾಕಲು ಆಗಾಗ ಆರೆಸ್ಸೆಸ್‌ನ ಕೇಶವಕೃಪಾದಲ್ಲಿ ಚರ್ಚೆ ನಡೆಯುತ್ತಲೇ ಇರುತ್ತದೆ. ಅದರ ಭಾಗವಾಗಿ ಈಗ ನನ್ನ ಹಾಗೂ ಸದಸ್ಯರ ಸ್ಥಾನಮಾನಗಳಿಗೆ ಕತ್ತರಿ ಹಾಕುವ ವಿಫಲ ಯತ್ನಕ್ಕೆ ಈ ಸರ್ಕಾರ ಕೈಹಾಕಿದೆ.

● *ಈ ಹಿಂದೆಯೂ ಇಂತಹ ಪ್ರಯತ್ನವಾಗಿತ್ತಲ್ಲ?*

ದ್ವಾರಕಾನಾಥ್: ಬಿಜೆಪಿ ಅಧಿಕಾರಕ್ಕೆ ಬಂದಕೂಡಲೇ ಸಂಘ ಪರಿವಾರದ ನಿರ್ದೇಶನದಂತೆ ನನ್ನನ್ನು ತೆಗೆದುಹಾಕಲು ನೋಡಿದರು. ಆದರೆ ನಾವು ಹೈಕೋರ್ಟ್‌ನಿಂದ ಸ್ಟೇ ತಂದ ಮೇಲೆ ಅವರಿಗೆ ಒತ್ತೊಗೆಯುವುದು ಕಷ್ಟಕರವಾಗಿಬಿಟ್ಟಿತು.

● *ಹಿಂದುಳಿದ ವರ್ಗಗಳ ಜಾತಿವಾರು ಸಮೀಕ್ಷೆಯೇ ಅವರಿಗೆ ಮುಳ್ಳಾದಂತಿದೆಯಲ್ಲ?*

ದ್ವಾರಕಾನಾಥ್: ಅಗಸ, ಮಡಿವಾಳ, ಕುಂಬಾರ, ಜಾತಿಹಡಪದರು ಮುಂತಾದ ಹಿಂದುಳಿದ ಜಾತಿಗಳು ಲಿಂಗಾಯತ/ವೀರಶೈವ ಎಂದು ಗುರುತಿಸಿಕೊಂಡಿರುವುದರಿಂದ ಅವುಗಳಿಗೆ ಸೂಕ್ತವಾದ ಮೀಸಲು ಸೌಲಭ್ಯವೂ ಸಿಗುತ್ತಿಲ್ಲ ಹಾಗೂ ಸೂಕ್ತವಾದ ಸಾಮಾಜಿಕ ಸ್ಥಾನಮಾನವೂ ಇಲ್ಲ, ನಾವೇನಾದರೂ ಸಮೀಕ್ಷೆ ಪೂರ್ಣಗೊಳಿಸಿದರೆ ಆಗ ಈ ಎಲ್ಲ ಹಿಂದುಳಿದ ಜಾತಿಗಳು ಲಿಂಗಾಯತ ಹಣೆಪಟ್ಟಿಯಿಂದ ಹೊರಬರುತ್ತವೆ. ಈ ಜಾತಿಗಳ ಹೆಸರಲ್ಲಿ ಕೆಲ ಲಿಂಗಾಯತ ಜಾತಿಗಳು ಪಡೆಯುತ್ತಿರುವ ಸೌಲಭ್ಯಗಳು ತಪ್ಪಲಿವೆ. ಅದಕ್ಕಿಂತ ಹೆಚ್ಚಾಗಿ ಲಿಂಗಾಯತರ ನಿಜವಾದ ಸಂಖ್ಯೆ ಎಷ್ಟು ಎಂಬುದು ಬಯಲಾಗುತ್ತದೆ.

ಹಾಗೆಯೇ ಈಗ ಬಂಟರು, ಹೆಗಡೆಗಳಂತಹ ದಮನಿತ ಜಾತಿಗಳನ್ನು ಒಕ್ಕಲಿಗರೊಂದಿಗೆ ಸಮೀಕರಿಸಿರುವುದರಿಂದ ಇಲ್ಲೂ ಕೂಡಾ ಮೀಸಲಾತಿ ಸೌಲಭ್ಯ ಮೇಲ್ಜಾತಿಯ ಒಕ್ಕಲಿಗರ ಪಾಲಾಗುತ್ತಿದೆ. ಜಾತಿವಾರು ಸಮೀಕ್ಷೆ ಪೂರ್ಣಗೊಂಡರೆ ಈ ಎಲ್ಲ ತಪ್ಪುಗಳನ್ನು ಸರಿಪಡಿಸಬಹುದು.

ಬಿಜೆಪಿಗೆ ಸಂಕಟ ಶುರುವಾಗೋದೇ ಇಲ್ಲಿ, ಅದು ಹೇಳಿಕೇಳಿ ಮೇಲ್ಜಾತಿಗಳ ಪಕ್ಷ, ಅದರಲ್ಲೂ ಸದ್ಯ ಲಿಂಗಾಯತರನ್ನು ತನ್ನ ಓಟ್‌ಬ್ಯಾಂಕ್ ಎಂದು ಭ್ರಮಿಸಿರುವ ಪಕ್ಷ. ಲಿಂಗಾಯತ ಸಮುದಾಯದೊಳಗೆ ಸೇರಿರುವ ದಮನಿತ ಜಾತಿಗಳಿಗೆ ಪ್ರತ್ಯೇಕ ಐಡೆಂಟಿಟಿ ಸಿಗುವುದನ್ನು ತಪ್ಪಿಸಲು ಬಿಜೆಪಿ ಈ ಸಮೀಕ್ಷೆಗೆ ಅಡ್ಡಿ ಮಾಡುತ್ತಿದೆ.

● *ಸಾದರ ಲಿಂಗಾಯತರನ್ನು 3-ಬಿ ಕ್ಯಾಟಗರಿಗೆ ಈ ಸರ್ಕಾರ ಸೇರಿಸಿದಾಗ, ನೀವು ಅದನ್ನು ಖಡಾಖಂಡಿತವಾಗಿ ವಿರೋಧಿಸಿ ಅದು ರದ್ದಾಗುವಂತೆ ಶಿಫಾರಸ್ಸು ಮಾಡಿ ಯಶಸ್ವಿಯಾದಿರಿ. ಇದು ಕೂಡಾ....?*

ದ್ವಾರಕಾನಾಥ್: ಖಂಡಿತ, ಇದು ಕೂಡಾ ಈ ಸರ್ಕಾರಕ್ಕೆ ನಾವು ಮಾಡಿದ ಮುಖಭಂಗವೇ ಆಗಿದೆ. 'ಸಾದರು' ಹೆಸರಿನ ದಮನಿತ ಜಾತಿಯ ಸಮುದಾಯ ಕೋಲಾರ ಮತ್ತಿತರ ಕಡೆ ಇದೆ. 15-16 ಸಾವಿರದಷ್ಟಿರುವ ಈ ಸಣ್ಣ ಸಮುದಾಯದ 3-ಬಿ ಕ್ಯಾಟಗರಿಗೆ ಲಿಂಗಾಯತ ಸಾದರನ್ನು ಈ ಸರ್ಕಾರ ಸೇರಿಸಿಬಿಟ್ಟಿತು. ಇದು ದಮನಿತ ಸಾದರ ಮೀಸಲು ಸೌಲಭ್ಯಗಳನ್ನು ಪ್ರಬಲ ಲಿಂಗಾಯತ ಸಾದರ ಮಡಿಲಿಗೆ ಹಾಕುವ ಓಟ್‌ಬ್ಯಾಂಕ್ ರಾಜಕೀಯವಾಗಿತ್ತು, ಇದನ್ನು ಆಯೋಗ ವಿರೋಧಿಸಿ ಶಿಫಾರಸ್ಸು ಮಾಡಿದಾಗ, ಸರ್ಕಾರ ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಯಿತು. ಇದು ಬಿಜೆಪಿಯ ರಾಜಕೀಯ ಲೆಕ್ಕಾಚಾರಕ್ಕೆ ಬಿದ್ದ ಹೊಡೆತವಾಗಿದ್ದರಿಂದ, ಈ ಪ್ರಕರಣ ಕೂಡಾ ಅವರು ನನ್ನ ವಿರುದ್ಧ ಸತತ ಪಿತೂರಿ ನಡೆಸಲು ಪ್ರೇರೇಪಿಸಿತೆನ್ನಿ.....

● *ಆಯೋಗದ ಇನ್ಯಾವುದಾದರೂ ಯೋಜನೆ ಬಿಜೆಪಿಗಳಿಗೆ ಇರಿಸುಮುರಿಸು ಉಂಟುಮಾಡಿದೆಯೇ?*

ದ್ವಾರಕಾನಾಥ್: ಬಿಜೆಪಿಯ ಎಲ್ಲ ಅಡೆತಡೆಗಳ ನಡುವೆ ಆಯೋಗವು ರಾಜ್ಯಾದ್ಯಂತ ಪ್ರವಾಸ ಮಾಡಿ ನೂರಾರು ದಮನಿತ ಸಮುದಾಯಗಳನ್ನು ಗುರುತಿಸಿತು. ಇತ್ತೀಚೆಗೆ ಲೈಂಗಿಕ ಅಲ್ಪಸಂಖ್ಯಾತರಿಗೆ ಸಮಾಜದಲ್ಲಿ ಒಂದು ಐಡೆಂಟಿಟಿ ನೀಡುವ ಯೋಜನೆ ತಯಾರಿಸುತ್ತಿದ್ದೇವೆ. ಲೈಂಗಿಕ ಅಲ್ಪಸಂಖ್ಯಾತರಲ್ಲಿ ಬ್ರಾಹ್ಮಣರನ್ನು ಬಿಟ್ಟು ಬಹುತೇಕ ಎಲ್ಲ ಜಾತಿಯವರು, ಅದರಲ್ಲೂ ಕೆಳವರ್ಗದವರೇ ಜಾಸ್ತಿ, ಇಂಥವರಿಗೊಂದು 'ಐಡೆಂಟಿಟಿ' ಸಿಗುವುದನ್ನು ಮನುವಾದಿಗಳಿಗೆ ಸಹಿಸಲಾಗುವುದಿಲ್ಲ ಅಲ್ಲವೆ?

● *ಈಗ ನಿಮಗೆ ಸಚಿವ ಮಟ್ಟದ ಸ್ಥಾನಮಾನ ನೀಡುತ್ತಾರಂತಲ್ಲ?*

ದ್ವಾರಕಾನಾಥ್: ಸಚಿವ ಮಟ್ಟದ ಸ್ಥಾನಮಾನ ಸಿಕ್ಕರೆ ವೈಯಕ್ತಿಕ ಸೌಲಭ್ಯಗಳು ಸಿಕ್ಕಾವು... ಆದರೆ ಅಲ್ಲಿ ಆಡಳಿತ ನಡೆಸಲು ಮುಕ್ತ ಅಧಿಕಾರವಿಲ್ಲ, ಸುಪ್ರೀಂಕೋರ್ಟಿನ ನಿರ್ದೇಶನದ ಪ್ರಕಾರ ಹೈಕೋರ್ಟ್ ನ್ಯಾಯಮೂರ್ತಿಯ ಸ್ಥಾನಮಾನ ಇರಬೇಕು. ಹೀಗಿದ್ದಾಗ ನಾವು ಸಚಿವರನ್ನು ವಿಚಾರಣೆ ಮಾಡಬಹುದು. ಮುಕ್ತವಾಗಿ ಕೆಲಸ ಮಾಡಲು ಪಾರದರ್ಶಕ ವಾತಾವರಣ ಇರುತ್ತದೆ. ಈಗ ಈ ಬಿಜೆಪಿಗಳು ನನಗೆ ಸಚಿವ ಮಟ್ಟದ ಸ್ಥಾನಮಾನ ನೀಡಿ, ಆಯೋಗದ ಕಾರ್ಯದರ್ಶಿಗೆ ಹೆಚ್ಚಿನ ಅಧಿಕಾರ ನೀಡಿ ನಮ್ಮನ್ನು ರಬ್ಬರ್ ಸ್ಟಾಂಪ್ ಮಾಡಲು ಹೊರಟಿದೆ. ಮುಂದೆ ರಾಜಕಾರಣಿಯನ್ನೋ, ಆರ್‌ಎಸ್‌ಎಸ್‌ನವನನ್ನೋ ತಂದು ಈ ಆಯೋಗಕ್ಕೆ ಅಧ್ಯಕ್ಷನನ್ನಾಗಿ ಮಾಡುತ್ತೆ, ಅಲ್ಲಿಗೆ ಈ ಆಯೋಗ ಇದ್ದೂ ಸತ್ತಂತೆ. ಹಿರಿಯ ಘನತೆವೆತ್ತ ನ್ಯಾಯಮೂರ್ತಿಗಳಾಗಿದ್ದ ಡಾ. ಎಲ್.ಜಿ. ಹಾವನೂರು, ವೆಂಕಟಸ್ವಾಮಿಗಳು ಆಡಳಿತ ನಡೆಸಿದ ಜಾಗದಲ್ಲಿ ಹಿಂದುಳಿದ ವರ್ಗಗಳ ಬಗ್ಗೆ ಜ್ಞಾನವೇ ಇಲ್ಲದ ಆದರೆ ಅಸೂಯೆ ತುಂಬಿಕೊಂಡಿರುವವನೊಬ್ಬನ ಕೈಗೆ ಆಯೋಗ ಸಿಕ್ಕರೆ ಹಿಂದುಳಿದ ವರ್ಗಗಳಿಗೆ ಇನ್ನಷ್ಟು ಅನ್ಯಾಯವೇ ಜರುಗಲಿದೆ....

● *ಇಲ್ಲಿ ನಿರ್ದಿಷ್ಟವಾಗಿ ಯಾವುದಾದರೂ ವ್ಯಕ್ತಿ ಅಥವಾ ಗುಂಪು ತಮ್ಮ ವಿರುದ್ಧ ಪಿತೂರಿ ನಡೆಸುತ್ತಿದೆಯಾ?*

ದ್ವಾರಕಾನಾಥ್: ಬಿಜೆಪಿ ಅಧಿಕಾರಕ್ಕೆ ಬಂದಾದ ಮೇಲೂ ನಾವು ಬಹಿರಂಗವಾಗಿ ಕೋಮುವಾದಿಗಳ ವಿರುದ್ಧ ಹೇಳಿಕೆ ನೀಡುತ್ತಿರುವುದು, ಸರ್ಕಾರದ ಜನವಿರೋಧಿ ಕಾರ್ಯಕ್ರಮಗಳನ್ನು ಬಹಿರಂಗವಾಗಿ ಪ್ರತಿಭಟಿಸುತ್ತಿರುವುದನ್ನು ಬಿಜೆಪಿಯಲ್ಲಿನ ಆರ್‌ಎಸ್‌ಎಸ್ ಗುಂಪಿಗೆ ಸಹಿಸಿಕೊಳ್ಳಲಾಗುತ್ತಿಲ್ಲ. ಅವರು ನನ್ನ ವಿರುದ್ಧ ಪಿತೂರಿ ನಡೆಸಿದಾಗ ಮತ್ತು ಹಿಂದುಳಿದ ವರ್ಗಗಳ ವಿರುದ್ಧ ಅನ್ಯಾಯವೆಸಗಿದಾಗ ನಾವು ಅದನ್ನು ಪ್ರತಿಭಟಿಸಿ ಬಿಜೆಪಿ ಸರ್ಕಾರಕ್ಕೆ, ಆರ್‌ಎಸ್‌ಎಸ್ ಗುಂಪಿಗೆ ಮುಖಭಂಗ ಮಾಡಿದ್ದೇವೆ. ಆ ಕಾರಣಕ್ಕಾಗಿ ಆ ಗುಂಪಿಗೆ ನನ್ನನ್ನು ಆಯೋಗದ ಅಧ್ಯಕ್ಷ ಸ್ಥಾನದಲ್ಲಿ ಸಹಿಸಲು ಆಗುತ್ತಿಲ್ಲ.

ಮುಖ್ಯಮಂತ್ರಿಗಳ ಕಾನೂನು ಕಾರ್ಯದರ್ಶಿಯಾಗಿರುವ ಆರ್. ದಿವಾಕರ್ ಎಂಬ ಮನುಷ್ಯ ಈ ಪಿತೂರಿಯ ಕೇಂದ್ರಸ್ಥಾನದಲ್ಲಿದ್ದಾನೆ. ನೆಟ್ಟಗೆ ಒಂದು ಕೇಸು ನಡೆಸಲು ಬಾರದ ಈ ಮನುಷ್ಯನ ಜೊತೆ ಒಂದು ಕೋಮುವಾದಿ ಕೂಟವಿದೆ. ಈ ಕೂಟಕ್ಕೆ ಮತ್ತು ಆರೆಸ್ಸೆಸ್ ಗುಂಪಿಗೆ ಆಯೋಗದ ಕೆಲಸಗಳನ್ನು ಅರಗಿಸಿಕೊಳ್ಳಲಾಗುತ್ತಿಲ್ಲ....

● *ರಾಜ್ಯ ಸರ್ಕಾರ ಆಯೋಗದ ಅಧ್ಯಕ್ಷರ, ಸದಸ್ಯರ ಸ್ಥಾನಮಾನಗಳಿಗೆ ಕತ್ತರಿ ಹಾಕುವ ಮೂಲಕ ಸುಪ್ರೀಂಕೋರ್ಟಿನ ನಿರ್ದೇಶನದ ಪ್ರಕಾರ ರೂಪುಗೊಂಡ 1993 ರ ಆಕ್ಟ್ ಅನ್ನು ಉಲ್ಲಂಘಿಸಿದಂತಾಗಲಿಲ್ಲವೆ?*

ದ್ವಾರಕಾನಾಥ್: ಖಂಡಿತ. ರಾಜ್ಯ ಸರ್ಕಾರ ಈ ಮೂಲಕ ಮಹಾನ್ ತಪ್ಪನ್ನು ಮಾಡಿದೆ. ಈಗಾಗಲೇ ರಾಜ್ಯದ ನಾನಾಕಡೆ ಇದರ ವಿರುದ್ಧ ನೂರಾರು ಸಂಘಟನೆಗಳು ಪ್ರತಿಭಟನೆಗಳನ್ನು ನಡೆಸುತ್ತಿವೆ.

ನಾವೂ ಕೂಡಾ ಕೋರ್ಟ್ ಮೆಟ್ಟಿಲೇರುತ್ತಿದ್ದೇವೆ. ಈ ಸಲವೂ ನಾವೇ ಗೆಲ್ಲುತ್ತೇವೆ. ಮತ್ತು ಈ ಸರ್ಕಾರಕ್ಕೆ ಮತ್ತೊಂದು ಮುಖಭಂಗ ಖಚಿತ....

ಸಂದರ್ಶನ: ಪಿ.ಕೆ. ಮಲ್ಲನಗೌಡರ್

ಬೆಂಕಿ ಹಾಕಿದ ಬ್ರಾಹ್ಮಣರನ್ನು ಅರೆಸ್ಟು ಮಾಡುವುದೆಂದರೇನು?



ಬೆಂಗಳೂರಿನ ಗೋಲ್ಡನ್ ಟವರ್‌ನ ಮೇಲ್ಚಾವಣಿಗೆ ಬೆಂಕಿ ಹಾಕಿದವರಾರೆಂದು ಕಡೆಗೂ ನಮ್ಮ ಪೊಲೀಸರು ಪತ್ತೆಹಚ್ಚಿ ದಕ್ಷತೆಯನ್ನು ಮೆರೆದಿದ್ದಾರಂತಲ್ಲಾ, ವಿಪ್ರೋತ್ತಮರೇ ಹೇಳುವ ಪ್ರಕಾರ, ಗೋಲ್ಡನ್ ಟವರ್‌ನ ಮಾಲೀಕ ತನ್ನ ಪಾಪಗಳನ್ನು ತೊಳೆದುಕೊಳ್ಳುವ ಸಲುವಾಗಿ ಸ್ಥಳೀಯ ವಿಪ್ರೋತ್ತಮರಿಂದ ಹೋಮ ಮಾಡಿಸುವ ಬದಲು ವಾರಣಾಸಿಯಿಂದಲೇ ಬ್ರಾಹ್ಮಣರನ್ನು ಕರೆಸಿ ಟವರ್ ಮೇಲೆ ಬೆಂಕಿ ಹಾಕಿಸಿದನಂತಲ್ಲಾ, ವಾರಣಾಸಿಯ ಬ್ರಾಹ್ಮಣರು ಬೆಂಗಳೂರಿನ ಭೂರಿ ಭೋಜನ ನೆನೆಯುತ್ತ ಮೈಮರೆತು ಹೋಮ ಮಾಡುತ್ತಿರುವಾಗ, ಬೆಂಕಿ ಬ್ರಾಹ್ಮಣರ ಕಣ್ಣು ತಪ್ಪಿಸಿ ತನ್ನ ಕೆನ್ನಾಲಿಗೆಯಿಂದ ಛಾವಣಿ ನೆಕ್ಕಿದ್ದು ಯಾರಿಗೂ ಕಾಣಲಿಲ್ಲವಂತಲ್ಲಾ, ಕಡೆಗೆ ದಿಢೀರನೆ ಬೆಂಕಿ ಹತ್ತಿಕೊಂಡಾಗ ಬ್ರಾಹ್ಮಣರು ತಿಕ ಸುಟ್ಟ ಬೆಕ್ಕಿನಂತೆ ಪರಾರಿಯಾದರಂತಲ್ಲಾ, ಥೂತ್ತೇರಿ!

* * * * *

ಹೋಮದ ಬೆಂಕಿ ಹೋಮದಲ್ಲೇ ಇರಬೇಕು, ಅದು ಬಿಟ್ಟು ಛಾವಣಿ ಸುಡುತ್ತದೆಂದರೆ ಅದು ಇನ್ನೆಂತಹ ಬೆಂಕಿ? ಬೆಂಕಿ ಹಾಕಿದವರು ನಿಜಕ್ಕೂ ಹೋಮ ನಡೆಸಿಕೊಡಲು ಯೋಗ್ಯರಾದ ವಿಪ್ರೋತ್ತಮರೋ? ಅಥವಾ ಬೆಂಗಳೂರಿಗೆ ಬೆಂಕಿ ಹಾಕಲು ಬಂದ ವಾರಣಾಸಿಯ ವನವಾಸಿಗಳೇ? ಎಂಬಿತ್ಯಾದಿ ಜಿಜ್ಞಾಸೆಗಳಿಗೆ ಒಳಗಾದ ನಮ್ಮ ಪೊಲೀಸರು ಶಾನೆ ತಲೆಕೆರೆದುಕೊಂಡು ಹುಡುಕಲಾಗಿ, ಒಟ್ಟು ಹನ್ನೆರಡು ಜನ ಗುರುಶಿಷ್ಯರಂತಿದ್ದ ಬ್ರಾಹ್ಮಣರು ಸಿಕ್ಕಿದರಂತಲ್ಲಾ, ಅವರ ಮಾತು ಮತ್ತು ನಡವಳಿಕೆಯನ್ನು ಪೊಲೀಸರು ಆಮೂಲಾಗ್ರ ಪರಿಶೀಲಿಸಲಾಗಿ, ಎಲ್ಲರೂ ಬೆಂಕಿ ಕಾಯಿಸುತ್ತ ಭೋಜನ ಬಾರಿಸುವ ಬುದ್ಧಿಮಾಂದ್ಯರಂತೆ ಕಾಣಲಾಗಿ, ತಡಮಾಡದೆ, ಅವರನ್ನೆಲ್ಲಾ ಅರೆಸ್ಟು ಮಾಡಿ ಗೊಡ್ಡು ದನಗಳನ್ನು ಕಸಾಯಿಖಾನೆಗೆ ಎಳೆದುಕೊಂಡು ಹೋದಂತೆ ದರದರ ಎಳೆದು ಕೋರ್ಟಿಗೆ ಹಾಜರುಪಡಿಸಿದಂತಲ್ಲಾ, ಥೂತ್ತೇರಿ!!

ಥೂತ್ತೇರಿ

▸ಯಾಹೂ

* * * * *

ಛಾವಣಿಗೆ ಬೆಂಕಿ ಹಾಕಿದ ಅಪರಾಧಿಗಳನ್ನು ದಿಟ್ಟಿಸಿದ ನ್ಯಾಯಾಧೀಶರು ಪೊಲೀಸರ ದಿಟ್ಟಕ್ರಮವನ್ನು ಮನಸ್ಸಿನಲ್ಲೇ ಮೆಚ್ಚಿದರಂತಲ್ಲಾ, ನಿಜಕ್ಕೂ ಬೆಂಕಿ ಹಾಕಿದವರೇ ಅಪರಾಧಿಗಳೇ ಹೊರತು, ಹಾಕಲು ಅವಕಾಶ ಮಾಡಿಕೊಟ್ಟವನಲ್ಲ, ಏಕೆಂದರೆ ಬೆಂಕಿಯೊಡನೆ ಸರಸವಾಡುವವರು ಎಚ್ಚರಿಕೆಯಿಂದಿರಬೇಕಾದದ್ದು ನ್ಯಾಯ ಎಂದು ಪೊಲೀಸರು ತರ್ಕ ಮಾಡುತ್ತಿರಬೇಕಾದರೆ, ಇತ್ತ ಕೆಲ ವಿಕೃತ ಭಟ್ಟರು "ಬ್ರಾಹ್ಮಣರನ್ನು ಅರೆಸ್ಟು ಮಾಡುವುದೆಂದರೇನು? ಅರೆಸ್ಟು ಮಾಡಿದರೂ ಜಾಮೀನುರಹಿತವಾಗಿ ಬಿಡುಗಡೆ ಮಾಡುವುದು ಬಿಟ್ಟು ಕೋರ್ಟಿನವರೆಗೂ ಎಳೆದುಕೊಂಡು ಹೋಗುವುದರೆಂದರೇನು? ಹೀಗಾದರೆ ಪೊಲೀಸರಿಗೆ ಒಳ್ಳೆಯದಾಗಲ್ಲ, ಪೊಲೀಸ್ ಕಮೀಷನರಿಗೂ ಕೇಡಾಗುತ್ತವೆ. ಹಸಿದ ಬ್ರಾಹ್ಮಣರ ಸಿಟ್ಟಿನ ಶಾಪದ ಪರಿಣಾಮ ಈ ಜನಕ್ಕೆ ಇನ್ನೂ ಗೊತ್ತಿಲ್ಲ, ಈಗಾಗಲೇ ಜಗತ್ತಿನ ತಾಪಮಾನದ ಉರಿಗೆ ವಿಪ್ರರನ್ನು ಕಡೆಗಣಿಸಿರುವುದೇ ಕಾರಣ ಎಂದು ನಮ್ಮ ಮಲೆನಾಡಿನ ವಯ್ಯಾರಿ ಸ್ವಾಮಿ ಹೇಳಿದ್ದನ್ನು ಇನ್ನಾದರೂ ಮಥಿಸಿ ಮನನ ಮಾಡಿ" ಎಂದವಂತಲ್ಲಾ, ಥೂತ್ತೇರಿ!!

* * * * *

ಕರ್ನಾಟಕ ಕಂಡ ಅಪರೂಪದ ಮುಖ್ಯಮಂತ್ರಿಗಳಾದ ಎಡೂರಪ್ಪನ ಭವಿಷ್ಯ ಅವರಪ್ಪ ಸಿದ್ದಲಿಂಗಪ್ಪನಿಗೆ ಗೊತ್ತಾಗಿ ಹೋಗಿತ್ತಂತಲ್ಲಾ, ಬಾಲ್ಯದಲ್ಲೇ ಎಡೂರಪ್ಪನ ಆಕಾರ ನೋಡಿದ ಅವರಪ್ಪ "ಮುಂದೆ ನೀನು ಬಹಳ ದೊಡ್ಡ ವ್ಯಕ್ತಿಯಾಗುವವನಿದ್ದಿ ಮತ್ತು ಹೆಸರಾಂತ ವ್ಯಕ್ತಿ ಕೂಡ ಆಗುತ್ತಿ" ಎಂದು ಭವಿಷ್ಯ ನುಡಿದಿದ್ದರಂತಲ್ಲಾ, ಮಂಡ್ಯ ಜಿಲ್ಲೆಯ ಬರ ತಾಲ್ಲೂಕುಗಳಲ್ಲಿ ಮೊದಲನೆಯದಾದ ಕೆ.ಆರ್. ಪೇಟೆಯ ಬೂಕನಕೆರೆಯ ಬಡಕುಟುಂಬದಲ್ಲಿ ಹುಟ್ಟಿದ ಎಡೂರಪ್ಪ ಹೆಸರಾಂತ ದೊಡ್ಡ ವ್ಯಕ್ತಿ ಹೇಗಾಗಬಲ್ಲ ಎಂಬ ವಿವರ ಸಿದ್ದಲಿಂಗಪ್ಪನಿಗೆ ಗೊತ್ತಿಲ್ಲದಿರಲಿಲ್ಲವಂತಲ್ಲಾ, ಆದರೂ ಆತ ಹೇಳಿದ ಮಾತನ್ನು ನಂಬಿ ಎಡೂರಪ್ಪ ಅಲ್ಲೇ ಕುಳಿತಿದ್ದರೆ ಸದರಿ ಎಡೂರಪ್ಪ ಮಂಡ್ಯದ ಜಿಲ್ಲಾ ಪಂಚಾಯ್ತಿ ಸದಸ್ಯರಾಗುತ್ತಿದ್ದರು, ಇಲ್ಲ ಅಂದರೆ ಹೂ ಮತ್ತು ನಿಂಬೆಹಣ್ಣಿನ ವ್ಯಾಪಾರಿಯಾಗುತ್ತಿದ್ದರು. ಅಪ್ಪನ ಮಾತನ್ನು ಮೀರಿ ಊರು ಬಿಟ್ಟ ಕಾರಣಕ್ಕೆ ಇವತ್ತಿನಂತಾದರು ಎಂದು ಯಡ್ಡಿಯ ಇತ್ತೀಚಿನ ಹಿಂಬಾಲಕ ಖಾತ ಶಿವರಾಮೇಗೌಡನ ವ್ಯಾಖ್ಯಾನವಾಗಿದೆಯಂತಲ್ಲೂ ಥೂತ್ತೇರಿ!!

* * * * *


ಸೂಕ್ತ ಸಮಯದಲ್ಲಿ ತಪ್ಪು ತೀರ್ಮಾನ ತೆಗೆದುಕೊಂಡು ಅದರಲ್ಲೇ ಯಶಸ್ಸು ಕಾಣುವ ಎಡೂರಪ್ಪ, ಪಂಚಾಯ್ತಿ ಚುನಾವಣೆ ಘೋಷಣೆಯಾದ ಕೂಡಲೇ "ಬೆಳಗಾವಿ ನಮ್ಮ ಎರಡನೇ ರಾಜಧಾನಿ" ಎಂದು ಕ್ಯಾತೆ ತೆಗೆದು ಮಹಾರಾಷ್ಟ್ರದ ಮೂರ್ಖ ರಾಜಕಾರಣಿಗಳನ್ನು ಕೆದಕಿದ್ದಾರಂತಲ್ಲಾ, ಬೆಳಗಾವಿ ನಮ್ಮದೆಂದು ಬರೀ ಕೊಚ್ಚಿಕೊಳ್ಳುವುದಕ್ಕೆ ಬದಲು ಗಡಿನಾಡ ಶಾಲೆಗಳಿಗೆ ಕಟ್ಟಡ ಗಳಿವೆಯೇ? ಕನ್ನಡ ಮಾಸ್ತರು ಸರಿಯಿದ್ದಾರೆಯೇ? ಅಲ್ಲಿನ ಊರುಗಳಲ್ಲಿ ಕನ್ನಡವಿನ್ನು ಉಸಿರಾಡುತ್ತಿದೆಯೇ? ಅಥವಾ ಕನ್ನಡಿಗರು ಮರಾಠಿಗರ ಭಯದಲ್ಲಿ ಬದುಕುತ್ತಿದ್ದಾರೆಯೇ? ಇತ್ಯಾದಿ ಭಾಷಾ ಸಂವಹನದ ಕಾರ್ಯಬಿಟ್ಟು ಬಾರ್ಡರಿನಲ್ಲಿ ಬಂಗಿನೆಡುವಂತಹ ಹೇಳಿಕೆ ಕೊಡುತ್ತಿರುವ ಈ ಯಡ್ಡಿ ಶುದ್ಧ ತರಲೆ ಕೆಲಸದಲ್ಲಿ ನಿರತನಾಗುವ ಎಲ್ಲಾ ಸೂಚನೆಗಳನ್ನು ತೋರಿದ್ದಾರಂತಲ್ಲಾ, ಬೆಳಗಾವಿ ಎರಡನೇ ರಾಜಧಾನಿಯಾಗುವುದೆಂದರೆ ಹೊಸ ಕಾಮಗಾರಿಗೆ ಹಾತೊರೆಯುವ ಬಿಜೆಪಿಗಳಿಗೆ ಭೋಜನ ಒದಗಿಸುವ ಹೊಸ ಕಾರ್ಯಕ್ರಮದ ಉದ್ಘಾಟನೆಯಿಂದೇ ಕಾಂಗ್ರೆಗಳು ಭಾವಿಸಿ ಕಂಗಾಲಾಗಿವೆಯಂತಲ್ಲಾ, ಥೂತ್ತೇರಿ!!

ರಾಘವೇಶ್ವರನ ಶಿಷ್ಯನಿಗೆ ಜೈಲು

ಹರೀಶ್ ರೈ ಹಂತಕ ಎಡಪತ್ಯ ಚಂದ್ರ ದಂಪತಿಗೆ ಜೀವಾವಧಿ ಶಿಕ್ಷೆ

13 ವರ್ಷಗಳ ಹಿಂದೆ ನಡೆದ ಹರೀಶ್ ರೈ (ಪುತ್ತೋಳಿ) ಕೊಲೆಯನ್ನು ಆತನ ಗಾಂಪಾ ಗೆಳೆಯರೂ ಸೇರಿದಂತೆ ಎಲ್ಲರೂ ಅಕ್ಷರಶಃ ಮರೆತೇ ಬಿಟ್ಟಿದ್ದರು. ಈ ಮಧ್ಯೆ ಹರೀಶನನ್ನು ಕೊಂದಿದ್ದ ಎಡಪತ್ಯ ಚಂದ್ರ ಕೂಡಾ ಎಲ್ಲರ ಹಾರಾಟ-ಹೋರಾಟಗಳ ನಡುವೆಯೂ, ಎಲ್ಲಾ ಸಾಕ್ಷ್ಯಾಧಾರಗಳ ನಡುವೆಯೂ ಕೊಲೆ ಮಾಡಿ ದಕ್ಕಿಸಿಕೊಂಡ ಗೆಟಪ್ಪಿನಲ್ಲಿ ಓಡಾಡಿಕೊಂಡಿದ್ದ. ಇತ್ತೀಚೆಗೆ 'ಕೌವ್‌ಬಾಯ್ ಸ್ವಾಮಿ' ರಾಘವೇಶ್ವರನ ಶಿಷ್ಯನಾಗಿ ತನ್ನ ಊರಲ್ಲೇ ಗೋವುಗಳ ಆಶ್ರಮ ಮಾಡಿದ್ದ. 'ರಾಷ್ಟ್ರೀಯ ಭಾವೈಕ್ಯ ಪ್ರತಿಷ್ಠಾನ' ಎಂಬ ಸಂಘ ಕಟ್ಟಿಕೊಂಡು ಸಮಾಜ ಸೇವೆಗೆ ಇಳಿದಿದ್ದ. ರಾಘವೇಶ್ವರ ಸ್ವಾಮಿಗೆ ಆಪ್ತನಾಗುವ ಅವಸರದಲ್ಲಿ ತನ್ನ ಸ್ವಜಾತಿಯ ಬಾಂಧವರ ನಿಷ್ಠುರವನ್ನೂ ಕಟ್ಟಿಕೊಂಡಿದ್ದ. ಜೊತೆಗೆ ಶಾಸಕನಾಗಲು ಟಿಕೆಟ್ ಆಕಾಂಕ್ಷಿಗಳ ಪಟ್ಟಿಯಲ್ಲೂ ಈತನ ಹೆಸರು ಕಾಣಿಸಿಕೊಂಡಿತ್ತು. ಆದರೇನು, ತಡವಾಗಿಯಾದರೂ ನ್ಯಾಯದೇವತೆ ಕಣ್ಣು ಬಿಟ್ಟಿದ್ದಾಳೆ. ಸತ್ಯಕ್ಕೆ ಸಾವಿಲ್ಲ ಎನ್ನುವುದನ್ನು ಎಡಪತ್ಯ ಚಂದ್ರ ದಂಪತಿಗೆ ಜೀವಾವಧಿ ಶಿಕ್ಷೆ ಘೋಷಿಸುವ ಮೂಲಕ ನ್ಯಾಯಾಲಯ ಸಾಬೀತುಪಡಿಸಿದೆ.

'ಉಪ್ಪು ತಿಂದ ಮೇಲೆ ನೀರು ಕುಡಿಯಲೇ ಬೇಕು' ಎಂಬ ಗಾದೆಮಾತು ಪುತ್ತೂರಿನ ಎಡಪತ್ಯ ಚಂದ್ರ-ವೀಣಾ ಎಂಬ ಹಂತಕ ದಂಪತಿಗಳ ಪಾಲಿಗೆ ನಿಜವಾಗಿದೆ.


ಎಡಪತ್ಯ ಚಂದ್ರ

ಹದಿಮೂರು ವರ್ಷಗಳ ಹಿಂದೆ ಬೆಂಗಳೂರಿನಿಂದ ಮಂಗಳೂರಿಗೆ ಪ್ರಯಾಣಿಸಿದ್ದ ಉಪ್ಪಿನಂಗಡಿಯ ಹರೀಶ್ ರೈ ಯಾನೆ ಪುತ್ತೋಳಿ ನಾಪತ್ತೆಯಾಗಿದ್ದ. ಆತನ ನಾಪತ್ತೆಯ ಹಿಂದೆ ಆತನ ಮಾಜಿ ಪ್ರೇಯಸಿ ಮತ್ತು ಅವಳ ಗಂಡ ಎಡಪತ್ಯ ಚಂದ್ರನ ಕೈವಾಡದ ಬಗ್ಗೆ ದಿನಕ್ಕೊಂದು ಕತೆ ಹುಟ್ಟಿಕೊಂಡು ನೈಜ ಥ್ರಿಲ್ಲರ್ ಸರಣಿಯಂತೆ ಕುತೂಹಲ ಕೆರಳಿಸುತ್ತಾ ರಾಜ್ಯದಾದ್ಯಂತ ಪ್ರಚಾರ ಪಡೆದಿತ್ತು. ಹರೀಶನನ್ನು ಕೊಲೆ ಮಾಡಿದ್ದು ಚಂದ್ರ ದಂಪತಿಗಳೇ ಎನ್ನುವುದನ್ನು ಸಾಕ್ಷ್ಯ ಸಮೇತ ಸಾಬೀತುಪಡಿಸಲು ಉಪ್ಪಿನಂಗಡಿಯ ಹರೀಶನ ಗಾಂಪಾ ಗೆಳೆಯರು ಪರ್ಯಾಯ ಪೊಲೀಸರಂತೆ ಓಡಾಡಿದ್ದರು. ಚಂದ್ರನ ಹಣದ ಥೈಲಿಗೆ ಪೊಲೀಸರು ನಾಲಿಗೆ ಚಾಚಿ ತನಿಖೆಯನ್ನು ಹಳ್ಳ ಹಿಡಿಸುತ್ತಾರೆ ಎಂಬ ಕಾರಣಕ್ಕೆ ಉಪ್ಪಿನಂಗಡಿ ಬಂದ್ ಆಚರಿಸಿ ಪ್ರಕರಣವನ್ನು ರೌಡಿ ನಿಗ್ರಹ ದಳಕ್ಕೆ ಹಸ್ತಾಂತರಿಸುವಂತೆ ಮಾಡಿದ್ದರು. ಈ ಪ್ರಕರಣ ಕುರಿತಂತೆ ಸಿಓಡಿ ತನಿಖೆಯೂ ನಡೆಯಿತು. ಆನಂತರ ಕೇಸ್ ಕೋರ್ಟಿನ ಕಡತಗಳಲ್ಲಿ ಕೊಳೆಯುತ್ತಾ ಹತ್ತರೊಟ್ಟಿಗೆ ಹನ್ನೊಂದಾಗಿ ಎಲ್ಲರೂ ಮರೆತೇಬಿಟ್ಟರು.


ಹಂತಕ ಚಂದ್ರ ಕೂಡಾ ಅಷ್ಟೊತ್ತಿಗೆ ರಾಜಕಾರಣಿಯ ಗೆಟಪ್ಪಿನಲ್ಲಿ ಪುತ್ತೂರಲ್ಲಿ ಮಿಂಚತೊಡಗಿದ್ದ. ಎ.ಪಿ.ಎಂ.ಸಿ. ನಿರ್ದೇಶಕನಾಗಿ, ರಾಷ್ಟ್ರೀಯ ಭಾವೈಕ್ಯ ಪ್ರತಿಷ್ಠಾನ ಎಂಬ ಸ್ವಯಂ ಸೇವಾಸಂಸ್ಥೆಯನ್ನು ಕಟ್ಟಿಕೊಂಡು ತನ್ನ ಊರಾದ ಸವಣೂರಿಗೆ ರಾಘವೇಶ್ವರ ಸ್ವಾಮಿಯನ್ನು ಕರೆಸಿ ಗೋವುಗಳ ಆಶ್ರಮ ಮಾಡಿ 'ಕೌವ್‌ಬಾಯ್'ನ ಶಿಷ್ಯನಾಗಿ ಮಿಂಚತೊಡಗಿದ್ದ. ಹರೀಶ್ ರೈಯನ್ನು ಕೊಲೆ ಮಾಡಿ ದಕ್ಕಿಸಿಕೊಂಡ ಅಹಂ ಚಂದ್ರ ನೆತ್ತಿಗೇರಿತ್ತು. ಕಳೆದ ಎಂಎಲ್ಎ ಚುನಾವಣೆಯಲ್ಲಿ ಪುತ್ತೂರಿನಿಂದ ಕಾಂಗ್ರೆಸ್ ಟಿಕೆಟ್ ಅಕಾಂಕ್ಷಿಯಾಗುವಷ್ಟರಮಟ್ಟಿಗೆ ಆತ ಬೆಳೆದಿದ್ದ.

ಇದೆಲ್ಲದರ ಮಧ್ಯೆ ಹರೀಶ್ ರೈ ಕೊಲೆ ಕೇಸ್ ವಾದಪ್ರತಿವಾದ, ಸಾಕ್ಷ್ಯಾಧಾರಗಳ ವಿಚಾರಣೆ ಎಂದೆಲ್ಲಾ ಕುಂಟುತ್ತಾ, ತೆವಳುತ್ತಾ ಪುತ್ತೂರಿನ ತ್ವರಿತ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿತು. ಆದರೆ ಅಲ್ಲೀತನಕ ಈ ಕೇಸನ್ನು ಮುನ್ನಡೆಸುತ್ತಾ ದಡ ಸೇರಿಸಲು ಯತ್ನಿಸುತ್ತಿದ್ದ ಮಂಗಳೂರಿನ ಖ್ಯಾತ ವಕೀಲರಾದ ವೈ.ಟಿ. ಹೆಗ್ಡೆ ಹೃದಯಾಘಾತದಿಂದ ಅಸುನೀಗಿದರು. ಆದರೂ ಕಳೆದ ಮಾರ್ಚ್ ತಿಂಗಳ ಕೊನೆಯಲ್ಲಿ ಪುತ್ತೂರಿನ ತ್ವರಿತ ನ್ಯಾಯಾಲಯ ಹರೀಶ್ ಪ್ರಕರಣದಲ್ಲಿ ಎಡಪತ್ಯ ಚಂದ್ರ ಮತ್ತು ಆತನ ಹೆಂಡತಿ ವೀಣಾ ಭಾರತೀಯ ದಂಡ ಪ್ರಕ್ರಿಯೆ 235 (2) ಅಡಿ ಅಪರಾಧಿಗಳು ಎಂದು ತೀರ್ಪು ನೀಡಿತು. ಹಾಗೆಯೇ ಮೊನ್ನೆ ಎಪ್ರಿಲ್ 8ರಂದು ಈ ಇಬ್ಬರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ಮತ್ತು 5 ಲಕ್ಷ ದಂಡವನ್ನು ವಿಧಿಸಿತು. ಹಣಬಲ ಮತ್ತು ಅಧಿಕಾರಬಲದ ನಡುವೆಯೋ ಸತ್ಯಕ್ಕೆ ಸಾವಿಲ್ಲ ಎನ್ನುವುದು ನ್ಯಾಯಾಲಯ ಸಾಬೀತುಮಾಡಿತು.

ಫ್ಲಾಷ್ ಬ್ಯಾಕ್

ಚುರುಕು ವ್ಯಕ್ತಿತ್ವದ, ಸಂಘಟನಾ ಚತುರನೂ, ಸ್ಫುರದ್ರೂಪಿಯೂ ಆಗಿದ್ದ ಹರೀಶ್ ರೈ ಉಪ್ಪಿನಂಗಡಿಯಲ್ಲಿ ಗಾಂಪಾ (ಗಾಂಧಿ ಪಾರ್ಕ್) ಗೆಳೆಯರ ಬಳಗವನ್ನು ಸಂಘಟಿಸಿದ್ದ ಉಪ್ಪಿನಂಗಡಿಯಲ್ಲಿ ಈ ಹರೀಶ್ ರೈ ಪುತ್ತೋಳಿ ಎಂದೇ ಪ್ರಚಲಿತನಾಗಿದ್ದ. ಕಾಲೇಜು ದಿನಗಳಲ್ಲಿ ಹರೀಶನ ಸ್ನೇಹಿತೆ ಆಗಿದ್ದವಳು ವೀಣಾ. ಆದರೆ ಅದೇನಾಯಿತೋ, ಆನಂತರ ವೀಣಾ ಪುತ್ತೂರಿನ ಎಡಪತ್ಯ ಚಂದ್ರನೊಂದಿಗೆ ಮದುವೆಯಾಗಿ ಸೆಟ್ಲ್ ಆದಳು. ಇತ್ತ ಹರೀಶ್ ಉಪ್ಪಿನಂಗಡಿಯಲ್ಲಿ ಫೈನಾನ್ಸ್, ರೋಟರಿ ಕ್ಲಬ್, ಸಾಂಸ್ಕೃತಿಕ ಚಟುವಟಿಕೆ ಎಂದೆಲ್ಲಾ ಓಡಾಡುತ್ತಿದ್ದ.


1997ರಲ್ಲಿ ಪುತ್ತೂರಿನ ಬುಡಿಯೂರ್ ರಾಧಾಕೃಷ್ಣ ರೈ, ಕೆ.ಪಿ. ಉಲ್ಲಾಸ್, ನಂದರಾಜ್ ಪಾಲುದಾರಿಕೆಯಲ್ಲಿ ಲಿಯಾನಾ ಲೀಸಿಂಗ್ ಕಂಪೆನಿಯೊಂದನ್ನು ಆರಂಭಿಸಲು ಹರೀಶ್ ಪ್ಲಾನ್ ರೂಪಿಸಿ ಅದಕ್ಕಾಗಿ ಓಡಾಡುತ್ತಿದ್ದ. ಈ ನಡುವೆ ಪುತ್ತೂರಿನಲ್ಲಿ ಹರೀಶನ ತಂಗಿಯ ಮನೆಯ ಪಕ್ಕವೇ ಚಂದ್ರ ಮತ್ತು ವೀಣಾ ವಾಸಿಸುತ್ತಿದ್ದರು. ಇದರಿಂದಾಗಿ ವೀಣಾ ಜತೆ ಮತ್ತೆ ಹರೀಶನ ಸಖ್ಯ ಬೆಳೆಯಿತು. ಇವರ ನಡುವೆ ನಿರಂತರ ಸಂಪರ್ಕವಿದ್ದದ್ದು ವೀಣಾಳ ಗಂಡ ಚಂದ್ರನ ಅರಿವಿಗೆ ಬಂತು. ಆಗ ತನ್ನ ಸಂಸಾರದಲ್ಲಿ ಮುಳ್ಳಾಗಿದ್ದ ಹರೀಶನನ್ನು ಮುಳ್ಳಿನಿಂದಲೇ ಮುಗಿಸಲು ಚಂದ್ರ ನಿರ್ಧರಿಸಿದ. ತನ್ನ ಹೆಂಡತಿಯ ಮೂಲಕವೇ ಹರೀಶನನ್ನು ಕರೆಸಿಕೊಂಡು ಮುಗಿಸುವ ಪ್ಲಾನ್ ಹಾಕಿದ.


ಹರೀಶ್ ರೈ

1997ರ ಮೇ 31ರಂದು ಪುತ್ತೂರಿನಲ್ಲಿ ಲಿಯಾನಾ ಲೀಸಿಂಗ್ ಕಂಪೆನಿಯನ್ನು ಆರಂಭಿಸುವುದಕ್ಕೆ ಹರೀಶ್ ದಿನ ನಿಗದಿ ಮಾಡಿದ. ಅದರ ಪೂರ್ವ ತಯಾರಿಗೆಂದು ಬೆಂಗಳೂರಿಗೆ ಹೋದ ಹರೀಶ್ ಅಲ್ಲಿ ಕೆಂಚಾಂಬ ಲಾಡ್ಜ್‌ನಲ್ಲಿ ಉಳಿದುಕೊಂಡ. ಕೆಲಸವನ್ನು ಮುಗಿಸಿದ ಹರೀಶ್ ಮೇ 19ರ ರಾತ್ರಿ ಬೆಂಗಳೂರಿನಿಂದ ಹೊರಟ. ಆದರೆ ಉಪ್ಪಿನಂಗಡಿಯಲ್ಲಿ ಇಳಿಯದೇ ತನ್ನ ಕೈಯಲ್ಲಿದ್ದ ಆಮಂತ್ರಣ ಪತ್ರಿಕೆಯ ಬಂಡಲ್ಲು, 60 ಸಾವಿರ ನಗದು ಮತ್ತು ತನ್ನ ಅಕ್ಕನ ಮಕ್ಕಳಿಬ್ಬರಿಗೆ ಖರೀದಿಸಿದ್ದ ಹೊಸಬಟ್ಟೆಗಳನ್ನು ತನ್ನ ಜತೆ ಬಂದಿದ್ದ ಗೆಳೆಯ ಕೋಡಿಬಾಂಡಿ ದಿವಾಕರ ರೈಗೆ ಕೊಟ್ಟು ಅದನ್ನು ಉಪ್ಪಿನಂಗಡಿ ಹೋಟೆಲ್ ಒಂದರಲ್ಲಿ ಕೊಡುವಂತೆ ಹೇಳಿ ಮಂಗಳೂರಿಗೆ ಪ್ರಯಾಣ ಬೆಳೆಸಿದ.

ಅದೇ ಕೊನೆ. ಆನಂತರ ಆತನನ್ನು ಯಾರೂ ನೋಡಲಿಲ್ಲ.

ಹೀಗೆ ನಾಪತ್ತೆಯಾಗುವ ಮುನ್ನ ತಾನು ಮಂಗಳೂರಿಗೆ ಹೋಗಿ ಮಾರನೆ ದಿನ ಬೆಳಗ್ಗೆ 11 ಗಂಟೆಗೆ ಉಪ್ಪಿನಂಗಡಿಗೆ ವಾಪಸಾಗುವುದಾಗಿ ದಿವಾಕರ ರೈ ಬಳಿ ಹೇಳಿಹೋಗಿದ್ದ ಹರೀಶ್. ಆದರೆ ಮೂರು ದಿನಗಳಾದರೂ ಆತ ಹಿಂದಿರುಗದಿದ್ದಾಗ ಎಲ್ಲರಲ್ಲೂ ಸಂಶಯ ಶುರುವಾಯಿತು. ಹರೀಶನ ತಾಯಿ ಸುಂದರಿ ರೈ ಅವರು ಪೊಲೀಸರಿಗೆ ದೂರು ನೀಡಿದರು. ಉಪ್ಪಿನಂಗಡಿಯ ಗಾಂಪಾ ಗೆಳೆಯರು ಹರೀಶನ ನಾಪತ್ತೆಯ ಜಾಡು ಹಿಡಿದುಹೊರಟರು. ಆಗ ಅವರಿಗೆ ಮಹತ್ವದ ಸಾಕ್ಷಿಗಳು ಸಿಕ್ಕಿದವು.


ಕೌಬಾಯ್

ಪೇರ ಮೊಗ್ರುವಿನ ಸೆಲಿನ್ ಎಂಬಾಕೆ ಹರೀಶನ ಕ್ಲಾಸ್‌ಮೇಟ್ ಆಗಿದ್ದಳು. ಆಕೆಯೂ ಕೆಲಸ ನಿಮಿತ್ತ ಬೆಂಗಳೂರಿಗೆ ಬಂದು ಅದೇ ಕೆಂಚಾಂಬ ಲಾಡ್ಜ್‌ನಲ್ಲಿ ತಂಗಿದ್ದಾಗ ಆಚಾನಕ್ಕಾಗಿ ಹರೀಶನನ್ನು ಭೇಟಿಯಾಗಿದ್ದಳು. ಆಗ ಆಕೆಯಿಂದ ಹರೀಶನೊಂದಿಗೆ ವೀಣಾ ಫೋನ್ ಸಂಪರ್ಕದಲ್ಲಿದ್ದದ್ದು, ಮೇ 20ರ ಬೆಳಗ್ಗೆ ಮಂಗಳೂರಿನ ಡಾನ್‌ಬಾಸ್ಕೋ ಹಾಲ್ ಬಳಿ ಆತನಿಗೆ ಬರಲು ಆಕೆ ಹೇಳಿದ್ದು, "ವೀಣಾ ಫೋನ್ ಮಾಡಿದ್ದಳು, ಆಕೆ ತೊಂದರೆಯಲ್ಲಿದ್ದಾಳೆ. ನಾನು ಅವಳನ್ನು ನಾಳೆ ಕಾಣಬೇಕು" ಎಂದು ಹರೀಶ್ ಸೆಲಿನ್‌ನಲ್ಲಿ ಹೇಳಿದ್ದು ಗಾಂಪಾ ಗೆಳೆಯರಿಗೆ ಗೊತ್ತಾಯಿತು.

ಈ ಎಲ್ಲಾ ಮಾಹಿತಿಗಳನ್ನಿಟ್ಟುಕೊಂಡು ಹರೀಶನ ಗೆಳೆಯರು ಪೊಲೀಸರನ್ನು ಒತ್ತಾಯಿಸಿದರೂ ಚಂದ್ರ ಮತ್ತು ವೀಣಾಳನ್ನು ಪೊಲೀಸರು ಬಂಧಿಸಲೇ ಇಲ್ಲ. ಇದರಿಂದ ಆಕ್ರೋಶಗೊಂಡ ಆತನ ಗೆಳೆಯರು ಉಪ್ಪಿನಂಗಡಿ ಬಂದ್ ನಡೆಸಿದರು. ಅಷ್ಟೇ ಅಲ್ಲ, "ಪುತ್ತೂರು ಡಿವೈಎಸ್ಪಿ ಪಿ.ಸಿ. ಗಣಪತಿ ಎಡಪತ್ಯ ಚಂದ್ರನಿಗೆ ಆಪ್ತ ಎಂಬ ಕಾರಣಕ್ಕೆ ತನಿಖೆ ಮಾಡುತ್ತಿಲ್ಲ" ಎಂಬ ಅನುಮಾನವನ್ನು ವ್ಯಕ್ತಪಡಿಸಿ ಎಸ್ಪಿಗೆ ದೂರಿದರು. ಆಗಲೇ ಈ ಪ್ರಕರಣ ರೌಡಿ ನಿಗ್ರಹ ದಳಕ್ಕೆ ಹಸ್ತಾಂತರವಾದದ್ದು.

ಮೇ 20ರಂದು ಹರೀಶ್ ಮಂಗಳೂರಿಗೆ ಬಂದ ದಿನ ಎಡಪತ್ಯ ಚಂದ್ರ ದಂಪತಿಗಳು ಮನೆಯಲ್ಲಿರಲಿಲ್ಲ. ಅವರ ಮಾರುತಿ ಎಸ್ಟೀಮ್ ಕಾರ್‌ಗೆ 15 ದಿನಗಳ ಹಿಂದೆಯೇ ಸನ್‌ಶೇಡ್ ಅಳವಡಿಸಲಾಗಿತ್ತು. ಹ್ಯಾಂಡ್‌ಬ್ರೇಕ್ ತುಂಡಾದ ಸ್ಥಿತಿಯಲ್ಲಿತ್ತು. ಕಾರು ಜಖಂಗೊಂಡಿದ್ದು ಮೇ 22ರಂದು ಮಂಗಳೂರಿನಲ್ಲಿ ರಿಪೇರಿಗೆ ಇಡಲಾಗಿತ್ತು. ಈ ಎಲ್ಲಾ ಅಂಶಗಳು ಎಡಪತ್ಯ ಚಂದ್ರ ದಂಪತಿಗಳೇ ಕೊಲೆ ಮಾಡಿದ್ದಾರೆ ಎಂಬ ಸಂಶಯವನ್ನು ಹೆಚ್ಚಿಸಿತು.

ಅದೇ ಹೊತ್ತಿಗೆ ಇನ್ನೊಂದು ಮಹತ್ವದ ಸುಳಿವು ಸಿಕ್ಕಿತು. ಹರೀಶನ ತಾಯಿ ಸುಂದರಿ ರೈ ಅವರಿಗೆ ಮೂಲ್ಕಿಯಿಂದ ಅನಾಮಧೇಯ ಪತ್ರವೊಂದು ಬಂದಿತು. ಆ ಪತ್ರ ಹರೀಶನ ಕೊಲೆ ಹೇಗೆ ವ್ಯವಸ್ಥಿತವಾಗಿ ನಡೆಯಿತು ಎಂಬುದನ್ನು ತೆರೆದಿಟ್ಟಿತು. ಆ ಪತ್ರದಲ್ಲಿನ ಮಾಹಿತಿ ಹೀಗಿತ್ತು:

ಹರೀಶ್ ರೈನನ್ನು ಮಂಗಳೂರಿನಿಂದ ಅಪಹರಿಸಿ ಕೊಲೆಗೈಯ್ಯಲಾಗಿತ್ತು. ಆಮೇಲೆ ಅವನ ಶವವನ್ನು ಎಡಪತ್ಯ ಚಂದ್ರನ ಮನೆಯ ಕಾರ್ ಶೆಡ್‌ನಲ್ಲಿ ಇರಿಸಲಾಗಿತ್ತು. ಆ ದಿನ ಕೆಲಸದಾಳುಗಳನ್ನೆಲ್ಲಾ ಬೇಗನೇ ಮನೆಗೆ ತೆರಳುವಂತೆ ಹೇಳಿದರು. ಅವರೆಲ್ಲ ಹೋದ ನಂತರ ಶವವನ್ನು ಚಂದ್ರನ ಅಡಿಕೆ ತೋಟದಲ್ಲಿ ಪಾಳು ಬಿದ್ದಿದ್ದ ಪಾಯಿಖಾನೆ ಪಕ್ಕದ ಹೊಂಡದಲ್ಲಿ ಹಾಕಿದರು. ಶವದ ಮೇಲೆ ಕಟ್ಟಿಗೆಗಳನ್ನು ಹಾಕಿ, ಪೆಟ್ರೋಲ್ ಸುರಿದು ಬೆಂಕಿಹಾಕಿ ಸುಟ್ಟಿದ್ದರು. ಹೀಗೆ ;``ಟ್ಟು ಉಳಿದ ಎಲುಬು ಚೂರುಗಳನ್ನು ತೋಟದಲ್ಲಿದ್ದ ಮೂರು ಗುಂಡಿಗಳಲ್ಲಿ ಒಂದರಲ್ಲಿ ಹಾಕಿ ಮುಚ್ಚಿದ್ದರು. ಹೊಂಡದಲ್ಲಿ ಶವವನ್ನು ಸುಡುವಾಗ ಎದ್ದ ಬೆಂಕಿ ಜ್ವಾಲೆಯಿಂದ ಕರಟಿದ್ದ ಮರದ ಟೊಂಗೆಗಳು ಸಂಶಯಕ್ಕೆಡೆ ಮಾಡಬಾರದೆಂದು ಆ ಮರಗಳನ್ನೂ ಕಡಿದು ಹಾಕಿದ್ದರು.

ಇಂತಹ ವಿವರಗಳೊಂದಿಗೆ ಈ ಪತ್ರದಲ್ಲಿ ಹರೀಶನನ್ನು ಸುಟ್ಟು ಹಾಕಲಾಗಿದ್ದ ಸ್ಥಳದ ನಕ್ಷೆ ಕೂಡ ಇತ್ತು. ಸುಂದರಿ ರೈ ಮತ್ತು ಗಾಂಪಾ ಗೆಳೆಯರು ಈ ಪತ್ರವನ್ನು ಪ್ರಕರಣದ ತನಿಖೆ ಮಾಡುತ್ತಿದ್ದ ರೌಡಿ ನಿಗ್ರಹ ದಳದ ಇನ್ಸ್‌ಪೆಕ್ಟರ್ ಜಯಂತ್ ಶೆಟ್ಟಿಗೆ ನೀಡಿ ಅದರಲ್ಲಿ ಸೂಚಿಸಿದ್ದ ಸ್ಥಳವನ್ನು ಅಗೆದು ನೋಡಬೇಕೆಂದು ಒತ್ತಾಯಿಸಿದ್ದರು.


ವೀಣಾ

ಈ ಪತ್ರದ ನಿರ್ದೇಶನದಂತೆ ಎಡಪತ್ಯ ಚಂದ್ರನ ತೋಟದಲ್ಲಿ ಅಗೆದಾಗ 10 ಅಡಿ ಆಳದಲ್ಲಿ 15 ಎಲುಬು ಚೂರುಗಳು, ಸುಟ್ಟು ಬೂದಿಯಾದ ಮಣ್ಣು, ಟೈಟಾನ್ ವಾಚಿನ ಅಚ್ಚು ಪತ್ತೆಯಾಗಿದ್ದವು. ಇದಕ್ಕೆ 15 ದಿನಗಳ ಹಿಂದೆಯಷ್ಟೇ ಹರೀಶ್ ತನ್ನ ಗೆಳೆಯರ ಜೊತೆ ಹೋಗಿ ಟೈಟಾನ್ ವಾಚ್ ಖರೀದಿಸಿದ್ದ. ಆ ವಾಚಿನ ಅಚ್ಚಿನ ನಂಬರ್ ಮತ್ತು ವಾಚ್ ಖರೀದಿಸಿದ್ದ ಅಂಗಡಿಯಲ್ಲಿದ್ದ invoice ನಂಬರ್ ಒಂದೇ ಆಗಿದ್ದು ಆ ವಾಚ್ ಹರೀಶನದ್ದೇ ಎಂದು ಕೂಡಲೆ ದೃಢ ಪಟ್ಟಿತ್ತು..... ಇದೆಲ್ಲ ಪ್ರಕರಣಕ್ಕೆ ಹೊಸ ತಿರುವು ನೀಡಿತು.

ಇಷ್ಟೆಲ್ಲ ಪತ್ತೆಯಾಗುವ ಹೊತ್ತಿಗೆ ಚಂದ್ರ ಮತ್ತು ಆತನ ಕೆಲಸದಾಳು ಭೂಗತರಾದರು. ಪೊಲೀಸರು ಚಂದ್ರನ ಎಸ್ಟೀಮ್ ಕಾರನ್ನು ವಶಪಡಿಸಿಕೊಂಡರು. ಕಾರನ್ನು ಶೋಧಿಸಿದಾಗ ಸೀಟಿನ ಅಡಿಯಲ್ಲಿ ಅಂಟಿಗಟ್ಟಿಯಾಗಿದ್ದ ರಕ್ತದ ಕಲೆಗಳು ಕಣ್ಣಿಗೆ ಬಿದ್ದು ತನಿಖೆ ಇನ್ನಷ್ಟು ಚುರುಕುಗೊಂಡಿತು. ಅಷ್ಟರಲ್ಲಿ ಬಂಧಿತನಾದ ಚಂದ್ರ ನಿರೀಕ್ಷಣಾ ಜಾಮೀನು ಪಡೆದು ಹೊರಗೆ ಬಂದ.

ಇನ್ನೇನು ಸಾಕಷ್ಟು ಮಾಹಿತಿ ಸಿಕ್ಕಿತು ಎನ್ನುವಷ್ಟರಲ್ಲೇ ಹರೀಶ್ ನಾಪತ್ತೆಗೆ ಪ್ರತ್ಯಕ್ಷಸಾಕ್ಷಿಯಾಗಿದ್ದ ಕೋಡಿಬಾಂಡಿಯ ದಿವಾಕರ ರೈ ದಿನಕ್ಕೊಂದು ಹೇಳಿಕೆ ನೀಡುತ್ತಾ ತಲೆನೋವಾದ. ಆದರೆ ಈತನೂ ಒಂದು ದಿನ ಮೈಸೂರಲ್ಲಿ ಶವವಾಗಿ ಪತ್ತೆಯಾದ. ಇವತ್ತಿಗೂ ದಿವಾಕರ ರೈ ಸಾವು ನಿಗೂಢವಾಗಿಯೇ ಉಳಿದಿದೆ.

ಹರೀಶ್ ಕೊಲೆ ಪ್ರಕರಣದಲ್ಲಿ ಇನ್ನೋರ್ವ ಪ್ರತ್ಯಕ್ಷಸಾಕ್ಷಿಯಾಗಿದ್ದು ಎಡಪತ್ಯ ಚಂದ್ರನ ಕೆಲಸದಾಳು ಕೇಪು. ಈತ ಒಮ್ಮೆ ಕುಡಿತದ ಮತ್ತಿನಲ್ಲಿ ತಾನು ಹರೀಶನ ಹೆಣ ಸುಡಲು ಸಹಕರಿಸಿದ್ದನ್ನು ಬೊಂಬಡಾ ಬಜಾಯಿಸಿ ಪೇಚಿಗೆ ಸಿಲುಕಿದ್ದ. ಈ ಕೇಪು ಕೂಡಾ ಅನಂತರ ನಿಗೂಢವಾಗಿ ನಾಪತ್ತೆಯಾದ. ಈ ಎರಡು ನಿಗೂಢತೆಗಳಲ್ಲೂ ಚಂದ್ರನ ಪಾತ್ರ ಇದ್ದೇ ಇದೆ ಎಂಬುದು ಜನರ ಅನುಮಾನ.


ಇಷ್ಟೆಲ್ಲಾ ನಡೆದಿದ್ದರೂ ತನಿಖೆಯು ಸರಿದಾರಿಯಲ್ಲಿ ನಡೆಯಲಿಲ್ಲ. ಇದಕ್ಕೆ ಚಂದ್ರನ ಹಣದ ಥೈಲಿಯೇ ಕಾರಣ ಎಂದು ಆರೋಪಿಸಿದ ಹರೀಶನ ಗಾಂಪಾ ಗೆಳೆಯರು ಗೃಹ ಸಚಿವರ ಮೇಲೆ ಒತ್ತಡ ತಂದು ಈ ಪ್ರಕರಣವು ಸಿಓಡಿಗೆ ಹಸ್ತಾಂತರ ಆಗುವಂತೆ ನೋಡಿಕೊಂಡರು. ಪ್ರಕರಣದ ಕೂಲಂಕಷ ತನಿಖೆ ನಡೆಸಿದ ಸಿಓಡಿ ಪೊಲೀಸರು 302, 301 ಕಲಂ ಅಡಿ ಪ್ರಕರಣ ದಾಖಲಿಸಿಕೊಂಡು ಎಡಪತ್ಯ ಚಂದ್ರ ಮತ್ತು ವೀಣಾ ದಂಪತಿಗಳ ವಿರುದ್ಧ ಸರಕಾರಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದರು. ಪೊಲೀಸ್ ತನಿಖೆಯಲ್ಲಿ ಪತ್ತೆಯಾದ ರಕ್ತದ ಕಲೆಗಳು ಮತ್ತು ಎಲುಬು ಚೂರುಗಳು ಹರೀಶನದ್ದೇ ಎಂದು ವೈದ್ಯಕೀಯ ಪರೀಕ್ಷೆಯಲ್ಲಿ ಸಾಬೀತಾಯಿತು. ವೀಣಾ ಫೋನ್ ಮಾಡಿ ಹರೀಶನನ್ನು ಕರೆಸಿಕೊಂಡಿದ್ದೂ ಸೆಲಿನ್‌ಳ ಹೇಳಿಕೆ ಮತ್ತು ಫೋನ್ ಕಾಲರ್‌ನ ತಪಾಸಣೆಯಲ್ಲಿ ಟ್ಯಾಲಿಯಾಯಿತು.

ಹೀಗೆ ಹರೀಶನ ಕೊಲೆ ಕೇಸಿನಲ್ಲಿ ಪ್ರತ್ಯಕ್ಷಸಾಕ್ಷಿಗಳು ಇಲ್ಲದೇಹೋದರೂ, ಬಲವಾದ ಸಾಂದರ್ಭಿಕ ಸಾಕ್ಷಿ ಮತ್ತು ತಾಂತ್ರಿಕ ಅಂಶಗಳು ಎಡಪತ್ಯ ಚಂದ್ರ ಮತ್ತಾತನ ಹೆಂಡತಿ ವೀಣಾ ಅಪರಾಧಿಗಳೆಂದು ತೀರ್ಮಾನಿಸಲು ನೆರವಾಗಿವೆ. ನ್ಯಾಯಾಲಯದ ಘನತೆ ಮತ್ತು ಗೌರವವನ್ನು ಎತ್ತಿ ಹಿಡಿದ ಈ ಒಂದು ಅಪರೂಪದ ತೀರ್ಪು ಸತ್ಯಕ್ಕೆ ಸಾವಿಲ್ಲ ಎಂಬುದನ್ನು ಮತ್ತೊಮ್ಮೆ ತೋರಿಸಿಕೊಟ್ಟಿದೆ.

ಹಣ ಮತ್ತು ಅಧಿಕಾರದ ಬಲದಿಂದ ಎಂತಹ ಕ್ರಿಮಿನಲ್ ಕೃತ್ಯ ಮಾಡಿಯೂ ದಕ್ಕಿಸಿಕೊಳ್ಳಬಹುದು ಎಂದು ಬೀಗುತ್ತಿದ್ದ ಎಡಪತ್ಯ ಚಂದ್ರನಂತಹ ಪಾಖಂಡಿಗಳಿಗೆ ಎಚ್ಚರಿಕೆಯ ಕರೆ ಗಂಟೆಯಾಗಿದೆ.

• ಪ್ರಕಾಶ್ ಪಿಂಟೋ

ಐಪಿಎಲ್= ಇಂಡಿಯನ್ ಫ್ಯಾಮಿಲಿ ಲೀಗ್!



ಐಪಿಎಲ್ ಟ್ವೆಂಟಿ-20 'ಪಿತಾಮಹ' ಎನಿಸಿರುವ ಲಲಿತ್ ಮೋದಿ ಪಕ್ಕಾ ವಂಚಕಬುದ್ಧಿಯ ವ್ಯಾಪಾರಿ. ಕ್ರಿಕೆಟ್ ಆಟವನ್ನು ಮುಕ್ತ ಮಾರುಕಟ್ಟೆಯ ಗುಲಾಮನನ್ನಾಗಿ ಮಾಡಿರುವ ಈತ ಕ್ರಿಕೆಟ್‌ನ ಸೊಬಗನ್ನೇ ಹಾಳು ಮಾಡುತ್ತಿದ್ದಾನೆ. ದಿಢೀರ್ ಹಣ ಗಳಿಸಲು ಆಟದ ನಿಯಮಗಳನ್ನೇ ಬದಲಿಸುತ್ತ ಆಟವನ್ನು ರಂಜನೀಯಗೊಳಿಸಲು ಯತ್ನಿಸುತ್ತಿದ್ದಾನೆ.

ಚಿಯರ್ ಗರ್ಲ್ಸ್‌ಗಳೆಂಬ ಬೆಚ್ಚಮ್ಮರನ್ನು ತಂದು ಸ್ಟೇಡಿಯಂನಲ್ಲಿ ಹುಚ್ಚು ನರ್ತನ ಆರಂಭಿಸಿದ ಮೋದಿ ಈ ಸಲದ ಪಂದ್ಯಗಳಲ್ಲಿ ವಿಐಪಿಗಳಿಗೆ ಮದ್ಯ ಸರಬರಾಜಿನ ವ್ಯವಸ್ಥೆಯನ್ನು ಮಾಡಿಬಿಟ್ಟಿದ್ದಾನೆ. ಆಟ ಮುಗಿದ ಮೇಲೆ ನಡುರಾತ್ರಿ 'ಐಪಿಎಲ್ ನೈಟ್ಸ್' ಎಂಬ ಜಾಲಿ ಪಾರ್ಟಿ ಏರ್ಪಡಿಸಿ, ಕ್ರಿಕೆಟಿಗರು, ಚಿಯರ್ ಗರ್ಲ್ಸ್‌ಗಳು, ಬಾಲಿವುಡ್ ಬ್ಯೂಟಿಗಳು ಮದವೇರಿ ಮಜಾ ಮಾಡಲು ಅವಕಾಶ ಮಾಡಿಕೊಟ್ಟಿದ್ದಾನೆ.

ಲಲಿತ್ ಮೋದಿ ಇತ್ತೀಚೆಗೆ ತಿರುಪತಿ ತಿಮ್ಮಪ್ಪನಿಗೆ 5 ಕೋಟಿ ರೂ. ದೇಣಿಗೆ ಕೊಟ್ಟನಂತೆ. ಐಪಿಎಲ್‌ನಿಂದ ಮೋದಿಗೆ ಸಿಗುತ್ತಿರುವ ನೂರಾರು ಕೋಟಿ ಹಡಬೆ ದುಡ್ಡೇ ಇದಕ್ಕೆ ಕಾರಣ. ಐಪಿಎಲ್ ವ್ಯವಹಾರದಲ್ಲಿ ಮೋದಿಯ ಸಂಬಂಧಿಗಳೇ ತುಂಬಿರುವುದರಿಂದ ಇದನ್ನು ಇಂಡಿಯನ್ ಫ್ಯಾಮಿಲಿ ಲೀಗ್ ಎಂದೂ ಕೆಲವರು ಕರೆಯುತ್ತಾರೆ. 2017 ರವರೆಗೆ ಚಾಲೆಂಜರ್ ಟ್ರೋಫಿ, ಐಪಿಎಲ್ ಟೂರ್ನಿಗಳ ಡಿಜಿಟಲ್, ಇಂಟರ್‌ನೆಟ್ ರೈಟ್ಸ್ ಖರೀದಿಸಿರುವ ಗ್ಲೋಬಲ್ ಕ್ರಿಕೆಟರ್ ವೆಂಚರ್ಸ್‌ನಲ್ಲಿ ಮೋದಿ ಅಳಿಯ ಗೌರವ್ ಬರ್ಮನ್ ಶೇ. 50 ರಷ್ಟು ಪಾಲು ಹೊಂದಿದ್ದಾನೆ. ಈ ಗೌರವ್‌ನ ಸಹೋದರ ಮೋಹಿತ್ ಬರ್ಮನ್ ಪಂಜಾಬಿನ ಕಿಂಗ್ಸ್ ರೈಡರ್ಸ್‌ನ ಮಾಲೀಕರಲ್ಲೊಬ್ಬ, ಮೋದಿಯ ಮತ್ತೊಬ್ಬ ಹತ್ತಿರದ ಸಂಬಂಧಿ ಸುರೇಶ್ ಚೆಲ್ಲಾರಾಮ್ .ರಾಜಸ್ಥಾನ ರಾಯಲ್ಸ್ ತಂಡದ ಮಾಲೀಕರಲ್ಲೊಬ್ಬನಾಗಿದ್ದಾನೆ. ಮೋದಿ ಸಂಬಂಧಿಗಳಾದ ಬರ್ಮನ್‌ಗಳು ಕೋಲ್ಕತ್ತಾ ರೈಡರ್ಸ್ ತಂಡದಲ್ಲೂ ಪಾಲು ಹೊಂದಿದ್ದಾರೆ. ಹೀಗೆ ಇಡೀ ಪರಿವಾರದವರನ್ನೆಲ್ಲ ಐಪಿಎಲ್‌ನ ಭಾಗವಾಗಿ ಮಾಡಿರುವ ಮೋದಿ ಫ್ಲೈಟ್ ಬುಕ್ಕಿಂಗ್, ಹೋಟೆಲ್ ಬುಕ್ಕಿಂಗ್, ಪಾರ್ಟಿ ಅರೇಂಜಿಂಗ್ ಇತ್ಯಾದಿ ವ್ಯವಹಾರಗಳಲ್ಲಿ ಹತ್ತಾರು ಕೋಟಿ ಕಮಿಷನ್ ಪಡೆಯುತ್ತಿದ್ದಾನೆ.

ಒಂದರ್ಥದಲ್ಲಿ ಕುರುಡು ಕಾಂಚಾಣದ ಎದುರು ಕ್ರಿಕೆಟ್ ಮಂಡಿಯೂರುವಂತೆ ಮಾಡಿದ್ದಾನೆ ಈ ಮೋದಿ. ●



IPL ಹಣ ಹೆಣ್ಣು ಹೆಂಡ

● ಪಿ.ಕೆ. ಮಲ್ಲನಗೌಡರ್
joladarotti@gmail.com

ನೂರಾರು ಕೋಟಿ ಬ್ಲಾಕ್ ಮನಿ, ಬಾಲಿವುಡ್‌ನ ರಂಗು, ಚಿಯರ್ ಗರ್ಲ್ಸ್‌ಗಳ ಗುಂಗು, ಸಿಕ್ಸರ್-ಬೌಂಡರಿಗಳ ಮಳೆ, ಹುಚ್ಚೆದ್ದ ಪ್ರೇಕ್ಷಕರು.. ಇದೆಲ್ಲದರ ಸಂಭ್ರಮಕ್ಕೆ ಟ್ವೆಂಟಿ-20 ಎಂಬ ಆಟದ ನೆಪ.... ಇದು ಐಪಿಎಲ್ ಸೃಷ್ಟಿಸಿದ ಸಮೂಹಸನ್ನಿ.

ಈ ಸಮೂಹಸನ್ನಿಯ ಹಿಂದಿನ ಕರಾಳಮುಖಗಳು ಈಗ ನಿಚ್ಚಳವಾಗಿ ಬೆತ್ತಲಾಗುತ್ತಿವೆ. ಕ್ರೀಡೆಯೊಂದರ ಸುತ್ತ ರಾಜಕಾರಣ, ಬ್ಯುಸಿನೆಸ್‌ಗಳೆಲ್ಲ ಸುತ್ತುವರಿದುಕೊಂಡು ಸೃಷ್ಟಿಸಿಕೊಂಡ ಸಾವಿರಾರು ಕೋಟಿ ರೂ.ಗಳ ಕಳ್ಳಕೂಟದ ಮುಖವಾಡ ನಿಧಾನವಾಗಿ ಜನರ ಎದುರಿಗೆ ಬರುತ್ತಿದೆ.

ಸದ್ಯ ಕೇಂದ್ರ ವಿದೇಶಾಂಗ ವ್ಯವಹಾರ ರಾಜ್ಯ ಸಚಿವ ಶಶಿ ತರೂರ್ ಈ ಐಪಿಎಲ್ ರಾಡಿಯಲ್ಲಿ ಕೆಸರು ಮೆತ್ತಿಸಿಕೊಂಡಿದ್ದಾರೆ. ಕೆಸರೆರಚಿದ ಐಪಿಎಲ್ ಅಧ್ಯಕ್ಷ ಮತ್ತು ಕಮೀಷನರ್ ಲಲಿತ್ ಮೋದಿ ಎಂಬ ಕ್ರೀಡಾ ವ್ಯಾಪಾರಿಯ ಗಂಟುಗಳ್ಳತನವೂ ಬಯಲಾಗುತ್ತಿದೆ.

2010 ರ ಮೂರನೇ ಐಪಿಎಲ್ ಪಂದ್ಯಾವಳಿಯೀಗ ಭಾರೀ 'ಯಶಸ್ಸು' ಕಾಣುತ್ತಿರುವುದರಿಂದ 2011 ರ 4 ನೇ ಐಪಿಎಲ್ ಪಂದ್ಯಾವಳಿಗೆ ಭಾರಿ ಬೇಡಿಕೆ ಬಂದಿದೆ. ಅದಕ್ಕನುಗುಣವಾಗಿ ಈಗಿರುವ ಎಂಟು ತಂಡಗಳ ಜೊತೆ ಮತ್ತೆರಡು ತಂಡಗಳನ್ನು ಸೇರಿಸಿಕೊಳ್ಳಲಾಗಿದೆ. ಅವು ಪುಣೆ ಮತ್ತು ಕೊಚ್ಚಿ ತಂಡಗಳು.

ಈಗ ವಿವಾದಕ್ಕೆ ಕಾರಣವಾಗಿರುವುದು ಕೊಚ್ಚಿ ತಂಡದ ಬಿಡ್ಡಿಂಗ್. ನಿರೀಕ್ಷಿಸಿದ್ದಕ್ಕಿಂತ ಭಾರೀ ಮೊತ್ತಕ್ಕೆ (1537 ಕೋಟಿ ರೂ) ಈ ತಂಡವನ್ನು ಖರೀದಿಸಿದ್ದು ಶೈಲೇಂದ್ರ ಗಾಯಕವಾಡ್ ನೇತೃತ್ವದ 'ರಂದೆವು ಸ್ಪೋರ್ಟ್ಸ್ ವರ್ಲ್ಡ್' (RSW) ಮಾರ್ಚ್ 21 ಕ್ಕೆ ಈ ಬಿಡ್ ಪ್ರಕ್ರಿಯೆ ಮುಗಿದು, ಏಪ್ರಿಲ್ 10 ರಂದು ಡೀಲ್‌ಗೆ ಸಹಿ ಬಿದ್ದಿತು. ವಿವಾದದ ಕಿಚ್ಚು ಹೊಮ್ಮಿದ್ದು ಇಲ್ಲಿಂದಲೇ. ಏಪ್ರಿಲ್ 11 ರಂದು ಐಪಿಎಲ್ ದೊರೆ ಲಲಿತ್ ಮೋದಿ ತನ್ನ ಟ್ವಿಟರ್‌ನಲ್ಲಿ (ಇಂಟರ್‌ನೆಟ್ ತಾಣ) ಈ ಬಿಡ್‌ನ ಕುರಿತು ಅಪಸ್ವರ ಎತ್ತಿದ. "ಕೇಂದ್ರ ಸಚಿವ ಶಶಿ ತರೂರ್ ವಿಶೇಷ ಮುತುವರ್ಜಿ ವಹಿಸಿ ಆರ್‌ಎಸ್‌ಡಬ್ಲ್ಯೂ ಗುಂಪಿಗೆ ಕೊಚ್ಚಿ ತಂಡದ ಫ್ರಾಂಚೈಸಿ ಸಿಗುವಂತೆ ಮಾಡಿದರು. ನಂತರ ನನಗೆ ಫೋನ್ ಮಾಡಿ ಈ ತಂಡದ ಫ್ರಾಂಚೈಸಿಗಳ ವಿವರಗಳನ್ನು ಬಹಿರಂಗ ಮಾಡದಂತೆ ಕೋರಿದರು. ಈ ತಂಡದ ನಿಜವಾದ ಮಾಲೀಕರಾರು ಎಂಬುದು ಸ್ವತಃ ಫ್ರಾಂಚೈಸಿ ಕಂಪನಿಗಳಿಗೇ ಗೊತ್ತಿಲ್ಲ. ಹಾಗೆಯೇ ಇಲ್ಲಿ ಶಶಿ ತರೂರ್ ವಿಶೇಷ ಆಸಕ್ತಿ ವಹಿಸಿದ್ದು ಅವರ ಗೆಳತಿ ಸುನಂದಾ ಪುಷ್ಕರ್‌ರವರ ಸಲುವಾಗಿ. ಇಲ್ಲಿ ಶಶಿ ತರೂರ್ ತಮ್ಮ ಬೇನಾಮಿಯಾಗಿ ಸುನಂದಾರನ್ನು ಮುಂದಿಟ್ಟಿದ್ದು ಸುನಂದಾರಿಗೆ ಆರ್‌ಎಸ್‌ಡಬ್ಲ್ಯು ಉಚಿತವಾಗಿ ಶೇ. 19 ರಷ್ಟು ಪಾಲನ್ನು (ಸುಮಾರು 75 ಕೋಟಿ ರೂ.) ಕೊಡಿಸಿದ್ದಾರೆ" ಲಲಿತ್ ಮೋದಿ ಸಿಡಿಸಿದ ಈ ಬಾಂಬಿನಿಂದ ರಾಜಕೀಯ ಬಿರುಗಾಳಿಯೇ ಎದ್ದುಬಿಟ್ಟಿತು.

ಇಲ್ಲಿ ಲಲಿತ್ ಮೋದಿಯ 'ಸಾಚಾತನ'ವನ್ನು ಆಮೇಲೆ ನೋಡೋಣ. ಆತ ಮಾಡಿರುವ ಆಪಾದನೆಗಳ ಗಮನಿಸೋಣ:

ಇಲ್ಲಿ ಕೊಚ್ಚಿ ತಂಡದ ಮಾಲೀಕತ್ವ ನಿಜಕ್ಕೂ ನಿಗೂಢವಾಗಿದೆ. ಈ ತಂಡದ ಫ್ರಾಂಚೈಸಿಗಳ ಪೈಕಿ ವಿವೇಕ್ ವೇಣುಗೋಪಾಲ್ ಎಂಬುವರಷ್ಟೇ ಕೇರಳದವರು. ಉಳಿದವರೆಲ್ಲ ಮಹಾರಾಷ್ಟ್ರ, ಗುಜರಾತ್ ಮೂಲದವರು. ಸೋಲಾಪುರ ಮೂಲದ ಗಾಯಕವಾಡ್‌ಗಳ ರೆಂದುವಾ ಸ್ಪೋರ್ಟ್ಸ್ ವರ್ಲ್ಡ್ (ಆರ್‌ಎಸ್‌ಡಬ್ಲ್ಯು)ಗಳ ಜೊತೆ ಗುಜರಾತಿನ ಆ್ಯಂಕರ್ ಎಲೆಕ್ಟ್ರಿಕಲ್ಸ್, ಪರೀನಿ ಡೆವಲಪರ್ಸ್, ಫಿಲ್ಮ್ ವೇವ್ಸ್ ಕಂಬೈನ್ಸ್, ಆನಂದ ಶ್ಯಾಮ್ ಎಸ್ಟೇಟ್ಸ್ ಮತ್ತು ವಿವೇಕ್ ವೇಣುಗೋಪಾಲಗಳು ಕೋ-ಫ್ರಾಂಚೈಸಿಗಳಾಗಿದ್ದಾರೆ. ಆದರೆ ಯಾವ ಕಾರಣಕ್ಕೆ ಸುನಂದಾ ಪುಷ್ಕರ್‌ಗೆ ಶೇ. 19 ರಷ್ಟು ಪಾಲನ್ನು ಆರ್‌ಎಸ್‌ಡಬ್ಲ್ಯು ನೀಡಿತು ಎಂಬುದರ ಹಿಂದೆ ಹೋದರೆ ಸಚಿವ ಶಶಿ ತರೂರ್‌ರವರ ಕೈವಾಡವೇ ಕಾಣುತ್ತದೆ. ಅಹಮದಾಬಾದ್‌ನ ಪ್ರಾಬಲ್ಯವನ್ನು ತಪ್ಪಿಸಿ ಕೊಚ್ಚಿಗೆ ತಂಡ ದಕ್ಕುವಂತೆ ಮಾಡಿದ್ದು ಇದೇ ಶಶಿ ತರೂರ್. ಬಿಡ್‌ನಲ್ಲೂ ಸಹ ಇತರ ಬಿಡ್‌ದಾರರ ತೀವ್ರ ಸ್ಪರ್ಧೆಯ ನಡುವೆಯೂ ಆರ್‌ಎಸ್‌ಡಬ್ಲ್ಯುಗೆ ಸಿಗುವಂತೆ 'ಕಾಳಜಿ' ವಹಿಸಿದ್ದು ಕೂಡಾ ಅವರೇ. ಆ ಕಾರಣಕ್ಕಾಗಿ ಅವರಿಗೆ ನೀಡಬೇಕಾದ 'ಗೌರವ'ವನ್ನು ಶೇ. 19 ಈಕ್ವಿಟಿಯನ್ನು ತರೂರ್ ಗೆಳತಿ ಸುನಂದಾ ಪುಷ್ಕರ್‌ಗೆ ನೀಡುವ ಮೂಲಕ ಕೃತಾರ್ಥವಾಗಿದೆ ಆರ್‌ಎಸ್‌ಡಬ್ಲ್ಯು.

ಸದ್ಯ ಆರ್‌ಎಸ್‌ಡಬ್ಲ್ಯುನ ಮುಖವಾಣಿಯಾಗಿರುವ ಶೈಲೇಂದ್ರ ಗಾಯಕವಾಡ್ ಮೂಲತಃ ಸೋಲಾಪುರದವನಾಗಿದ್ದು, ಮಹಾರಾಷ್ಟ್ರ ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ಅಧಿಕಾರಿಯಾಗಿರುವ ಕ್ರಿಕೆಟ್ ಪ್ರೇಮಿ ಶೈಲೇಂದ್ರನ ಸಹೋದರ ರವಿ ಗಾಯಕವಾಡ್ ಸಾಕಷ್ಟು ಕಪ್ಪುಹಣ ಹೂಡಿರುವ ವದಂತಿಗಳೂ ಇವೆ. ಇನ್ನುಳಿದ ಫ್ರಾಂಚೈಸಿ ಪಾರ್ಟನರುಗಳಲ್ಲಿ ಆ್ಯಂಕರ್ ಎಲೆಕ್ಟ್ರಿಕಲ್ಸ್ ಒಂದನ್ನು ಬಿಟ್ಟರೆ ಉಳಿದ ಕಂಪನಿಗಳ ವ್ಯವಹಾರ, ಕಾರ್ಯಾಚರಣೆಗಳು ಪಾರದರ್ಶಕವಾಗಿಲ್ಲ.

ಈಗ ಈ ಗಾಯಕ್‌ವಾಡ್‌ಗಳು, "ನಾವು ನಿಯಮದ ಪ್ರಕಾರವೇ ಬಿಡ್ ಗೆದ್ದಿದ್ದೇವೆ. ಇಲ್ಲಿ ಯಾರೂ ಏಕೈಕ ಮಾಲೀಕರಿಲ್ಲ, ಲಲಿತ್ ಮೋದಿಗೆ ಕೊಚ್ಚಿ ಬದಲು ಅಹಮದಾಬಾದ್‌ಗೆ ತಂಡ ಒದಗಿಸುವ ಆಸೆಯಿತ್ತು, ಬಿಡ್ ಮುಗಿದ ನಂತರವೂ ಆತ ನಮಗೆ 50 ಮಿಲಿಯನ್ ಡಾಲರ್ ಕಿಕ್‌ಬ್ಯಾಕ್ ಮನಿ ತೆಗೆದುಕೊಂಡು ಬಿಡ್ ಕ್ಯಾನ್ಸಲ್ ಮಾಡಿಕೊಳ್ಳುವಂತೆ ಕೇಳಿದ್ದ, ನಾವಿದ್ದಕ್ಕೆ ಒಪ್ಪದೇ ಇದ್ದುದರಿಂದ ಈಗಾತ ಸುಳ್ಳು ಆರೋಪ ಮಾಡುತ್ತಿದ್ದಾನೆ" ಎನ್ನುತ್ತಿದ್ದಾರೆ.

ಲಲಿತ್ ಮೋದಿ ಅಹಮದಾಬಾದ್ ಪರ ವಕಾಲತ್ತು ಮಾಡುತ್ತಿರುವುದು ನಿಜವೇ. ಈಗಾಗಲೇ ಆತನ ಒತ್ತಡದಿಂದ ಕೊಚ್ಚಿ ಫ್ರಾಂಚೈಸಿಗಳು ಕೇಂದ್ರ ಸಚಿವ, ಬಿಸಿಸಿಐ ಮಾಜಿ ಅಧ್ಯಕ್ಷ ಶರದ್ ಯಾದವರನ್ನೂ ಕಂಡು ಈ ಕುರಿತು ಚರ್ಚಿಸಿದ್ದಾರೆ. ಸದ್ಯ ತಂಡ ಕೊಚ್ಚಿ ಹೆಸರಲ್ಲೇ ಆಡಲಿದೆ.

ಗ್ಯಾಬ್ರಿಯೇಲ್ ಎಂಬ ಲವ್‌ಲಿಂಕ್

ಈ ಹೊತ್ತಲ್ಲೇ ತರೂರ್ ಕಡೆಯವರು ಮೋದಿಯ ವಿರುದ್ಧ ತಿರುಗಿಬಿದ್ದಿದ್ದಾರೆ. ಕಳೆದ ಜನವರಿವರೆಗೂ ತರೂರ್, ಮೋದಿ ಸಂಬಂಧ ಚೆನ್ನಾಗಿಯೇ ಇತ್ತು, ಜನವರಿ ಸುಮಾರಿಗೆ ತರೂರ್‌ರ ವಿದೇಶಾಂಗ ಸಚಿವಾಲಯಕ್ಕೆ ಪದೇಪದೇ ಫೋನ್, ಇಮೇಲ್ ಮಾಡಿದ ಮೋದಿ ಗ್ಯಾಬ್ರಿಯೇಲಾ ಡೆಮಿಟ್ರಿಡಿಯಾಸ್ ಎಂಬ ದಕ್ಷಿಣ ಆಫ್ರಿಕಾದ ಮಾಡೆಲ್‌ಳ ವೀಸಾವನ್ನು ನವೀಕರಿಸಬೇಡಿ ಎಂದು ಮನವಿ ಮಾಡಿಕೊಂಡಿದ್ದ, ಆದರೆ ಇದಕ್ಕೆ ಒಪ್ಪದ ತರೂರ್ ಆಕೆಯ ವೀಸಾ ನವೀಕರಿಸಿ, ಆಕೆ ತನ್ನ ತವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮತ್ತೆ ಭೇಟಿ ನೀಡಲು ಸಹಕರಿಸಿದ್ದರು.

ಅಂದಂತೆ, ಯಾರು ಈ ಗೇಬ್ರಿಯೇಲಾ? ಲಲಿತ್ ಮೋದಿಗೂ, ಆಕೆಗೂ ಇರುವ ಸಂಬಂಧವೇನು? ಎಂದು ಕೆಣಕುತ್ತಾ ಹೋದರೆ ಮತ್ತೊಂದು ಅಧ್ಯಾಯ ಹೊರಬೀಳುತ್ತದೆ.

ಕಳೆದ ಸಲ ದಕ್ಷಿಣ ಆಫ್ರಿಕಾದಲ್ಲಿ ಎರಡನೇ ಐಪಿಎಲ್ ಪಂದ್ಯಾವಳಿ ನಡೆದಾಗ, ಕ್ರಿಕೆಟ್ ಮರೆತ ಮೋದಿ ಇನ್ನೆಲ್ಲ ಮೇಜವಾನಿ ಕಾರ್ಯಕ್ರಮಗಳಲ್ಲೇ ಮುಳುಗಿದ್ದ, ಆದರ

▶▶ 12


ಪಾಪರ್ ಪಂಜಾಬ್ ಕಿಂಗ್‌ಗಳಿಗೂ ಸಾವಿರ ಕೋಟಿ!

ಈ ಐಪಿಎಲ್ ಎಂಥಾ ಉದ್ಯಮವೆಂದರೆ ಇಲ್ಲಿ ಆಡುವ ತಂಡಗಳು ಸೋಲಬಹುದು ಅಥವಾ ಗೆಲ್ಲಬಹುದು. ಆದರೆ ಆ ತಂಡಗಳ ಮಾಲೀಕರು ಯಾರೂ ಸೋಲಲು ಸಾಧ್ಯವಿಲ್ಲ. ಉದಾಹರಣೆಗೆ ಕಳೆದೆರಡು ಸೀಸನ್ನುಗಳಿಂದಲೂ ಪಂಜಾಬ್ ಕಿಂಗ್ಸ್ ಇಲೆವೆನ್ ತಂಡ ಅತ್ಯಂತ ಖರಾಬಾಗಿ ಆಡುತ್ತಿದೆ. ಈ ಸೀಸನ್ನಿನಲ್ಲಂತೂ ಅವರು ಪಟ್ಟಿಯಲ್ಲಿ ಕೆಳಗಿನಿಂದ ಮೊದಲಿಗರು! ಮೂರು ವರ್ಷದ ಕೆಳಗೆ ಅವರನ್ನು 304 ಕೋಟಿಗಳಿಗೆ ಖರೀದಿಸಲಾಗಿತ್ತು. ಈ ಐಪಿಎಲ್ ರೂಲ್ಸುಗಳ ಪ್ರಕಾರ ಮೂರು ವರ್ಷದ ನಂತರ ಬೇಕೆಂದರೆ ಫ್ರಾಂಚೈಸಿಗಳು ತಮ್ಮ ತಂಡವನ್ನು ಮಾರಿಕೊಳ್ಳಬಹುದು.

ಈಗ ಆ ಅವಕಾಶವನ್ನು ಬಳಸಿಕೊಂಡಿರುವ ಪಂಜಾಬಿನ ಫ್ರಾಂಚೈಸಿಗಳು ಅದನ್ನು ಮಾರುತ್ತಿದ್ದಾರೆ. ಎಷ್ಟು ಬೆಲೆಗೆ ಗೊತ್ತೆ? 1,380 ಕೋಟಿ ರೂ.ಗಳಿಗೆ! ಇಂಥಾ ಒಂದು ಉದ್ಯಮ ಎಲ್ಲಾದರೂ ಇರಲು ಸಾಧ್ಯವೇ. ಸೋತರೂ ಲಾಭ, ಗೆದ್ದರೂ ಲಾಭ!

IPL ಆಟದಲ್ಲೂ ವಂಚನೆ, ವ್ಯವಹಾರದಲ್ಲೂ ವಂಚನೆ!

ಈ IPL ಎಂಬ ಕ್ರಿಕೆಟ್ಟಿನ ಹೊಸ ಪ್ರಾಕಾರ ಆರಂಭವಾಗಿದ್ದು ಹಣ ಮಾಡುವ ಸಾಧ್ಯತೆಗಳಿಂದಾಗಿಯೇ ಹೊರತು ಕ್ರಿಕೆಟ್ ಆಟಕ್ಕೆ ಮತ್ತೊಂದು ಆಯಾಮವನ್ನು ಜೋಡಿಸುವ ಕ್ರೀಡಾಸಕ್ತಿಯಿಂದಲ್ಲ. ಒಂದು ಪ್ರೀಮಿಯರ್ ಲೀಗ್ ಎಂದರೆ ಖಾಸಗಿ ಕ್ಲಬ್‌ಗಳು ಮೋಜಿಗಾಗಿ ನಡೆಸುವ ಪಂದ್ಯಾವಳಿಯ ಸ್ವರೂಪವನ್ನು ಹೊಂದಿರುವ ಈ ಐಪಿಎಲ್ ಮೊದಲು ಉದ್ಯಮಿಗಳ ಮುಂದಿಟ್ಟಿದ್ದು ಹೇಗೆ ಲಾಭ ಮಾಡಬಹುದು ಎಂಬ ಬಿಸಿನೆಸ್ ಮಾಡೆಲ್ಲನ್ನೇ ಹೊರತು ಕ್ರಿಕೆಟ್ ಪ್ರೇಮವನ್ನಲ್ಲ, ಇಂದು ಭಾರತದಲ್ಲಿ ಕ್ರಿಕೆಟ್ ಮತ್ತು ಬಾಲಿವುಡ್ ಎರಡು ಉದ್ಯಮಗಳು ಬಡವರು ತಮ್ಮ ಜೋಬಿನಿಂದ ಹಣ ತೆಗೆದುಕೊಡುವಂತೆ ಮಾಡಬಲ್ಲ ವಂಚಕ ಆದರೆ ಮಾಯೆಯನ್ನು ಹೊಂದಿರುವ ಶಕ್ತಿ ಎಂಬುದನ್ನು ಚೆನ್ನಾಗಿ ಬಲ್ಲ ಲಲಿತ್ ಮೋದಿ ಉದ್ಯಮಿಗಳ ಎದುರಿಗೆ ಸುಲಭ ಸಾಧ್ಯವಾದ ಲಾಭದ ಮಾರ್ಗವನ್ನು ತೆರೆದಿರಿಸಿದ.



ಪ್ರಾರಂಭದಲ್ಲಿ ಹೆಚ್ಚು ಜನ ಈ ಕನಸನ್ನು ಮೋದಿಯ ಕಣ್ಣಲ್ಲಿ ಕಂಡಂತೆ ಕಾಣಲು ಸಾಧ್ಯವಾಗಲಿಲ್ಲ, ಆದರೆ ವಂಚನೆಯ ಉದ್ಯಮದಲ್ಲಿ ಪಳಗಿದ ಅಂಬಾನಿ, ಮಲ್ಯರಂತ ಉದ್ಯಮಿಗಳು ಕೂಡಲೇ ಐಪಿಎಲ್ ಚಿನ್ನದ ಮೊಟ್ಟೆ ಇಡುವ ಕೋಳಿ ಎಂಬುದನ್ನು ಅರ್ಥಮಾಡಿಕೊಂಡರು. ಮೂರು ವರ್ಷದ ಕೆಳಗೆ ಎಂಟು ಫ್ರಾಂಚೈಸಿಗಳು-ಉದ್ಯಮಿಗಳು, ಎಂಟು ಟೀಮುಗಳನ್ನು ಒಟ್ಟು 2894 ಕೋಟಿಗಳಿಗೆ ಕೊಂಡುಕೊಂಡರು. ಇಷ್ಟು ಮೊತ್ತವನ್ನು ಮುಂದಿನ ಹತ್ತು ವರ್ಷಗಳಲ್ಲಿ ಈ ಉದ್ಯಮಿಗಳು ಮೋದಿಯ ಐಪಿಎಲ್‌ಗೆ ಪಾವತಿ ಮಾಡಬೇಕು. ಇದರಲ್ಲಿ ಅಂಬಾನಿ ತನ್ನ ಮುಂಬೈ ಇಂಡಿಯನ್ಸ್ ಟೀಮನ್ನು 448 ಕೋಟಿಗೆ ಕೊಂಡುಕೊಂಡರೆ, ಮಲ್ಯ ಬೆಂಗಳೂರು ಟೀಮನ್ನು 446 ಕೋಟಿಗಳಿಗೂ, ಈಗ ಮಾರಾಟಕ್ಕೆ ಸಿದ್ಧವಾಗಿರುವ ಪಂಜಾಬ್ ಕಿಂಗ್ಸ್ ಟೀಮನ್ನು 304 ಕೋಟಿಗೂ ಹಾಗೂ ಅತ್ಯಂತ ಕಡಿಮೆ ಬೆಲೆಗೆ ಮಾರಾಟವಾದ ರಾಜಸ್ತಾನ್ ರಾಯಲ್ಸ್ ಟೀಮನ್ನು 268 ಕೋಟಿಗೂ ವಿವಿಧ ಉದ್ಯಮಿಗಳು ಕೊಂಡುಕೊಂಡರು. ಒಬ್ಬೊಬ್ಬ ಕ್ರಿಕೆಟ್ ಆಟಗಾರನಿಗೆ ಆಯಾ ದೇಶದ ಕ್ರಿಕೆಟ್ ಬೋರ್ಡುಗಳು ಇಡೀ ಹತ್ತು ವರ್ಷ ಆಡಿದರೂ ಕೊಡದಷ್ಟು ಹಣವನ್ನು ಒಂದು ಸೀಸನ್ನಿನಲ್ಲೇ ಇವರುಗಳು ಕೊಡಲು ಸಿದ್ಧರಾದರು. ಉದಾಹರಣೆಗೆ ಧೋನಿಗೆ ಕಳೆದ ಸೀಸನ್ನಿನಲ್ಲಿ ತೆತ್ತ ಬೆಲೆ 1.5 ಕೋಟಿ ರೂ. 2011ರಿಂದ ಪ್ರಾರಂಭವಾಗುವ ಹೊಸ ಸೀಸನ್ನಿನಲ್ಲಿ ಒಬ್ಬ ಆಟಗಾರನಿಗೆ 4-10 ಕೋಟಿ ರೂ.ವನ್ನು ನೀಡಬಹುದು. ಇಷ್ಟಾದ ಮೇಲೆ ಯಾರಾದರೂ ಏಕೆ ದೇಶಪ್ರೇಮ ಇತ್ಯಾದಿಗಳಿಗೆ ಕಟ್ಟುಬಿದ್ದು ದೇಶಕ್ಕೆ ಆಡುತ್ತಾರೆ. ಆದ್ದರಿಂದಲೇ ಕುಂಬ್ಳೆಯನ್ನೂ ಒಳಗೊಂಡಂತೆ, ವಾರ್ನೆ, ಗಿಲ್ಕ್ರಿಸ್ಟ್‌ನಂತವರೆಲ್ಲಾ ತಮ್ಮ ತಮ್ಮ ದೇಶದ ಟೀಮಿಗೆ ರಾಜೀನಾಮೆ ಕೊಟ್ಟು ಐಪಿಎಲ್ ಸೇರಿಕೊಳ್ಳುತ್ತಿದ್ದಾರೆ. ಕ್ರಿಕೆಟ್ ರತ್ನ ತೆಂಡೂಲ್ಕರ್ ಸಹ ಟ್ವೆಂಟಿ 20 ಮಾದರಿಯಲ್ಲಿ ದೇಶಕ್ಕೆ ಆಡದೇ ಕೇವಲ ಐಪಿಎಲ್‌ಗಾಗಿ ಆಡಲು ನಿರ್ಧರಿಸಿದ್ದಾರೆ. ಇದು ಈ ಐಪಿಎಲ್ ಆಟಗಾರರನ್ನು ಭ್ರಷ್ಟರನ್ನಾಗಿಸುವ ರೀತಿ.

ಲಾಭವಿಲ್ಲದಿದ್ದರೆ ದೇಶದ ಪ್ರಜೆಯಾಗಲೂ ಒಪ್ಪಿಕೊಳ್ಳಲು ಸಿದ್ಧವಿರದ ಈ ಉದ್ಯಮಿಗಳು ಹಾಕಿದ ಹಣದ ಮೇಲೆ ಲಾಭದ ಖಾತರಿ ಇಲ್ಲದೇ ಏನೂ ಹೂಡಿರಲಿಲ್ಲ ಅಥವಾ ಕೆಲವು ಪಂಡಿತರು ವಿಶ್ಲೇಷಿಸುವಂತೆ ಕೇವಲ ಹೆಸರು ಮತ್ತು ಪ್ರತಿಷ್ಠೆಗೆಂದೇ ಈ ಪಾಟಿ ಹಣವನ್ನು ಹೂಡಿರಲಿಲ್ಲ, ಲಲಿತ್ ಮೋದಿಯ ಐಪಿಎಲ್ ಬಿಸಿನೆಸ್ ಮಾಡೆಲ್ ಇವರೆಲ್ಲರಿಗೂ ಎರಡು ವರ್ಷದ ನಂತರ ಖಚಿತ ಲಾಭವನ್ನು ಖಾತರಿಪಡಿಸಿತ್ತು. ಉದಾಹರಣೆಗೆ ಐಪಿಎಲ್ ತನ್ನ ಆಟಗಳ ಟೀವಿ ಪ್ರಸಾರವನ್ನು ಮುಂದಿನ ಐದು ವರ್ಷಗಳಿಗೆ ಸೋನಿ ಚಾನೆಲ್ಲಿಗೆ 8,000 ಕೋಟಿ ರೂ.ಗಳಿಗೆ ಮಾರಿಕೊಂಡಿದೆ. ಅದೇ ರೀತಿ ಐಪಿಎಲ್ ಶೀರ್ಷಿಕೆ ಮತ್ತು ನೋಕಿಯಾ ಇನ್ನಿತರ ಸ್ಪಾನ್ಸರ್‌ಗಳಿಂದ ಹಾಗೂ ಟಿಕೆಟ್ ಮಾರಾಟ ಇನ್ನಿತ್ಯಾದಿಗಳಿಂದ ಬರುವ ಆದಾಯ 3-4000 ಕೋಟಿ ರೂ. ಇದರ ಶೇ.60 ಭಾಗವನ್ನು ಐಪಿಎಲ್ ಎಂಟು ಫ್ರಾಂಚೈಸಿಗಳೊಂದಿಗೆ ಹಂಚಿಕೊಳ್ಳುತ್ತದೆ. ಅದೇ ರೀತಿ ಪ್ರತಿಯೊಬ್ಬ ಫ್ರಾಂಚೈಸಿಯು ತನ್ನ ಟೀಮು ಆಟವಾಡುವ ಫೀಲ್ಡಿನಲ್ಲಿ ವಾಣಿಜ್ಯ ಜಾಹೀರಾತುಗಳಿಗೆ ಹಣ ಪೀಕುವುದರಿಂದಲೂ ದುಡ್ಡು ಮಾಡಬಹುದು.

ಈ ಎಲ್ಲಾ ಕಾರಣದಿಂದಲೇ ಕೇವಲ ಮೂರು ವರ್ಷಗಳಲ್ಲಿ ಈ ಐಪಿಎಲ್ 18,000 ಕೋಟಿ ಮೌಲ್ಯದ ಸಂಸ್ಥೆಯಾಗಿ ಬೆಳೆದಿದೆ. ಮೋದಿಯ ಪ್ರಕಾರ ಇನ್ನು ಐದು ವರ್ಷಗಳಲ್ಲಿ ಇದು 1 ಲಕ್ಷ ಕೋಟಿ ವ್ಯವಹಾರದ ಬ್ರಾಂಡಿನ ಸಂಸ್ಥೆಯಾಗಲಿದೆ.

ಹಣವಿದ್ದ ಮೇಲೆ ಅದರಲ್ಲೂ ಉದ್ರಿ ಮತ್ತು ಖಚಿತ ಲಾಭವಿದ್ದ ಮೇಲೆ ವಂಚನೆ, ಮೋಸ, ಸುಲಿಗೆ ಎಲ್ಲವೂ ಸಹಜವೇ. ಅಲ್ಲಿ ಕ್ರೀಡೆಯೂ ಇರುವುದಿಲ್ಲ ಕ್ರೀಡಾಸ್ಫೂರ್ತಿಯೂ ಇರುವುದಿಲ್ಲ, ಈಗಾಗಿರುವುದೂ ಇದೇ. ಮೊದಲು ಐಪಿಎಲ್‌ನ ಯಶಸ್ಸಿನ ಬಗ್ಗೆ ಸಂದೇಹ ಹೊಂದಿದ್ದ ಹಲವು ಉದ್ಯಮಿಗಳು ಈಗ ಕೈಕೈ ಹಿಸುಕಿಕೊಂಡು ಐಪಿಎಲ್ ಸೇರಲು ಹಿಕಮತ್ತುಗಳನ್ನು ನಡೆಸುತ್ತಿದ್ದಾರೆ. ಈ ಆಟದಲ್ಲಿ ಅಧಿಕ ಪಾಲನ್ನು ಕಸಿದುಕೊಳ್ಳಲು ಲಲಿತ್ ಮೋದಿಗೂ ಯೋಜನೆಗಳಿವೆ. ಇದರ ಫಲಿತಾಂಶವೇ ಈಗ ಬಚ್ಚಿಕೊಂಡಿರುವ ತರೂರ್-ಮೋದಿ ಕಲಹ.

● ಶಿವಸುಂದರ್

ಶತಮಾನೋತ್ಸವ ಪ್ರಹಸನ ಲಿಂಗಾಯತರ ಒಳಜಗಳ



ಅಖಿಲ ಭಾರತ ವೀರಶೈವ ಮಹಾಸಭಾ ಹಾಗೂ ಶ್ರೀ ಮದ್ವೀರ ಶೈವ ಶಿವಯೋಗಿ ಮಂದಿರ ಸಂಸ್ಥೆಯ ಶತಮಾನೋತ್ಸವದ ಅಂಗವಾಗಿ ನಡೆದ ಈ ಕಾರ್ಯಕ್ರಮದಲ್ಲಿ ಹೊಡೆದಾಟ, ಬೀದಿಜಗಳ, ಹಲ್ಕಾ ಬೈಗುಳ, ದೇಣಿಗೆ ಹಣ ಗುಳುಂ... ಮುಂತಾದ ಧರ್ಮೋದ್ಧಾರಕ ಕಾರ್ಯಗಳೆಲ್ಲಾ ನಡೆದಿವೆ. ಈ ಗಲಾಟೆಗಳಲ್ಲಿ ಗೂಂಡಾಗಿರಿಯೂ ಕಾಣಿಸಿಕೊಂಡಿದೆ. ಗದಗಿನ ಸಜ್ಜನರಾದ ತೋಂಟದಾರ್ಯ ಸಿದ್ದಲಿಂಗ ಸ್ವಾಮಿಗಳ ಕಾರಿಗೆ ಬಿಜೆಪಿ ಶಾಸಕ ಚರಂತಿಮಠನ ಪುಂಡ ಬೆಂಬಲಿಗರು ಕಲ್ಲು ಹೊಡೆದು ತಮ್ಮ ಬಸವ ತತ್ವ ಯಾವ ರೀತಿ ಇದೆಯೆಂತಲೂ ತೋರಿಸಿದ್ದಾರೆ.

• ಪಾರ್ವತೀಶ
bparvateesha@gmail.com




ತೋಂಟದಾರ್ಯರ ಕಾರಿಗೆ ಬ್ರಾಹ್ಮಣಶಾಹಿಗಳ ಕಲ್ಲೇಟು....

ಕರ್ನಾಟಕದ ಲಿಂಗಾಯುತರು ಮತ್ತೆ ಒಳಜಗಳ ಶುರುಮಾಡಿಕೊಂಡಿದ್ದಾರೆ. ಇದು ಕಾಂಗ್ರೆಸ್ ಲಿಂಗಾಯತ, ಬಿಜೆಪಿ ಲಿಂಗಾಯತ ಎನ್ನುವ ಜಗಳ ಅಲ್ಲ, ಮಠಾಧೀಶರ ಮಧ್ಯೆ ಕಡಿಮೆ ಗ್ರೇಡಿನ ಸ್ವಾಮಿ ಜಾಸ್ತಿ ಗ್ರೇಡಿನ ಸ್ವಾಮಿ ಯಾರೆಂಬ ಜಗಳ!

ಉತ್ತರ ಕರ್ನಾಟಕ ಮತ್ತು ಹಳೇ ಮೈಸೂರಿನ ಲಿಂಗಾಯತರೆಂಬ ಭೇದಭಾವದ ಕದನ!

ಇದಿಷ್ಟೇ ಅಲ್ಲದೆ ಬಹಳ ಮುಖ್ಯವಾಗಿ ಬ್ರಾಹ್ಮಣೀಕರಣ ಗೊಂಡಿರುವ ಹಾಗೂ ಬಸವ ತತ್ವ ಪ್ರತಿಪಾದಿಸುವ ಮಠಾಧೀಶರು -ಭಕ್ತರ ಗುಂಪುಗಳ ನಡುವಿನ ಕಾಳಗ!!!



ತೋಂಟದಾರ್ಯರು

ಮೊನ್ನೆ ಏಪ್ರಿಲ್ 9ರಿಂದ 13ರವರೆಗೆ ಬಾದಾಮಿಯಲ್ಲಿ ನಡೆದ ಸಮಾವೇಶ ಈ ಪ್ರಹಸನಗಳಿಗೆ ಸಾಕ್ಷಿಯಾಯಿತು. ಅಖಿಲ ಭಾರತ ವೀರಶೈವ ಮಹಾಸಭಾ ಹಾಗೂ ಶ್ರೀ ಮದ್ವೀರ ಶೈವ ಶಿವಯೋಗಿ ಮಂದಿರ ಸಂಸ್ಥೆಯ ಶತಮಾನೋತ್ಸವದ ಅಂಗವಾಗಿ ನಡೆದ ಈ ಕಾರ್ಯಕ್ರಮದಲ್ಲಿ ಹೊಡೆದಾಟ, ಬೀದಿಜಗಳ, ಹಲ್ಕಾ ಬೈಗುಳ, ದೇಣಿಗೆ ಹಣ ಗುಳುಂ... ಮುಂತಾದ ಧರ್ಮೋದ್ಧಾರಕ ಕಾರ್ಯಗಳೆಲ್ಲಾ ನಡೆದಿವೆ. ಈ ಗಲಾಟೆಗಳಲ್ಲಿ ಗೂಂಡಾಗಿರಿಯೂ ಕಾಣಿಸಿಕೊಂಡಿದೆ. ಗದಗಿನ ಸಜ್ಜನರಾದ ತೋಂಟದಾರ್ಯ ಸಿದ್ದಲಿಂಗ ಸ್ವಾಮಿಗಳ ಕಾರಿಗೆ ಬಿಜೆಪಿ ಶಾಸಕ ಚರಂತಿಮಠನ ಪುಂಡ ಬೆಂಬಲಿಗರು ಕಲ್ಲು ಹೊಡೆದು ತಮ್ಮ ಬಸವತತ್ವ ಯಾವ ರೀತಿ ಇದೆಯೆಂತಲೂ ತೋರಿಸಿದ್ದಾರೆ. ಈ ರೀತಿಯ ಕಿತಾಪತಿ ನಡೆಯುವ ಅಂದಾಜಿದ್ದುದರಿಂದಲೋ ಏನೋ ಚಿತ್ರದುರ್ಗದ ಮುರುಘಾ ಶರಣರು, ಸಿರಿಗೆರೆ ಮಠಾಧೀಶರು ಅತ್ತ ಹೋಗಲೇ ಇಲ್ಲ, ಉಳಿದಂತೆ ಹಳೇ ಮೈಸೂರಿನ ಹಾಸನ, ತುಮಕೂರು, ಬೆಂಗಳೂರು, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳ ಲಿಂಗಾಯತ ಮಠಾಧೀಶರಿಗೆ ಆಹ್ವಾನವನ್ನೇ ನೀಡದೆ ದೂರ ಇರಿಸಲಾಗಿತ್ತು.



ಭೀಮಣ್ಣ ಖಂಡ್ರೆ

ಇನ್ನುಳಿದಂತೆ ಶ್ರೀಶೈಲ, ಉಜ್ಜನಿ, ಕಾಶಿ ಹಾಗೂ ಬಾಳೇಹೊನ್ನೂರಿನ ಮಠಾಧೀಶರುಗಳು ತಮ್ಮ ಲೆವೆಲ್‌ಗೆ ತಕ್ಕುದಾದ ಎತ್ತರದ ಪೀಠ (ಕುರ್ಚಿ)ಗಳನ್ನೂ ಹಾಕಲಿಲ್ಲವೆಂದು ಕಾರ್ಯಕ್ರಮವನ್ನೇ ಬಹಿಷ್ಕರಿಸಿಬಿಟ್ಟರು...!



ಸಂಗನಬಸವ ಸ್ವಾಮಿ

ಪಂಚಾಚಾರ್ಯರೆಂದು ಬ್ರಾಂಡ್ ಆಗಿರುವ ಇವರು ಉಳಿದ ಮಠಾಧೀಶರಿಗಿಂತ ತಾವು ದೊಡ್ಡವರೆಂಬ ಅಹಂ ಪ್ರದರ್ಶಿಸಿದರು.

ಇಷ್ಟೊಂದು ಅವ್ಯವಸ್ಥೆ, ಅರಾಜಕತೆ, ಅಹಂಕಾರ ಹಾಗೂ ಪೆದ್ದುತನಗಳೇ ಮೇಳೈಸಿದ್ದ, ಕರ್ನಾಟಕ ಆಡಳಿತಾರೂಢ, ಬಲಿಷ್ಠ ಲಿಂಗಾಯತ ಜಾತಿಯವರ ಸಮಾವೇಶ ಹೀಗೆ ಪಲ್ಟಿ ಹೊಡೆಯಲು ಅನೇಕ ಕಾರಣಗಳಿವೆ.

ಸತತ ಒಂದೂವರೆ ವರ್ಷದ ತಯಾರಿ ಮಾಡಿ, ಜ್ಯೋತಿ ಯಾತ್ರೆಯ ಪ್ರಚಾರ ನಡೆಸಿ 50 ಕೋಟಿ ರೂಪಾಯಿತನಕ ಹಣ ಎತ್ತಿ ಆಯೋಜಿಸಿದ್ದ ಸಮಾವೇಶ ಅಧ್ವಾನವಾಗಿ ನಡೆದಿದೆ.

ಮಹಾಸಭೆ ಅಧ್ಯಕ್ಷ ಭೀಮಣ್ಣ ಖಂಡ್ರೆ, ಶಿವಯೋಗ ಮಂದಿರದ ಅಧ್ಯಕ್ಷ ಸಂಗನಬಸವ ಸ್ವಾಮಿ, ನಾಗನೂರು ರುದ್ರಾಕ್ಷಿ ಮಠದ ಸಿದ್ದರಾಮ ಸ್ವಾಮಿಗಳು ಹಾಗೂ ವೀರಣ್ಣ ಚರಂತಿಮಠ ಸೇರಿದಂತೆ ಹಲವು ರಾಜಕಾರಣಿಗಳೇ ಸಮಾವೇಶದ ವೈಫಲ್ಯಕ್ಕೆ ಕಾರಣ.

ಇವರ ಜಗಳದ ಪೈಕಿ ಪ್ರಮುಖವಾಗಿದ್ದ 'ಶಿವಯೋಗಿ ಮಂದಿರದ' ವಿಚಾರ ಬಿಟ್ಟು (ವಿವರ ಬಾಕ್ಸ್‌ನಲ್ಲಿದೆ) ಉಳಿದ ಕತೆ ಹೇಳಬೇಕೆಂದರೆ ಅದೊಂದು ರಾಮಾಯಣ.

ತಲೆಬುಡ ಇರದ ಪ್ಲಾನ್

ಅಖಿಲ ಭರತ ವೀರಶೈವ ಮಹಾಸಭೆ ಅಸ್ತಿತ್ವಕ್ಕೆ ಬರಲು ಹಾನಗಲ್ಲಿನ ಕುಮಾರಸ್ವಾಮಿಗಳ ಪಾತ್ರ ದೊಡ್ಡದಿದೆ. ಅದೇರೀತಿ ವೀರಶೈವ ಮಠಗಳಿಗೆ ಪೀಠಾಧಿಪತಿಗಳಾಗಿ ಜವಾಬ್ದಾರಿ ನಿರ್ವಹಿಸಲು ಯುವ ವಟುಗಳಿಗೆ ಸೂಕ್ತ ಧಾರ್ಮಿಕ, ಆಧ್ಯಾತ್ಮಿಕ ತರಬೇತಿ ಕೊಡಿಸಲು 1909ರಲ್ಲಿ ಶಿವಯೋಗ ಮಂದಿರ ಒಂದನ್ನು ಸ್ಥಾಪಿಸಲಾಗಿತ್ತು, ಇವೆರಡೂ ಕರ್ನಾಟಕದ ಲಿಂಗಾಯತರಿಗೆ ಮುಖ್ಯ ಸಂಸ್ಥೆಗಳೇ. ಮೊನ್ನೆ ನಡೆದದ್ದು ಈ ಸಂಸ್ಥೆಗಳ ಶತಮಾನೋತ್ಸವ ಕಾರ್ಯಕ್ರಮ. ಈ ಕಾರ್ಯಕ್ರಮದ ಸಿದ್ಧತೆ 2 ವರ್ಷಗಳ ಹಿಂದೆಯೇ ಶುರುವಾಗಿತ್ತಾದರೂ ಹಣ ಎತ್ತುವಳಿ ಬಿಟ್ಟರೆ ಉಳಿದದ್ದು ಯಾವುದೂ ವ್ಯವಸ್ಥಿತವಾಗಿ ನಡೆಯಲಿಲ್ಲ, ಮೊನ್ನೆ ಏಪ್ರಿಲ್ 9ರಿಂದ ಶುರುವಾದ ಸಮಾವೇಶದ 24 ಪುಟಗಳ ಆಹ್ವಾನ ಪತ್ರಿಕೆ ಪ್ರಿಂಟಾಗಿ ಜನರಿಗೆ ತಲುಪಿದ್ದೇ ಮಾರ್ಚ್ ಕೊನೆಯ ವಾರದಲ್ಲಿ ಇಷ್ಟು ತಡವಾದರೂ ಒಂದು ರಾಶಿ ತಪ್ಪು ಮಾಹಿತಿಗಳಿದ್ದ ಇನ್ವಿಟೇಷನ್ ಆದಾಗಿತ್ತು, ಸೋನಿಯಾ ಗಾಂಧಿ ಏಪ್ರಿಲ್ 12ಕ್ಕೆ ಬಂದರೆ ಆಹ್ವಾನದಲ್ಲಿ ಏಪ್ರಿಲ್ 9 ಎಂದು ಪ್ರಿಂಟಾಗಿತ್ತು, ಉಳಿದಂತೆ ಅತಿಥಿಗಳು, ಭಾಷಣಕಾರರು, ಸನ್ಮಾನಿತರೆಂದು 300ಕ್ಕೂ ಹೆಚ್ಚು ಹೆಸರುಗಳು ಪ್ರಿಂಟಾಗಿದ್ದವು. ಸಭಿಕರಿಗೆಂದು 50 ಸಾವಿರ ಕುರ್ಚಿಗಳನ್ನು ಹಾಕಿಸಲಾಗಿತ್ತು, ಆದರೆ ಬಂದ ಜನ ಯಾವ ದಿನದಲ್ಲೂ 2 ಸಾವಿರ ದಾಟಲೇ ಇಲ್ಲ, ಸೋನಿಯಾ ಗಾಂಧಿ ಬಂದಾಗ ಜನ ಕಡಿಮೆ ಇದ್ದರೆ ಮರ್ಯಾದೆ ಹೋದೀತೆಂದು ಕಾಂಗ್ರೆಗಳು 30 ಸಾವಿರ ಜನರನ್ನೂ ಸೇರಿಸಿಬಿಟ್ಟರು. ಇದನ್ನು ನೋಡಿ ಕೆಲ ಬಜೆಪಿ ಲಿಂಗಾಯತರು "ಬೇರೆ ಜಾತಿ ಜನರನ್ನು ಯಾಕೆ ಕರೆತಂದಿರಿ?" ಅಂತ ಜಗಳವನ್ನು ಆಡಿಬಿಟ್ಟರು. ಈ ಸಮಾವೇಶದ ಪ್ರಚಾರ ಕಾರ್ಯಕ್ಕೆಂದು ಒಂದು ವರ್ಷದ ಹಿಂದೆಯೇ 'ಜ್ಯೋತಿ ಯಾತ್ರೆ' ರಥವನ್ನು ಹೊರಡಿಸಲಾಗಿತ್ತು, ಈ ರಥ ಕರ್ನಾಟಕದ ಯಾವ ಊರಿಗೆ ಬಂತು, ಹೋಯ್ತೆಂಬುದು ಅನ್ಯ ಜಾತಿಯವರಿಗಿರಲಿ ಸಾಕ್ಷಾತ್ ಅಪ್ಪಟ ಲಿಂಗಾಯತರಿಗೂ ಗೊತ್ತಾಗಲೇ ಇಲ್ಲ, ಕರಾವಳಿ ಪ್ರಾಂತ್ಯದಲ್ಲಿ ಬ್ರಾಹ್ಮಣ ರಾಘವೇಶ್ವರ ಭಾರತಿ ಸ್ವಾಮಿಗೆ ಜ್ಯೋತಿ ಯಾತ್ರೆಯ ಉಸ್ತುವಾರಿ ವಹಿಸಿದ್ದು ಗಮನಾರ್ಹವಾಗಿದೆ. ಮತ್ತೊಂದೆಡೆ ಸಮಾವೇಶದ ಜವಾಬ್ದಾರಿ ಹೊರಬೇಕಿದ್ದ ಭೀಮಣ್ಣ ಖಂಡ್ರೆ ತನ್ನ ಸಕ್ಕರೆ ಕಾರ್ಖಾನೆಯ ವಿದ್ಯುತ್ ಕಳ್ಳತನದ ಕೇಸನ್ನು ಮುಚ್ಚಿಹಾಕಲು ಯದ್ದಿ ಜೊತೆ ಡೀಲು ಕುದುರಿಸುತ್ತಾ ಕಾಲ ಹಾಕಿದ್ದರಿಂದ ಹೇಳುವವರು, ಕೇಳುವವರಿಲ್ಲದೆ ಇಡೀ ಕಾರ್ಯಕ್ರಮವೇ ಅಧ್ವಾನವೆದ್ದು ಹೋಯಿತು. ಜೊತೆಗೆ ಖಂಡ್ರೆ ತನ್ನ ಗಾಂಧಿ ಶಿಕ್ಷಣ ಸಂಸ್ಥೆಯ ಎಲೆಕ್ಷನ್ ರಾಜಕೀಯದಲ್ಲಿ ಮುಳುಗಿಹೋಗಿದ್ದ.



50 ಕೋಟಿ ರೂ. ಲೆಕ್ಕ ಎಲ್ಲಿ?

ವೀರಶೈವ ಮಹಾಸಭೆಯ ಶತಮಾನೋತ್ಸವ ಹೈಲೈಟ್ ಎಂದರೆ ರಾಜ್ಯಾದ್ಯಂತ ಗಣಿದಣಿಗಳು, ವ್ಯಾಪಾರಸ್ಥರು, ರಾಜಕಾರಣಿಗಳು ಹಾಗೂ ಸರ್ಕಾರಿ ನೌಕರರಿಂದ ಕೋಟಿಗಟ್ಟಲೇ ದುಡ್ಡು ಸಂಗ್ರಹಿಸಿ ಯಾರಿಗೂ ಲೆಕ್ಕ ಕೊಡದೆ ಗುಳುಂ ಮಾಡಿರುವುದು.

ಒಟ್ಟು 50 ಕೋಟಿ ರೂಪಾಯಿಗಳಿಗೂ ಜಾಸ್ತಿ ಹಣ ಎತ್ತಿರುವ ವ್ಯವಸ್ಥಾಪಕರು ನಿಜಕ್ಕೂ ಖರ್ಚಾದ ಹಣ ಎಷ್ಟೆಂದು ಲೆಕ್ಕ ಇಟ್ಟಿಲ್ಲ, ಊಟದ ಖರ್ಚನ್ನು ಬಳ್ಳಾರಿಯ ಗಣಿ ಲೂಟಿಕೋರರಾದ ಸಾಯಿಕೃಷ್ಣ ಮಿನರಲ್‌ನ ದೀಪಕ್ ಸಿಂಗ್, ಪ್ರವೀಣ್ ಸಿಂಗ್‌ರವರಿಂದ, ಆರ್.ಪಿ.ಮೈನ್ಸ್‌ನ ಪಂಪಾಪತಿ ಅಲ್ಲ, ವೀರಭದ್ರಪ್ಪನ ಫ್ಯಾಮಿಲಿಯಿಂದ ವಸೂಲಿ ಮಾಡಲಾಗಿತ್ತು,

ಮುಖ್ಯಮಂತ್ರಿ ಯಡಿಯೂರಪ್ಪನೇ ಯಾರ್‍ಯಾರಿಂದಲೋ 5 ಕೋಟಿ ರೂಪಾಯಿ ತನಕ ಡೊನೇಷನ್ ಕೊಡಿಸಿದ್ದಾರೆ. ಶಾಸಕ ವೀರಣ್ಣ ಚರಂತಿಮಠ ತನ್ನ ಶಿಕ್ಷಣ ಸಂಸ್ಥೆಯ ಎಲ್ಲಾ ನೌಕರರ ಕತ್ತಿನ ಪಟ್ಟಿ ಹಿಡಿದು ಚಂದಾ ಎತ್ತಿದ್ದಾನೆ.

ಬಿಜಾಪುರ, ಬಾಗಲಕೋಟೆಯ ಶುಗರ್ ಫ್ಯಾಕ್ಟರಿಗಳು ಸಿಮೆಂಟ್ ಫ್ಯಾಕ್ಟರಿಗಳಿಂದಲೂ ಹಣ ಕೀಳಲಾಗಿದೆ. ಅನೇಕ ಕಡೆ ತಹಶೀಲ್ದಾರ್‌ಗಳೇ ಮುಂದೆ ನಿಂತು ಸರ್ಕಾರಿ ನೌಕರರಿಂದ ಹಣ ಕಿತ್ತಿದ್ದಾರೆ. ಸ್ಮರಣ ಸಂಚಿಕೆಗಳ ಜಾಹೀರಾತೆಂದು 75 ಲಕ್ಷ ರೂಪಾಯಿ ವಸೂಲಿ ಮಾಡಿ ಅರ್ಧಕರ್ಧ ಹಣವನ್ನು ಸಿದ್ದಯ್ಯ ಚಿದಾನಂದ ಮಠದ, ಗುಡಗಂಟಿ ಮುಂತಾದವರು ಗುಳುಂ ಮಾಡಿದ್ದಾರೆ.

ವಸೂಲಾದ ಹಣದ ವಿವರ ಗೊತ್ತಿರುವುದು ಖಂಡ್ರೆ, ಚಂದ್ರಕಾಂತ ಬೆಲ್ಲದ ಮುಂತಾದ ಕೆಲವರಿಗೆ ಮಾತ್ರ ತಾವು ನುಂಗಿರುವುದೆಷ್ಟೆಂದು ಅವರು ಹೇಳುತ್ತಾರಾ ಹೇಳಿ?

ಮಜಾ ಅಂದರೆ ಈ ಸಮಾವೇಶದ ಶಾಮಿಯಾನ, ಕುರ್ಚಿ, ಮೈಕು ವ್ಯವಸ್ಥೆ ಹಾಗೂ ಸ್ಮರಣ ಫಲಕ, ಹಾರಗಳ ಖರೀದಿ ಮಾಡುವಾಗ ಸ್ವಾಮೀಜಿಯೊಬ್ಬ ಕಮೀಷನ್ ಫಿಕ್ಸ್ ಮಾಡಿಕೊಂಡು ಕನಿಷ್ಠ 5 ಲಕ್ಷ ರೂಪಾಯಿ ಲಪಟಾಯಿಸಿರುವುದು ಕೆಲವರಿಗೆ ಗೊತ್ತಾಗಿ ದಂಗುಬಡಿದುಹೋಗಿದ್ದಾರೆ.

ಹುಚ್ಚುಮುಂಡೆ ಮದುವೇಲಿ ಉಂಡೋನೆ ಜಾಣ ಎಂಬ ಗಾದೆ ಮಾತಿದೆಯಲ್ಲ, ಅದೇರೀತಿ ಲಿಂಗಾಯತರ ಸಮಾವೇಶದಲ್ಲಿ ಅನೇಕರು ಜಾಣತನ ತೋರಿ ತಮ್ಮ ಜನ್ಮ ಸಾರ್ಥಕ ಪಡಿಸಿಕೊಂಡಿದ್ದಾರೆ.

ಬ್ರಾಹ್ಮಣಶಾಹಿ V/s ಬಸವಣ್ಣ
ಶಿವಯೋಗ ಮಂದಿರ V/s ಬಸವ ಯೋಗ ಮಂದಿರ

ಕರ್ನಾಟಕದ ಲಿಂಗಾಯತರಲ್ಲಿ ಶರಣತತ್ವ ಹಾಗೂ ಬ್ರಾಹ್ಮಣೀಕರಣಗೊಂಡ ಎರಡು ಧಾರೆಗಳಿವೆ. ಶರಣತತ್ವದ ನೆಲೆಯಲ್ಲಿ ನೂರಾರು ವಿರಕ್ತ ಮಠಗಳು ಹಾಗೂ ಧಾರ್ಮಿಕ ನಾಯಕರು ಜನಪರ ಕೆಲಸ ಮಾಡುತ್ತಾ ಬಂದಿದ್ದಾರೆ. ಸಿದ್ದಗಂಗಾ ಮಠ, ಚಿತ್ರದುರ್ಗದ ಬೃಹನ್ಮಠ, ಗದಗಿನ ತೋಂಟದಾರ್ಯ ಮಠ .... ಹೀಗೆ ಅನೇಕರು ವಿರಕ್ತ ಪರಂಪರೆಗೆ ಸೇರಿದ್ದಾರೆ. ಮತ್ತೊಂದೆಡೆ ಪಂಚಾಚಾರ್ಯರ ಪರಂಪರೆಗೆ ಸೇರುವ ಬಾಳೆಹೊನ್ನೂರು, ಶ್ರೀಶೈಲ, ಕಾಶಿ ಉಜ್ಜಯಿನಿಯ ಮಠಾಧೀಶರಿಗೆ ಬಸವಣ್ಣನೆಂದರೆ ತಿರಸ್ಕಾರ. ಅವರಿಗೆ 'ಶರಣರಿಗಿಂತಲೂ ಮೊದಲೇ ಲಿಂಗಾಯತ ಧರ್ಮವಿತ್ತು, ಅದೇ ನಮ್ಮ ಮೂಲನೆಲೆ' ಎಂಬ ನಂಬಿಕೆ. ಇವರೆಲ್ಲಾ ಸಂಸ್ಕೃತ ಸೇವಕರು. ದರ್ಪ, ಆಡಂಬರ, ವಜ್ರದ ಕಿರೀಟ ವ್ಯಾಮೋಹಿಗಳು.

ಬಾದಾಮಿಯ ಶಿವಯೋಗಮಂದಿರ ಈಗ ಈ ನವ ಬ್ರಾಹ್ಮಣಶಾಹಿಗಳ ಹಿಡಿತದಲ್ಲಿದೆ. ಅಲ್ಲಿ ಈಗ ಕೇವಲ 33 ಯುವ ವಟುಗಳಿದ್ದು ಅವರೆಲ್ಲಾ ಕೇವಲ ಜಂಗಮ ಜಾತಿಗೆ ಸೇರಿದವರಾಗಿದ್ದಾರೆ. ಇತರೆ ಲಿಂಗಾಯತ ಉಪಜಾತಿಯ ಯುವಕರಿಗೆ ಇಲ್ಲಿ ಪ್ರವೇಶವಿಲ್ಲ, ಜೊತೆಗೆ ಬಸವತತ್ವಕ್ಕೆ ಆದ್ಯತೆ ನೀಡದೆ ಸಂಸ್ಕೃತ ವೇದ ಅಗಮಗಳನ್ನೇ ಇಲ್ಲೂ ಹೊತ್ತು ಮೆರೆಸಲಾಗುತ್ತಿದೆ.

ಗದಗಿನ ತೋಂಟದಾರ್ಯರು ಆಕ್ಷೇಪಿಸಿದ್ದು ಇದನ್ನೇ. ಆದರೆ ಗೂಂಡಾಗಿರಿ ನಡೆಸಿ ಅವರ ಬಾಯಿ ಮುಚ್ಚಿಸಲು ಯತ್ನಿಸಲಾಯಿತು.

ಈಗ ಏನಾಗಿದೆ ಗೊತ್ತೆ?

ಬಸವತತ್ವವನ್ನು ನಿಜಕ್ಕೂ ನಂಬುವ ಅನೇಕ ಮಠಾಧೀಶರು ಬಸವಯೋಗ ಮಂದಿರ ಎಂಬ ಹೊಸ ಸಂಸ್ಥೆ ಕಟ್ಟುವ ತೀರ್ಮಾನಕ್ಕೆ ಬಂದಿದ್ದಾರೆ. ಬ್ರಾಹ್ಮಣಶಾಹಿ ತತ್ವ ಅನುಕರಿಸದೆ ಶರಣತತ್ವ ಆಚರಿಸುತ್ತಾ ಅಲ್ಲಿ ಎಲ್ಲಾ ಲಿಂಗಾಯತ ಜಾತಿಯ ಯುವ ವಟುಗಳಿಗೆ ತರಬೇತಿ ನೀಡುವ ಬಗ್ಗೆ ಯೋಚಿಸಲಾಗುತ್ತಿದೆ. ತೋಂಟದಾರ್ಯರು, ಮಾತೆ ಮಹಾದೇವಿ, ಜಯಮೃತ್ಯುಂಜಯ ಸ್ವಾಮೀಜಿ, ಗುಳೇದಗುಡ್ಡದ ಬಸವಾರಾಧ್ಯರು, ಬೈಲೂರು ನಿಜಗುಣಾನಂದರು, ಚಿತ್ರದುರ್ಗದ ಮಾದಾರ ಚನ್ನಯ್ಯ ಸ್ವಾಮಿಗಳು ಸೇರಿದಂತೆ ನೂರಾರು ಮಠಾಧೀಶರು ಈಗ ಶಿವಯೋಗಮಂದಿರಕ್ಕೆ ಪರ್ಯಾಯವಾಗಿ ಬಸವಯೋಗ ಮಂದಿರ ಸ್ಥಾಪನೆಗೆ ಸಿದ್ಧರಾಗುತ್ತಿದ್ದಾರೆ.





ತೋಂಟದಾರ್ಯರ ಕಾರಿಗೆ ಬ್ರಾಹ್ಮಣಶಾಹಿಗಳ

ದವರು ಕಡಿಮೆ, ಬರದಿದ್ದವರೇ ಜಾಸ್ತಿ

ಈ ಶತಮಾನೋತ್ಸವದ ವೈಫಲ್ಯ ಮೊದಲ ದಿನ ದಿಂದಲೇ ವಾಯಿತು. ಉದ್ಘಾಟನಾ ಕಾರ್ಯಕ್ರಮಕ್ಕೆ ಬರಬೇಕಿದ್ದ ಗಾ ಸ್ವಾಮೀಜಿ ಅತ್ತ ತಲೆಯನ್ನೇ ಹಾಕಲಿಲ್ಲ, ಬಂದು ದ ಸುತ್ತೂರು ಮಠಾಧೀಶರಿಗೆ ಗೌರವವೇ ಸಿಗಲಿಲ್ಲ. ಸೆಮಿನಾರುಗಳಲ್ಲಿ ವೇದಿಕೆಯ ಮೇಲೆ ಐವತ್ತು ಜನರಿದ್ದರೆ ಕೆಯ ಮುಂಭಾಗ ಹದಿನೈದು ಇಪ್ಪತ್ತು ಸಭಿಕರು ಮಾತ್ರ ದ್ದರು. ಭಾರೀ ಪ್ರಚಾರ ಗಿಟ್ಟಿಸಿದ್ದ ಇಂಥ ಸಮಾವೇಶ ಜನರೇ ಇಲ್ಲದೆ ಬಿಕೋ ಎನ್ನುತ್ತಿರುವಾಗಲೇ ಪೀಠಾಧೀಶರ 'ಈಗೋ' ಜಗಳ ಹೊರಬಂತು.

ಕುರ್ಚಿ ಕದನ

ಏಪ್ರಿಲ್ 11ರ ಧಾರ್ಮಿಕ ಸಮಾವೇಶದಲ್ಲಿ ಕಾಶಿಯ ಶೇಖರ ಶಿವಾಚಾರ್ಯ ಸ್ವಾಮಿ, ಶ್ರೀಶೈಲದ ಉಮಾಪತಿ ತಾರಾಧ್ಯ ಶಿವಾಚಾರ್ಯರು, ಉಜ್ಜಯಿನಿಯ ಸಿದ್ಧರಾಜದೇಶಿಕೇಂದ್ರರು, ರಂಭಾಪುರಿಯ ಎಡೆಯೂರು ಮಠದ ರೇಣುಕ ಶಿವಾಚಾರ್ಯರು ಮುಂತಾದವರು ಕಿತ್ತು, ಇವರಲ್ಲಿ ಕೆಲವರು ಬಾದಾಮಿಯತ್ತ ಪ್ರಯಾಣವನ್ನೂ ದ್ದರು ಕೂಡ. ಪಂಚಪೀಠಕ್ಕೆ ಸೇರಿರುವ ಈ ಮಠಾಧೀಶರು ನ ಬಂದಾಗಲೇ ಬೇರೆ ಮಠಾಧೀಶರಿಗಿಂತ ತಮಗೆ ದ ಕುರ್ಚಿ ಹಾಕಬೇಕೆಂದು ಕಂಡೀಶನ್ ಹಾಕಿದ್ದರಂತೆ. ಯ ಶಾಸಕ ವೀರಣ್ಣ ಚರಂತಿಮಠ ಇದಕ್ಕೆ ಒಪ್ಪಿಕೊಂಡು ರೆ ಬೇರೆ ಗ್ರೇಡಿನ ಕುರ್ಚಿ ತರಿಸಿ ಹಾಕಿಸಿದ್ದರು. ಆದರೆ ಲ್ 11ರ ಬೆಳಗ್ಗೆ ಬೀದಿಜಗಳ ಶುರುವಾಯಿತು. ಸಕರಲ್ಲಿ ಕೆಲವರು ಇದನ್ನು ಒಪ್ಪದೆ ಎಲ್ಲಾ ಮಠಾಧೀಶರಿಗೂ ರೀತಿಯ ಕುರ್ಚಿ ಹಾಕಿಸಿಬಿಟ್ಟರು. ಇದನ್ನು ನೋಡಿ ಪೀಠದ ಬೆಂಬಲಿಗರು ಗಲಾಟೆ ಶುರು ಮಾಡಿದರು. ಸಭೆಯ ಕಾರ್ಯದರ್ಶಿ ವಾಗೀಶ ಪ್ರಸಾದ್ ತಾದವರು ಈ ಬೀದಿಜಗಳ ನೋಡಿ ಬೇಸರದಿಂದ ಬಿಟ್ಟರು. ಆಗ ಗುಳೇದಗುಡ್ಡದ ಹತ್ತಿರ ಬರುತ್ತಿದ್ದ ಗ್ರೇಡ್ ಮಠಾಧೀಶರಿಗೆ ಈ ಸುದ್ದಿ ತಿಳಿದು ಪಾವಿಷ್ಟರಾಗಿ ಕಾರನ್ನು ವಾಪಸ್ ತಿರುಗಿಸಿ ಟೇಹೋದರು!

ಪರ್ಯಾಸ ನೋಡಿ: ಅಂತ ಬಸವಣ್ಣನೇ 'ಎನಗಿಂತ ರಿಲ್ಲ' ಎಂದರೆ ಈ ಮಠಾಧೀಶರು 'ನನಗಿಂತ ಹಿರಿಯರಿಲ್ಲ' ದೊಡ್ಡ ಕುರ್ಚಿಗಾಗಿ ಜಗಳ ಮಾಡಿಕೊಂಡಿದ್ದಾರೆ.

ಈ ಮಧ್ಯೆ ಕರ್ನಾಟಕದ ಪ್ರಮುಖ ಲಿಂಗಾಯತ ಜಾತಿಯ ಎಸ್, ಐಪಿಎಸ್, ಐಎಫ್‌ಎಸ್ ಆಫೀಸರ್‌ಗಳಿಗೆ ಸನ್ಮಾನ ಜ್ ಆಗಿತ್ತು. ಈ ಲಜ್ಜೆಗೇಡಿ ಆಫೀಸರ್‌ಗಳು ಇದಕ್ಕೆ ಂಡಿದ್ದು ಅಸಹ್ಯ ಅನ್ನಿಸುತ್ತದೆ. ಆದರೂ ಇವರಲ್ಲಿ ಲುಭಾಗ ಸನ್ಮಾನಕ್ಕೂ ಬರಲಿಲ್ಲ.

ಗೆ ಮೊದಲ ಮೂರು ದಿನಗಳಲ್ಲಿ ಕಾರ್ಯಕ್ರಮಗಳು ಕನ್ನಡ ಫಿಲಂನಂತೆ ಫೇಲ್ ಆಗುತ್ತಲೇ ಹೋದಾಗ ಗಿನ ತೋಂಟದಾರ್ಯ ಸ್ವಾಮಿಗಳು ಎಲ್ಲರಿಗೂ ರ್ಶನ' ಮಾಡಿಸಿಕೊಟ್ಟರು. ಅವರ ಮಾತುಗಳು ಕೆಲವು ಕಿಗಳಿಗೆ ರುಚಿಸಲಿಲ್ಲ ಅಥವಾ ಅಂತವರ ಮುಖವಾಡ ಬಿತ್ತಲ್ಲ ಎಂಬ ಸಿಟ್ಟು ಬಂತೇನೋ. ಬೇಡದಿದ್ದ ಟೆಯೊಂದು ನಡೆದೇಹೋಯಿತು.

ತೋಂಟದಾರ್ಯರು ಹೇಳಿದ್ದರಲ್ಲಿ ಬಸವತತ್ವ ಧಿಯಾದದ್ದೇನೂ ಇರಲಿಲ್ಲ. 'ಭೀಮಣ್ಣ ಖಂಡ್ರೆ ತಮ್ಮ ತ್ಯಜಿಸಿ ಯುವಕರಿಗೆ ಅವಕಾಶ ನೀಡಬೇಕು' ಎಂಬುದು ವ ಮಾತಾಗಿತ್ತು. ಉಳಿದಂತೆ ಈ ಯಾವ ಕ್ರಮಗಳಿಗೂ ಲಿಂಗಾಯತ ಜನರೇ ಬರಲಿಲ್ಲವಾದ್ದರಿಂದ ಧೀಶರು ಜನರಿಂದ ದೂರವಾಗಿದ್ದಾರೆ. ಅದನ್ನು ಡಿಸಿಕೊಳ್ಳಬೇಕು' ಎಂಬ ಅನಿಸಿಕೆ ಹೇಳಿದರು. ದಾಗಿ ಶಿವಯೋಗ ಮಂದಿರದಲ್ಲಿ ಕೇವಲ ಜಂಗಮರಿಗೆ ದೀಕ್ಷೆ ನೀಡುತ್ತಿರುವುದು ಸರಿಯಲ್ಲ ಹಾಗೂ ವೇದ ಗಳ, ಸಂಸ್ಕೃತ ಕಲಿಕೆ ಅಗತ್ಯವಿಲ್ಲ. ಅವುಗಳ ಬದಲು ತತ್ವ ಕಲಿಸಬೇಕೆಂಬುದು ತೋಂಟದಾರ್ಯರ ನಿಲುವಾಗಿತ್ತು. ಬ್ರಾಹ್ಮಣವಾದಿ ಸಂಗನ ಬಸವ ಸ್ವಾಮಿಗಳಿಗೆ ಇದರಿಂದ ಉಕ್ಕೇರಿ ಬಂತು. ಅವರು ಅದೇ ವೇದಿಕೆಯಲ್ಲಿ ಟದಾರ್ಯರ ವಿರುದ್ಧ ಜಗಳ ಉದ್ಘಾಟಿಸಿಬಿಟ್ಟರು. ಇದಕ್ಕೆ ಯ ಪುಂಡರು ಜೊತೆಯಾಗಿ ತೋಂಟದಾರ್ಯರ ಕಲ್ಲು ಹೊಡೆಯುವ ಮಟ್ಟಕ್ಕೂ ಹೋಯಿತು.

ಂಥ ಅಧ್ವಾನಗಳು ಅಸಂಬದ್ಧ ಶತಮಾನೋತ್ಸವ ನಡೆಸಿರುವ ಯುಂತಹ ರಾಜಕಾರಣಿಗಳು ಹಾಗೂ ಸಂಗನಬಸವ ಗಳು ಲಿಂಗಾಯತರ ಹೊಸ ಬೀದಿಜಗಳ ಉದ್ಘಾಟಿಸಿದ್ದಾರೆ. ಇವರೆಂತಹ ಪಿಷ್ಪುಣಿಗಳೆಂದರೆ ಇಡೀ ಸಮಾರಂಭದಲ್ಲಿ ಬಾರಿಯೂ ಉತ್ತರ ಕರ್ನಾಟಕ ಪ್ರವಾಹ ಸಂತ್ರಸ್ತರ ಮಾತನಾಡಲಿಲ್ಲ, ಗೋಹತ್ಯೆ ನಿಷೇಧ, ಬ್ರಾಹ್ಮಣಶಾಹಿ ಕೆಯನ್ನು ಖಂಡಿಸಲಿಲ್ಲ. ಇದೆಲ್ಲಾ ಬಿಟ್ಟು ಕೇವಲ ತಮ್ಮ ಪ್ರಚಾರದ ತೆವಲು ಮೇಲು ಜಾತಿ ದುರಹಂಕಾರ ದುಡ್ಡು ದೋಚುವ ಕೆಲಸ ಮುಗಿಸಿ ಮಠ ಂಡಿದ್ದಾರೆ. ●

ಶಿವಯೋಗ ಮಂದಿರ ಲಿಂಗಾಯತ ಸಮುದಾಯಕ್ಕೊಂದು ಕಳಂಕವೇ ಹೊರತು ಭೂಷಣವಲ್ಲ

ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾದ ಕೋ.ಚೆನ್ನಬಸವಪ್ಪನವರು ನಿಷ್ಠುರವಾದಿಗಳು. ಇದ್ದದ್ದನ್ನು ಇದ್ದಂತೆ ಹೇಳುವುದಕ್ಕೆ ಅವರು ಹಿಂದೆಮುಂದೆ ನೋಡುವವರಲ್ಲ. ಸತ್ಯದ ಪರವಾಗಿ ಯಾವತ್ತೂ ಅವರ ವಕಾಲತ್ತು ಇದ್ದೇ ಇರುತ್ತದೆ. ವಚನ ಸಾಹಿತ್ಯವನ್ನು ಸರಿಯಾಗಿ ಓದಿಕೊಂಡು ಶರಣರ ನಿಜವಾದ ವ್ಯಕ್ತಿತ್ವಗಳನ್ನು ಅರ್ಥಮಾಡಿಕೊಂಡವರು. ಈ ಹಿನ್ನೆಲೆಯಲ್ಲಿ ಪತ್ರಿಕೆ ಅವರನ್ನು ಸಂದರ್ಶಿಸಿತು.



ಕೋ.ಚೆನ್ನಬಸವಪ್ಪನವರು

ಪ್ರಶ್ನೆ: ಬಾದಾಮಿ ತಾಲ್ಲೂಕಿನಲ್ಲಿರುವ ಶಿವಯೋಗ ಮಂದಿರದ ಕುರಿತು ತಮ್ಮ ಅಭಿಪ್ರಾಯ ವೇನು?

ಕೋ.ಚೆ: ಮೂಲತಃ ಶಿವಯೋಗ ಮಂದಿರದ ಕಲ್ಪನೆಯೆ ಸರಿಯಲ್ಲ. ಏಕೆಂದರೆ ಗುರುವನ್ನು ಯಾವುದೋ ಮಠದಲ್ಲಿ ತಯಾರು ಮಾಡಲು ಸಾಧ್ಯವಿಲ್ಲ. ವಟುಗಳನ್ನು ಸಿದ್ಧ ಮಾಡುವುದೆಂದರೇನು? ಅದೇನು ಕಲ್ಲೆ? ಮಣ್ಣೆ? ಅದನ್ನು ತಯಾರಿಸಲು ಹೇಗೆ ಬರುತ್ತದೆ? ಸ್ವಾಮಿಯನ್ನು ಮಾಡುವುದಲ್ಲ, ಸ್ವಾಮಿ ತಾನೆ ಆಗಬೇಕು. ಇದು ಲಿಂಗಾಯತ ಧರ್ಮಕ್ಕೆ ತದ್ವಿರುದ್ಧವಾದ ಕ್ರಿಯೆ.

ಪ್ರಶ್ನೆ: ಹಾಗಾದರೆ ಶಿವಯೋಗ ಮಂದಿರದ ಅವಶ್ಯಕತೆ......?

ಕೋ.ಚೆ: ಇದರ ಅವಶ್ಯಕತೆ ಅಥವಾ ಅನಿವಾರ್ಯತೆಯೆ ಸಮಾಜಕ್ಕೆ ಇಲ್ಲ. ಇಲ್ಲಿ ವೇದ-ಆಗಮಗಳನ್ನು ಕಲಿಸುತ್ತಾರೆ. ಸಂಸ್ಕೃತ ಭಾಷೆಗೆ ಬಹು ಪ್ರಾಮುಖ್ಯತೆ ಕೊಡುತ್ತಾರೆ. ಜಂಗಮನಾಗುವುದಕ್ಕೆ ಸಂಸ್ಕೃತ ಭಾಷೆ ಅನಿವಾರ್ಯ ಎಂಬಂತೆ ಮಾಡಿದ್ದಾರೆ. ಸಂಸ್ಕೃತ ಭಾಷೆಯನ್ನು ಪಾಂಡಿತ್ಯಕ್ಕಾಗಿ ಕಲಿಯಬೇಕೆ ಹೊರತು. ಅದು ಅನಿವಾರ್ಯ ಭಾಷೆಯಲ್ಲ.

ಪ್ರಶ್ನೆ: ಮಠಾಧಿಪತಿಯಾಗಿರುವವರು ಬ್ರಹ್ಮಚರ್ಯ ಪಾಲನೆ ಮಾಡಲೇಬೇಕಲ್ಲವೆ?

ಕೋ.ಚೆ: ಇಲ್ಲ, ಬಸವಾದಿ ಶರಣರು ಎಂದಿಗೂ ವಾಸ್ತವವಾದಿಗಳು. ಅವರು ಆಲೋಚಿಸಿದ ಎಲ್ಲವೂ ವೈಜ್ಞಾನಿಕ ಹಿನ್ನೆಲೆಯಿಂದ ಕೂಡಿದ್ದಾಗಿದೆ. ಇಂದ್ರಿಯ ನಿಗ್ರಹವ ಮಾಡಿದರೆ ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು ಎಂದು ಹೇಳಿದ್ದು ಇದೇ ಅರ್ಥದಲ್ಲಿ. ಅಂದಿನ ಶರಣರ್‍ಯಾರು ಬ್ರಹ್ಮಚರ್ಯ ಜೀವನ ಶ್ರೇಷ್ಠ ಎಂದು ಹೇಳಲಿಲ್ಲ. ಹನ್ನೆರಡನೆಯ ಶತಮಾನದ ಬಹುತೇಕ ಶರಣರು ಮದುವೆಯಾಗಿ ಸಂಸಾರವನ್ನು ನಡೆಸಿದವರೆ ಆಗಿದ್ದಾರೆ. ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ.... ಎಂದೆ ಹೇಳಿದ್ದಾರೆ.

ಪ್ರಶ್ನೆ: ಹಾಗಾದರೆ ಜಂಗಮ ಅಂದರೆ.... !?

ಕೋ.ಚೆ: ಜಂಗಮ ಅಂದರೆ ಚಲಿಸುವುದು. ಚಲಿಸುವುದು ಅಂದರೆ ನಡೆದಾಡುವ ವ್ಯಕ್ತಿಯೂ ಅಲ್ಲ. ಶರಣರ ಹಲವಾರು ವಚನಗಳಲ್ಲಿ ಬಳಕೆಯಾಗಿರುವ ಜಂಗಮ ನಪುಂಸಕಾರ್ಥದಲ್ಲಿ ಪ್ರಯೋಗವಾಗಿರುವುದೆ ಈ ಮಾತಿಗೆ ಸಾಕ್ಷಿ. ಸಮಾಜವನ್ನು ಅವರು ಜಂಗಮವೆಂದು ಕರೆದಿರುವರೆ ಹೊರತು, ಒಂದು ಜಾತಿಯನ್ನು ಜಂಗಮವೆಂದು ಕರೆದಿಲ್ಲ. ಯಾವ ಆದರ್ಶಗಳನ್ನು ಹೇಳುತ್ತಾನೋ ಅದರಂತೆ ನಡೆಯುವವನೆ ಜಂಗಮ.

ಬಸವಾದಿ ಶರಣರ ಕಲ್ಪನೆಯ ಜಂಗಮವನ್ನು ಯಾವುದೋ ಕಟ್ಟಡದಲ್ಲಿ ತಯಾರು ಮಾಡುವುದಲ್ಲ, ನಿತ್ಯ ಜೀವನದ ಅನುಭವ ಪಡೆದು ಅನುಭಾವಿಯಾಗಿ ಆರೋಗ್ಯಕರ ಜೀವನ ನಡೆಸುವುದೇ ಆಗಿದೆ. ಬೀದರ ಜಿಲ್ಲೆಯ ಕೌಂಠಾ(ಬಿ) ಎಂಬಲ್ಲಿ ಈಗ ಶ್ರೀ ಸಿದ್ಧರಾಮ ಶರಣರು ಇದ್ದಾರೆ. ಅವರು ನಿಜವಾದ ಜಂಗಮರು. ಇವರನ್ನು ಯಾವುದೆ ಶಿವಯೋಗ ಮಂದಿರದಲ್ಲಿ ತಯಾರಿಸಲ್ಪಟ್ಟಿಲ್ಲ.

ಕರ್ನಾಟಕದ ಬಹುತೇಕ ಮಠಗಳಲ್ಲಿ ತುಂಬಿಕೊಂಡಿರುವ ಕಾವಿಧಾರಿ ಜಂಗಮರೆಲ್ಲ ನಿತ್ಯಾನಂದ ಸ್ವಾಮಿಯ ಪಳಿಯುಳಿಕೆಗಳು ಮಾತ್ರ.

ಪ್ರಶ್ನೆ: ಶಿವಯೋಗ ಮಂದಿರಕ್ಕೆ ನೂರು ವರ್ಷ ತುಂಬಿರುವ ದಿನಗಳಲ್ಲಿ ನಡೆಸಿರುವ ಸಮಾವೇಶ.....?!

ಕೋ.ಚೆ: ಸಮಾಜದ ಜನಗಳಿಂದ ಎಪ್ಪತ್ತೈದು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ, ಎಪ್ಪತ್ತೈದು ಜನರನ್ನೂ ಆಕರ್ಷಿಸಲಾಗದ ಸಮಾರಂಭವೆ ಜನರಿಂದ ತಿರಸ್ಕರಿಸಲ್ಪಟ್ಟ ಸಮಾವೇಶ ಎಂದು ಹೇಳುತ್ತದೆ. ಇದು ಬರೀ ಓಟ ಪಾಲಿಟಿಕ್ಸ್‌ಗಾಗಿ ಮಾಡಿದ ಚುನಾವಣೆ ಸಮಾವೇಶವೆ ಹೊರತು ಮತ್ತೇನು ಅಲ್ಲ. ಶಿವಯೋಗ ಮಂದಿರ ಲಿಂಗಾಯತ ಸಮುದಾಯಕ್ಕೊಂದು ಕಳಂಕವೇ ಹೊರತು ಭೂಷಣವಲ್ಲ. ●


ಶಿವಯೋಗಮಂದಿರದ ಕುಮಾರಸ್ವಾಮಿಗಳಿಗೂ ಜಾತಿಜಂಗಮದ ವಾಸನೆ?

ನೂರು ವರ್ಷಗಳ ಹಿಂದೆ ಶಿವಯೋಗ ಮಂದಿರವನ್ನು ಸಂಸ್ಥಾಪಿಸಿದ ಹಾನಗಲ್ಲಿನ ಶ್ರೀ ಕುಮಾರಸ್ವಾಮಿಗಳ ಆಲೋಚನೆ ಏನಿತ್ತೋ ಏನೋ? ಆದರೆ ಆ ಸಂಸ್ಥೆಯ ಬೈಲಾದಲ್ಲಿ ಜಾತಿ ಜಂಗಮ ವಟುಗಳಿಗೆ ಮಾತ್ರ ದೀಕ್ಷೆ ಕೊಡಬೇಕು ಎಂದು ಇದ್ದದ್ದು ಸುಳ್ಳಲ್ಲ. ಆದ್ದರಿಂದಲೆ ಇವತ್ತು ಕರ್ನಾಟಕದಾದ್ಯಂತ ಇರುವ ಗುರು ಜಗದ್ಗುರಗಳೆಲ್ಲ ಜಾತಿಜಂಗಮರೆ ಆಗಿದ್ದಾರೆ.

ಆದರೆ ಈ ಮಾತಿಗೆ ಅಪವಾದವೆನ್ನುವಂತೆ ಸಂಸ್ಥೆ ಆರಂಭಿಸಿದ ಎರಡು ವರ್ಷಗಳಲ್ಲಿ ಕುಮಾರ ಸ್ವಾಮಿಗಳು ಜಂಗಮ ಜಾತಿಯವರಲ್ಲದ ಭಾಲ್ಕಿಯ ಡಾ.ಚೆನ್ನಬಸವಪ್ಪ ಪಟ್ಟದ್ದೇವರು, ಹಾಗೂ ನವಲಗುಂದದ ಬಸವಲಿಂಗ ಶರಣರಿಗೆ ತಮ್ಮಲ್ಲಿ ಆಶ್ರಯ ನೀಡಿ ಧಾರ್ಮಿಕ ವಿಧಿ ವಿಧಾನಗಳನ್ನು ಕಲಿಸಿದ್ದರು. ಇವರೆಲ್ಲರೂ ಸಮಾಜಕ್ಕೆ ತಮ್ಮ ಜೀವನವನ್ನು ಸಮರ್ಪಿಸಿಕೊಂಡು ಬದುಕಿ ಬಾಳಿಹೋದವರು. ಹಲವರ ಬದುಕಿಗೆ ಬೆಳಕಾದವರು.

ಈ ಘನ ವ್ಯಕ್ತಿತ್ವದ ಅಡಿಯಲ್ಲಿಯೆ ನಿರ್ಮಿತವಾಗಿರುವ ಸದ್ಯ ಭಾಲ್ಕಿಯ ಹಿರೇಮಠ ಸಂಸ್ಥಾನದ ಪೀಠಾಧಿಪತಿಗಳಾದ ಡಾ. ಬಸವಲಿಂಗಪಟ್ಟದ್ದೇವರು ಎಲ್ಲರೂ ಹೆಮ್ಮೆ ಪಡುವ ವ್ಯಕ್ತಿತ್ವವನ್ನು ರೂಢಿಸಿಕೊಂಡವರು. ಶರಣರ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿ ಸರಳವಾದ, ಸಹಜವಾದ ಆದರೆ ನೇರವಾದ ಬದುಕನ್ನು ತಮ್ಮದಾಗಿಸಿಕೊಂಡಿರುವವರು.

ಡಾ.ಬಸವಲಿಂಗಪಟ್ಟದ್ದೇವರನ್ನು ಪತ್ರಿಕೆ ಮಾತಾಡಿಸಿತು:



ಭಾಲ್ಕಿ ಹಿರೇಮಠದ
ಡಾ. ಬಸವಲಿಂಗಪಟ್ಟದ್ದೇವರು

ಪ್ರಶ್ನೆ: ಜಂಗಮ ಜಾತಿಯವರು ಮಾತ್ರ ಮಠಗಳಿಗೆ ಪೀಠಾಧಿಪತಿಗಳಾಗಿರಬೇಕೆ?

ಡಾ.ಪಟ್ಟದ್ದೇವರು: ನಿಜವಾದ ಲಿಂಗಾಯತ ಧರ್ಮದಲ್ಲಿ ಇದೆಲ್ಲ ಇಲ್ಲವೆ ಇಲ್ಲ. ಇದೆಲ್ಲ ಜಾತಿಜಂಗಮರು ತಮ್ಮಷ್ಟಕ್ಕೆ ತಾವೆ ಮಾಡಿಕೊಂಡಿರುವ ನಿರ್ಣಯ. ಈ ಹಿಂದೆ ಬಹುತೇಕ ಮಠಗಳಿಗೆ ನಿಯುಕ್ತರಾದವರೆಲ್ಲ ಜಂಗಮ ಜಾತಿಯ ಮೂಲದವರೆ ಇರಲಿಲ್ಲ, ಲಿಂಗಾನಂದ ಸ್ವಾಮಿಗಳು ಬರೆದಿರುವ 'ಧಾರ್ಮಿಕ ದೀಕ್ಷೆ' ಎಂಬ ಪುಸ್ತಕದಲ್ಲಿ ಈ ಬಗ್ಗೆ ಸ್ಪಷ್ಟವಾದ ಚಿತ್ರವಿದೆ.

ಯಾವಾಗ ಶಿವಯೋಗ ಮಂದಿರ ಸಂಸ್ಥಾಪನೆ ಆಯಿತೊ ಅಂದಿನಿಂದ ಜಾತಿ ಜಂಗಮರೆ ಮಠ-ಪೀಠಗಳಿಗೆ ಗುರುಗಳಾಗಿ ಬರಬೇಕು ಎಂಬ ಅಲಿಖಿತ ನಿಯಮವೆ ಜಾರಿಗೆ ಬಂದು ಬಿಟ್ಟಿತು.

ಪ್ರಶ್ನೆ: ಶಿವಯೋಗ ಮಂದಿರದ ಆಚರಣೆಗಳಿಂದ ಲಿಂಗಾಯತ ಧರ್ಮಕ್ಕೆ ಸಹಾಯವಾಗಿದೆಯೆ?

ಡಾ.ಪಟ್ಟದ್ದೇವರು: ಸ್ಪಷ್ಟವಾಗಿ ಹೇಳಬೇಕೆಂದರೆ ಶಿವಯೋಗ ಮಂದಿರದ ಹಲವಾರು ಆಚರಣೆಗಳು ಬಸವತತ್ವಕ್ಕೆ ಅನುಗುಣವಾಗಿಲ್ಲ, ಬಸವತತ್ವಕ್ಕೆ ಇದರಿಂದ ಹೆಚ್ಚು ಧಕ್ಕೆಯಾಗಿದೆ. ಶಿವಯೋಗ ಮಂದಿರ ಸ್ಥಾಪನೆಯ ಮೂಲ ಉದ್ದೇಶ ಹಲವಾರು ಸಂಶಯಗಳಿಗೆ ಎಡೆ ಮಾಡಿಕೊಡುತ್ತದೆ.

ಪ್ರಶ್ನೆ: ಶಿವಯೋಗ ಮಂದಿರವನ್ನು ಸಂಸ್ಥಾಪಿಸಿದ ಹಾನಗಲ್ಲಿನ ಶ್ರೀ ಕುಮಾರ ಸ್ವಾಮಿಗಳ ಉದ್ದೇಶ......

ಡಾ.ಪಟ್ಟದ್ದೇವರು: ಅವರಲ್ಲಿಯೂ ಜಾತಿ ಜಂಗಮ ವಾಸನೆ ಇದ್ದಿರಬಹುದು. ಇಲ್ಲದೆಹೋದರೆ ಅವರು ಎಲ್ಲಾ ಜಾತಿ ಜನಾಂಗದವರಿಗೂ ಜಂಗಮ ದೀಕ್ಷೆ ನೀಡಿ ತಮ್ಮ ಔದಾರ್ಯ ಮೆರೆಯುತ್ತಿದ್ದರು.

ಪ್ರಶ್ನೆ: ತಮ್ಮ ಗುರುಗಳಾದ ಪೂಜ್ಯ ಶ್ರೀ ಚೆನ್ನಬಸವಪಟ್ಟದ್ದೇವರಿಗೆ ಜಂಗಮ ದೀಕ್ಷೆಯನ್ನು ನೀಡಿದ ಗುರುಗಳು ಶ್ರೀ ಕುಮಾರಸ್ವಾಮಿಗಳು ಎಂದು ಹೇಳುತ್ತಾರಲ್ಲ?

ಡಾ.ಪಟ್ಟದ್ದೇವರು: ಇಲ್ಲ, ಇದೆಲ್ಲ ಸುಳ್ಳು. ನಮ್ಮ ಗುರುಗಳಿಗೆ ಅಯ್ಯಾಚಾರ ದೀಕ್ಷೆ ನೀಡಿದವರು ಔರಾದ ತಾಲೂಕಿನ ಮುಧೋಳ ಗ್ರಾಮದ ಸ್ವಾಮಿಗಳು. ಅಲ್ಲದೆ ನಮ್ಮ ಮಠದಲ್ಲಿ ಈ ಹಿಂದೆ ಇದ್ದ ಸಿದ್ಧಬಸವಸ್ವಾಮಿಗಳ ಆರೈಕೆಯಲ್ಲಿ ಚೆನ್ನಬಸವಪಟ್ಟದ್ದೇವರು ಬೆಳೆದದ್ದು. ಆದರೆ ಹಾನಗಲ್ಲಿನ ಕುಮಾರಸ್ವಾಮಿಗಳು ಡಾ.ಚೆನ್ನಬಸವಪಟ್ಟದ್ದೇವರಿಗೆ ಧಾರ್ಮಿಕ ದೀಕ್ಷೆಯನ್ನು ನೀಡಿದ್ದಾರೆ, ಅಷ್ಟೆ.

ಪ್ರಶ್ನೆ: ಶಿವಯೋಗ ಮಂದಿರದಲ್ಲಿ ಜಂಗಮ ಜಾತಿ ಮೂಲದವರಿಗೆ ದೀಕ್ಷೆ ಕೊಡಬೇಕೆಂದಿರುವ ಉದ್ದೇಶದಿಂದ ಲಿಂಗಾಯತ ಸಮಾಜಕ್ಕೆ ಎಷ್ಟು ಅನುಕೂಲವಾಗಿದೆ?

ಡಾ.ಪಟ್ಟದ್ದೇವರು: ಶಿವಯೋಗ ಮಂದಿರದ ಮೂಲ ಉದ್ದೇಶಗಳಿಂದ ಲಿಂಗಾಯತ ಸಮಾಜ ಅವಹೇಳನಕ್ಕೆ ಗುರಿಯಾಗಿದೆ. ಬೇರೆ ಜಾತಿ ಮೂಲದ ವ್ಯಕ್ತಿಗಳಿಗೆ ಜಂಗಮ ದೀಕ್ಷೆ ಕೊಡದೆ ಇರುವುದರಿಂದಲೆ ಇಂದು ಕರ್ನಾಟಕದ ತುಂಬೆಲ್ಲ ಅನ್ಯ ಧರ್ಮದ ಪೀಠಗಳು ಹುಟ್ಟಿಕೊಂಡಿವೆ.

ತೀರಾ ಇತ್ತೀಚಿಗೆ ಮಾತ್ರ ಶಿವಯೋಗ ಮಂದಿರದ ಬೈಲಾದಲ್ಲಿ ತಿದ್ದುಪಡಿ ತಂದು ಜಂಗಮ ಜಾತಿಯಲ್ಲದ ಅನ್ಯರಿಗೂ ದೀಕ್ಷೆ ಕೊಡಬೇಕು ಎಂದು ನಿರ್ಣಯಿಸಿದ್ದಾರಂತೆ! ಆದರೆ ಇದು ನಿರ್ಣಯವಾದರೆ ಸಾಲದು. ಅದು ಜಾರಿಗೆ ಬರಬೇಕು. ಅಂದಾಗಲೆ ಈ ಅಮ್ಯಾಂಡಮೆಂಟಿಗೆ ಒಂದು ಬೆಲೆ ಬರುತ್ತದೆ. ಕಾಲಕ್ಕೆ ತಕ್ಕ ರೀತಿಯಲ್ಲಿ ಬದಲಾವಣೆಗೊಳ್ಳದೆ ಹೋದರೆ ಅದು ಔಟ್ ಡೇಟೆಡ್ ಆಗಿ ಕಾಲನ ತೆಕ್ಕೆಯಲ್ಲಿ ಕಣ್ಮರೆಯಾಗುತ್ತದೆ.

● ವಿಶ್ವಾರಾಧ್ಯ ಸತ್ಯಂಪೇಟೆ

ಗಂಜಿನಿ | ಬೋಧನೆ | ಪ್ರಚೋದನೆ ಲಂಕೇಶ್

9 ಹಣ... ಹೆಣ್ಣು...

ಭಾಗವಾಗಿ 'ಮಿಸ್ ಐಪಿಎಲ್ ಬಾಲಿವುಡ್' ಎಂಬ ಸೌಂದರ್ಯ ಸ್ಪರ್ಧೆ ಏರ್ಪಡಿಸಿದ್ದ. ಈ ಸ್ಪರ್ಧೆ ಸೌಂದರ್ಯ ಪ್ರದರ್ಶನದ ಬದಲು ಮಾಡೆಲ್‌ಗಳ ಅಂಗಸೌಷ್ಠವದ ಹಾಟ್ ಪ್ರದರ್ಶನವಾಗಿತ್ತು. ಅದರಲ್ಲಿ ಭಾಗವಹಿಸಿದ್ದ ಹಾಟ್, ಸೆಕ್ಸಿ ಮಾಡೆಲ್‌ಗಳಲ್ಲಿ ದಕ್ಷಿಣ ಆಫ್ರಿಕಾದ ಈ ಗೇಬ್ರಿಯೇಲಾ ಕೂಡಾ ಒಬ್ಬಳು. ಫೈನಲ್‌ವರೆಗೆ ಬಂದ ಈ ಸೆಕ್ಸ್‌ಬಾಂಬ್‌ಳ ಸ್ನೇಹ ಸಂಪಾದಿಸಿದ ಲಲಿತ್ ಮೋದಿ ತನ್ನ ಸಂಪತ್ತಿನ ಮೂಲಕ ಆಕೆಯನ್ನು ವಶೀಕರಣ ಮಾಡಿಕೊಂಡ.


ಅದರ ಪರಿಣಾಮವಾಗಿ ಆಕೆ ಕಳೆದ ಅಕ್ಟೋಬರ್‌ನಲ್ಲಿ ತಾತ್ಕಾಲಿಕ ವೀಸಾ ಪಡೆದು ಭಾರತಕ್ಕೆ ಬಂದಿದ್ದಳು. ಭಾರತದಲ್ಲಾಕೆ ಲಲಿತ್ ಮೋದಿಯೊಂದಿಗೇ ಕಳೆದಳು, ಮೋದಿಯೂ ಮಜಾ ಅನುಭವಿಸಿದ. ಆದರೆ 2010 ರ ಜನವರಿ ಹೊತ್ತಿಗೆ ಆಕೆ ಮರಳಿ ದಕ್ಷಿಣ ಆಫ್ರಿಕಾಕ್ಕೆ ಹೋದಳು. ಆಕೆ ಮತ್ತೆ ಭಾರತಕ್ಕೆ ಬರಲು ವೀಸಾ ನವೀಕರಣಕ್ಕೆ ಅರ್ಜಿ ಹಾಕಿದಳು. ಅಷ್ಟೊತ್ತಿಗಾಗಲೇ ಆಕೆಯ ಬಗ್ಗೆ ಮೋದಿಗೆ ಬೇಸರವಾಗಿತ್ತೊ, ಅಥವಾ ಮತ್ತಿನ್ನೇನು ಗಲಾಟೆ ಸಂಭವಿಸಿತ್ತೋ ಗೊತ್ತಿಲ್ಲ. ಆದರೆ ಒಂದಂತೂ ಸ್ಪಷ್ಟ. ಮೋದಿ ತರೂರ್ ಕಚೇರಿಗೆ ಫೋನ್ ಮಾಡಿ ಆಕೆಯ ವೀಸಾ ನವೀಕರಿಸಬಾರದೆಂದು ಕೇಳಿದ್ದ. ಆದರೆ ತರೂರ್ ಕಚೇರಿ ಇದಕ್ಕೆ ಕೇರ್ ಮಾಡಲಿಲ್ಲ. ಅಂದಿನಿಂದ ಇವರಿಬ್ಬರ ನಡುವೆ ಸಂಬಂಧ ಹದಗೆಟ್ಟಿದ್ದು ಈಗದು ಸುನಂದಾ ಪುಷ್ಕರ್ ಕಾರಣದಿಂದಾಗಿ ಮತ್ತೆ ಭುಗಿಲೆದ್ದಿದೆ.

ದುಬೈ-ದಾವೂದ್ ಲಿಂಕ್?

ಈ ನಡುವೆ ತರೂರ್‌ಗೆ ಬಂದ ಬೆದರಿಕೆಯ ಎಸ್‌ಎಮ್‌ಎಸ್ ದಾವೂದ್ ಇಬ್ರಾಹಿಂ ಹೆಸರಲ್ಲಿ ಪ್ರಾಣ ಬೆದರಿಕೆ ಹಾಕಿದೆ. ಈ ವಿಷಯವನ್ನೂ ಪೊಲೀಸರು ಅಲಕ್ಷಿಸುವಂತಿಲ್ಲ. ಏಕೆಂದರೆ ಐಪಿಎಲ್‌ನ ಜನಪ್ರಿಯತೆ, ವಹಿವಾಟು ಕಂಡು ದಾವೂದ್ ತರಹದ ಜೂಜುಕೋರರು ಇಲ್ಲೂ ಕೈಹಾಕಿರುವ ಸಾಧ್ಯತೆಗಳಿವೆ. ಸದ್ಯ ಏನೇ ಇರಲಿ, ಒಟ್ಟು ಐಪಿಎಲ್ ವ್ಯವಹಾರದ ಕುರಿತು ತನಿಖೆ ಮಾಡುವ ಅಗತ್ಯವಿದೆ. ಕಂಟ್ರೋಲಿಂಗ್ ಬಾಡಿ ಎನಿಸಿರುವ ಭಾರತೀಯ ಕ್ರಿಕೆಟ್ ಮಂಡಳಿ (ಬಿಸಿಸಿಐ) ಕೂಡಾ ಇದರಲ್ಲಿ ಮಿಲಾಖತ್ ಆಗಿದೆ. ಏಕೆಂದರೆ ಬಿಸಿಸಿಐನ ಉಪಾಧ್ಯಕ್ಷನಾಗಿರುವ ಲಲಿತ್ ಮೋದಿಯೇ ಐಪಿಎಲ್‌ನ ಅಧ್ಯಕ್ಷ. ಬಿಸಿಸಿಐನ ಸೆಕ್ರೆಟರಿಯಾಗಿರುವ ಶ್ರೀನಿವಾಸನ್ ಇಂಡಿಯಾ ಸಿಮೆಂಟ್ಸ್ ಕಂಪನಿಯ ಪಾಲುದಾರ. ಇದೇ ಇಂಡಿಯಾ ಸಿಮೆಂಟ್ಸ್ ಕಂಪನಿಯೇ ಚೆನ್ನೈ ಸೂಪರ್‌ಕಿಂಗ್ಸ್‌ನ ಒಡೆಯ! ಹಾಗೆಯೇ ಭಾರತೀಯ ಕ್ರಿಕೆಟ್ ಆಯ್ಕೆ ಮಂಡಳಿಯ ಅಧ್ಯಕ್ಷನಾಗಿರುವ ಕೆ. ಶ್ರೀಕಾಂತ್ ಚೆನ್ನೈ ತಂಡದ ಪ್ರಮುಖ ರಾಯಭಾರಿ. ಹೀಗೆ ನಿಯಂತ್ರಣ ಕೆಲಸ ಮಾಡಬೇಕಿದ್ದ ಬಿಸಿಸಿಐಯೇ ಐಪಿಎಲ್‌ನ ಲಾಭದಲ್ಲಿ ಪಾಲುದಾರನಾಗಿದೆ. ಆದ್ದರಿಂದ ಬಿಸಿಸಿಐ ಮಾಡುವ ತನಿಖೆಯಿಂದ ಏನೂ ಪ್ರಯೋಜನವಿಲ್ಲ.

ಕೇಂದ್ರ ಸರ್ಕಾರ ಕೂಡಲೇ ಈ ಎಲ್ಲ ಐಪಿಎಲ್ ವ್ಯವಹಾರದ ಸಮಗ್ರ ತನಿಖೆ ಮಾಡಬೇಕಿದೆ. ಪ್ರತಿ ಐಪಿಎಲ್ ಟೀಮ್‌ನಲ್ಲಿ ಯಾರು, ಎಷ್ಟು ಒಡೆತನ ಹೊಂದಿದ್ದಾರೆ ಎಂಬುದನ್ನು ಬಹಿರಂಗ ಮಾಡಬೇಕಿದೆ. ಹಾಗೆಯೇ ಕೊಚ್ಚಿ ಟೀಮ್ ಬಿಡ್ಡಿಂಗ್‌ನಲ್ಲಿ ಯಾವುದಾದರೂ ನಿಯಮ ಮುರಿಯಲಾಗಿದೆಯೇ? ಹಾಗಾಗಿದ್ದರೆ ಅದಕ್ಕೆ ಕಾರಣರಾರು? ತನಿಖೆ ಮುಗಿಯುವವರೆಗೆ ತರೂರ್ ಮತ್ತು ಮೋದಿ ತಮ್ಮ ಅಧಿಕಾರ ಸ್ಥಾನದಿಂದ ಹೊರಗುಳಿಯುವಂತೆ ಮಾಡಬೇಕಿದೆ. ಮಾರುಕಟ್ಟೆಯ ಹಿಡಿತಕ್ಕೆ ಆಟವೊಂದು ಸಿಕ್ಕಿದ್ದರ ಪರಿಣಾಮವಿದು. ಹಣ, ಹೆಣ್ಣು, ಹೆಂಡ, ಜೂಜು-ಮೋಜುಗಳ ಒಟ್ಟು ಮೊತ್ತವೇ ಐಪಿಎಲ್ ಎನ್ನುವುದಾದರೆ ಇಲ್ಲಿ 'ಜಂಟಲ್‌ಮೆನ್ಸ್ ಗೇಮ್' ಕ್ರಿಕೆಟ್‌ಗೆ ಮರ್ಯಾದೆಯಾದರೂ ಎಲ್ಲಿದೆ?

ಸುನಂದಾ-ಶಶಿ external affairs



[illegible] ಮೂಲದ ಸೌಂದರ್ಯ ತಜ್ಞೆ ಸುನಂದಾ ಪುಷ್ಕರ್ [illegible] ದುಬೈ [illegible] ಮೊದಲ ಮದುವೆ ಮುರಿದುಬಿದ್ದು, ಎರಡನೇ ಗಂಡ [illegible] ಹದಿಹರೆಯದ ಮಗನೊಂದಿಗೆ [illegible] spa (ಬ್ಯೂಟಿಪಾರ್ಲರ್) ನಡೆಸುತ್ತಿದ್ದು, ಸದ್ಯ ದುಬೈ ಸರ್ಕಾರದ ದುಬೈ ಡೆವಲಪರ್ಸ್‌ನಲ್ಲಿ ಸೇಲ್ಸ್ ಮ್ಯಾನೇಜರ್, ಹಲವಾರು ಕಂಪನಿಗಳಿಗೆ ಮಾರ್ಕೆಟಿಂಗ್ ಅಡ್ವೈಸರ್ ಅಂತೆ. ತರೂರ್ [illegible] ಮೊದಲು ಸೋಷಿಯಲ್ [illegible] ಸುನಂದಾ-ಶಶಿ ಪರಿಚಯವಾಯ್ತು [illegible] ಈ ಜೋಡಿ ಹಲವಾರು ಸಲ ಬಹಿರಂಗವಾಗಿ [illegible]

ಮದುವೆಯ ಮುನ್ನವೇ ತರೂರ್ ಸುನಂದಾಗೆ 75 ಕೋಟಿ ರೂಗಳ ಈಕ್ವಿಟಿ ಕೊಡಿಸಿ ಮುಖಕ್ಕೆ [illegible]

ದಾಂತೇವಾಡ ಪೊಲೀಸ್ ಸಾವು

ಚೇತನನಿಗೊಂದು ಪತ್ರ




ಪ್ರೀತಿಯ ಚೇತನ್,

ಈಗಿನ್ನೂ ಒಂಬತ್ತು ವರ್ಷದವನಾಗಿರಬಹುದಾದ ನಿನಗೆ ತಂದೆ ಇಲ್ಲವಾಗಿದ್ದಾರೆ. ನಿನ್ನ ತಾಯಿ ನೇತ್ರಾವತಿ ದೇವಿಯ ಬದುಕಿನ ಸಂತೋಷ ಪೂರ್ತಿ ಕಮರಿಹೋಗಿದೆ. ನಿನ್ನ ತಂದೆ ಶಿವಪ್ಪನವರು ನೀನು ಕಂಡು ಕೇಳರಿಯದಿದ್ದ ಸಾವಿರಾರು ಕಿಲೋಮೀಟರ್ ದೂರದಲ್ಲಿರುವ ಛತ್ತೀಸ್‌ಗಡ ರಾಜ್ಯದ ದಟ್ಟಕಾಡುಗಳಲ್ಲಿ ಅಲ್ಲಿನ ಆದಿವಾಸಿ ಹೋರಾಟಗಾರರ ಗುಂಡಿಗೆ ಬಲಿಯಾಗಿದ್ದಾರೆ.

ನೀನು ಹುಟ್ಟಿದ ಚಿಕ್ಕಬಸವನಹಳ್ಳಿಯಲ್ಲೇ ಇನ್ನೂ ನಲವತ್ತು ಜನ ಸೈನಿಕರಾಗಿ ಭಾರತದ ಬೇರೆ ಬೇರೆ ಕಡೆ ದೇಶ ರಕ್ಷಣೆಯ ಕಾರ್ಯದಲ್ಲಿ ಸೇವೆ ಮಾಡುತ್ತಿದ್ದಾರೆ. ಬಹುಶಃ ನಿನ್ನ ತಂದೆಯ ಸಾವಿನ ಸುದ್ದಿ ಕೇಳಿ ನಿನ್ನ ಹಳ್ಳಿಯ ಈ ಸೈನಿಕರ ಕುಟುಂಬದವರಿಗೂ ಆತಂಕವಾಗಿರುತ್ತದೆ. ಯಾವ ಮೂಲೆಯಿಂದ ಯಾವ ಕೆಟ್ಟ ಸುದ್ದಿ ಬರುತ್ತದೋ ಎಂಬ ಆತಂಕ ಸೈನಿಕರ, ಪೊಲೀಸರ ಕುಟುಂಬದವರಿಗೆ ಇರುವುದು ಸಹಜ. ನಿನ್ನ ತಂದೆ ಶಿವಪ್ಪನವರು ಭಾರತ ದೇಶದ ಬಗ್ಗೆ ಬಹಳ ಹೆಮ್ಮೆ, ಪ್ರೀತಿ ಇಟ್ಟುಕೊಂಡಿದ್ದರು. ಅದೇರೀತಿ ನಿನ್ನ ಬಗ್ಗೆ ನಿನ್ನ ತಾಯಿ, ರೈತನಾಗಿರುವ ದೊಡ್ಡಪ್ಪ ಟೈಲರ್ ಚಿಕ್ಕಪ್ಪ ಅತ್ತೆಯರ ಬಗ್ಗೆಯೂ ಅಪಾರ ಕಾಳಜಿ ತೋರಿಸುತ್ತಾ ನೆರವಾಗಿದ್ದವರು. ಅವರು ರಜೆಯ ಮೇಲೆ ಊರಿಗೆ ಬಂದಾಗೆಲ್ಲಾ ನಿನ್ನ ಹಳ್ಳಿಯ ಜನರ ಕಷ್ಟಸುಖ ವಿಚಾರಿಸುತ್ತಾ ಎಲ್ಲರ ಪ್ರೀತಿಗಳಿಸಿಕೊಂಡಿದ್ದವರು.

ಚೇತನ್...

ಬಡ ರೈತರ ಮಕ್ಕಳು ನಿನ್ನ ತಂದೆಯ ತರವೇ ಇರುತ್ತಾರೆ. ಕಷ್ಟಪಟ್ಟು ದುಡಿಯುತ್ತಾರೆ. ಕುಟುಂಬ ಸಲಹಲು ಊರಿಂದೂರಿಗೂ ಹೋಗುತ್ತಾರೆ. ನಿನಗೆ ದೊಡ್ಡವರ ಜಗತ್ತು ಇಷ್ಟು ಬೇಗ ಅರ್ಥವಾಗಲಾರದು. ಸಿಆರ್‌ಪಿಎಫ್ ಅಂದರೇನು? ಮಾವೋವಾದಿ ಎಂದರೆ ಯಾರು? ನಿನ್ನ ತಂದೆಯ ಸಾವಿಗೆ ಸಂತಾಪ ಸೂಚಿಸಿರುವ ಪಿ.ಚಿದಂಬರಂ ಯಾರು? ಛತ್ತೀಸ್‌ಗಡ ಎಲ್ಲಿದೆ? ಈ ಆದಿವಾಸಿಗಳೆಂದರೆ ಯಾರು? ಅವರೇಕೆ 5 ವರ್ಷಕ್ಕೊಮ್ಮೆ ಎಲ್ಲರಂತೆ ಓಟು ಹಾಕಿ ಸುಮ್ಮನೆ ಇರದೆ ಬಂಡಾಯ ಎದ್ದಿದ್ದಾರೆ? ನಿನ್ನ ತಂದೆ ಚಿಕ್ಕಬಸವನಹಳ್ಳಿಯಲ್ಲೇ ಇರದೆ ಪೊಲೀಸ್ ಆಗಿ ಕಾಶ್ಮೀರ, ಕಾರ್ಗಿಲ್, ಛತ್ತೀಸ್‌ಗಡಕ್ಕೆ ಏಕೆ ಹೋಗಬೇಕಾಯಿತೆಂಬುದನ್ನೆಲ್ಲಾ ನೀನು ತಿಳಿದುಕೊಳ್ಳಲೇಬೇಕು!



ಹುತಾತ್ಮ ಶಿವಪ್ಪನವರಿಗೆ ಅಂತಿಮ ನಮನ

ನಿನಗೆ ವೇದಾಂತ ಗ್ರೂಪ್ ಅಂದ್ರೆ ಗೊತ್ತಾ ಚೇತನ್?

ಇರಲಿಕ್ಕಿಲ್ಲ. ಈಗಿನ್ನೂ ನಾಲ್ಕನೇ ತರಗತಿಯ ವಿದ್ಯಾರ್ಥಿಯಾಗಿರುವ ನಿನ್ನ ಶಾಲಾ ಪಠ್ಯಪುಸ್ತಕದಲ್ಲಿ ಅದರ ಬಗ್ಗೆ ಯಾವ ವಿವರಗಳೂ ಇರಲಿಕ್ಕಿಲ್ಲ ಬಿಡು. ನಿನಗಷ್ಟೇ ಅಲ್ಲ ಚಿಕ್ಕಬಸವನಹಳ್ಳಿಯ ಬಡರೈತರ್ಯಾರಿಗೂ ವೇದಾಂತ ಮೆಟಲ್ ಕಂಪೆನಿ ಬಗ್ಗೆ ಗೊತ್ತಿರಲಿಕ್ಕಿಲ್ಲ...

ಈ ವಿಚಾರ ಪ್ರಸ್ತಾಪಿಸಿದ್ದು ಏಕೆಂದರೆ ನಿನ್ನ ತಂದೆಯನ್ನು ಬಲಿ ತೆಗೆದುಕೊಂಡಿದ್ದು ಇದೇ ವೇದಾಂತ ಗ್ರೂಪ್‌ನವರು.

ನೀನು ಹೈಸ್ಕೂಲಿಗೆ ಬಂದಾಗ ಸಮಾಜಶಾಸ್ತ್ರ ಪುಸ್ತಕದಲ್ಲಿ ಭಾರತದ ನಿಸರ್ಗ ಸಂಪತ್ತಿನ ಬಗ್ಗೆ ಯಾವ ಯಾವ ರಾಜ್ಯಗಳಲ್ಲಿ ಚಿನ್ನ, ಬಾಕ್ಸೈಟ್, ಕಬ್ಬಿಣ, ಅಲ್ಯೂಮಿನಿಯಂ ಕಾಪರ್ ಅದಿರಿನ ನಿಕ್ಷೇಪಗಳಿವೆ ಎಂಬುದನ್ನು ಖಂಡಿತಾ ಓದುತ್ತೀಯ. ಒರಿಸ್ಸಾ, ಛತ್ತೀಸ್‌ಗಡ ರಾಜ್ಯಗಳಲ್ಲಿ ಇಂತಹ ನಿಕ್ಷೇಪಗಳು ಮಿಲಿಯಾಂತರ ಟನ್‌ಗಳಷ್ಟಿವೆ.

ವೇದಾಂತ ಕಂಪೆನಿಯ ಆಫೀಸ್ ಲಂಡನ್‌ನಲ್ಲಿದೆ. ಅನಿಲ್ ಅಗರ್‌ವಾಲ್, ನವೀನ್ ಅಗರ್‌ವಾಲ್ ಎಂಬ ಅತ್ಯಂತ ಸಾಹುಕಾರ ಬ್ಯುಸಿನೆಸ್‌ಮನ್ ಸೋದರರು ಇದರ ಮಾಲೀಕರಾಗಿದ್ದಾರೆ. ಇವರು ಭಾರತದ ಒಟ್ಟಾರೆ ಅಲ್ಯೂಮಿನಿಯಂ ನಿಕ್ಷೇಪದ ಪೈಕಿ ಅರ್ಧ ಭಾಗದ ಮಾಲೀಕರು. ಲಾಂಜಿಗಡದಲ್ಲಿನ 75 ಮಿಲಿಯನ್ ಟನ್‌ಗಳಷ್ಟು ಬಾಕ್ಸೈಟ್ ಅದಿರಿನ ನಿಕ್ಷೇಪವೂ ಇವರದ್ದೆ. ಒರಿಸ್ಸಾದ ಜರಸೂಗಾಡ್‌ನಲ್ಲಿ 5 ಲಕ್ಷ ಟನ್ ಅದಿರು ಸಂಸ್ಕರಣಾ ಘಟಕವಿದೆ ಇವರಿಗೆ. ಅದೇರೀತಿ ಛತ್ತೀಸ್‌ಗಡದ ದಾಂತೇವಾಡ, ಬಿಜಾಪುರ ಜಿಲ್ಲೆಗಳಲ್ಲೂ ಸಾವಿರಾರು ಕೋಟಿ ರೂಪಾಯಿ ಬೆಲೆಬಾಳುವ ಲಕ್ಷಾಂತರ ಟನ್ ಕಬ್ಬಿಣ, ಬಾಕ್ಸೈಟ್‌ನ ಅದಿರಿನ ನಿಕ್ಷೇಪಗಳಿವೆ.

ಈ ಅಗರ್‌ವಾಲ್ ಸೋದರರು ಇವೆಲ್ಲಾ ಸಂಪತ್ತು ಪೂರ್ತಿಯಾಗಿ ತಮಗೆ ಬೇಕು ಅಂದರು. ನಮ್ಮ ಸರ್ಕಾರ 'ತಗೊಂಡು ಹೋಗಿ' ಅಂದರು. ಆದರೆ ಅಲ್ಲೊಂದು ಸಮಸ್ಯೆ ಬಂತು. ಈ ಅರಣ್ಯ ಪ್ರದೇಶದಲ್ಲಿ ಕೋಲಿ, ಮುಂಡಾ... ಹೀಗೆ ಅನೇಕ ಆದಿವಾಸಿ ಬುಡಕಟ್ಟುಗಳ ಜನ ವಾಸವಿದ್ದಾರೆ. ಇವರ ಸಂಖ್ಯೆ ಲಕ್ಷಾಂತರ ಇದೆ. ಸ್ವಾತಂತ್ರ ಬಂದು 63 ವರ್ಷಗಳಾದರೂ ಯಾವ ಸರ್ಕಾರಗಳೂ ಇವರಿಗೆ ಶಿಕ್ಷಣ, ನೀರು, ಆಸ್ಪತ್ರೆ, ರಸ್ತೆ ರೇಷನ್ ಕಾರ್ಡ್ ಏನನ್ನೂ ಕೊಟ್ಟಿಲ್ಲ. ಇಲ್ಲಿ ನಲವತ್ತು ವರ್ಷದ ನಂತರ ಯಾರ ಆಯಸ್ಸೂ ಖಾತ್ರಿಯಿಲ್ಲ. ಬದುಕುವುದೂ ಇಲ್ಲ. ಕಾಡಿನಲ್ಲಿ ಏನೇನು ಸಿಗುತ್ತದೊ ಅದನ್ನೇ ತಿಂದು ಬದುಕುವ ಜನ ಇವರು.



ಶಿವಪ್ಪ

ಹೀಗೆ ಅಸಹಾಯಕರಾಗಿ ಅತಂತ್ರದಲ್ಲಿ ಬದುಕುತ್ತಿರುವ ಆದಿವಾಸಿಗಳನ್ನು ಅಲ್ಲಿಂದ ಆಚೆಗೆ ಓಡಿಸದೆ ವೇದಾಂತ ಕಂಪೆನಿಗೆ. ಅಲ್ಲಿ ಗಣಿಗಾರಿಕೆ ನಡೆಸಲು ಆಗುತ್ತಿಲ್ಲ. ಹಾಗಾಗಿ ಸರ್ಕಾರ ಈ ಆದಿವಾಸಿಗಳನ್ನು ಕಾಡಿನಿಂದ ಹೊರಗೆ ತಳ್ಳಲು ತಯಾರಾಯಿತು. ಆದಿವಾಸಿಗಳು ಒಪ್ಪದೇ ಹೋದಾಗ ಪೊಲೀಸರನ್ನು ಛೂ ಬಿಡಲಾಯಿತು. ಗಲಾಟೆ, ಪ್ರತಿಭಟನೆಯೂ ಶುರುವಾಗಿ ಕೊನೆಗೆ ಅದೀಗ ನಕ್ಸಲೀಯರ ನಾಯಕತ್ವದ ಬಂದೂಕಿನ ಹೋರಾಟವಾಗಿ ಭುಗಿಲೆದ್ದಿದೆ. ಇವರನ್ನು ಮುಗಿಸಿಬಿಡಲು ನಿನ್ನ ತಂದೆಯವರಂತೆಯೇ ಸಿಆರ್‌ಪಿಎಫ್‌ನಲ್ಲಿರುವ ಸಾವಿರಾರು ಯೋಧರನ್ನು ಬಡಭಾರತೀಯರೇ ಆಗಿರುವ ಆದಿವಾಸಿಗಳ ಮೇಲೆ ಯುದ್ಧಕ್ಕೆ ಕಳಿಸಲಾಗುತ್ತಿದೆ.

ಇನ್ನು ಈ ಯುದ್ಧದ ನಾಯಕ ಪಿ.ಚಿದಂಬರಂ ಬಗ್ಗೆ ನಿನಗೆ ಕೆಲವು ವಿಚಾರಗಳನ್ನು ಹೇಳಬೇಕು ಚೇತನ್.

ಇವರು ನಮ್ಮ ಪ್ರೀತಿಯ ಭಾರತ ದೇಶದ ಗೃಹಮಂತ್ರಿಗಳು. ದೇಶದೊಳಗೆ ಕಾನೂನು-ಸುವ್ಯವಸ್ಥೆ ಕಾಪಾಡುವ ಕೆಲಸ ಇವರದ್ದು. ಇವರ ಕೈಕೆಳಗೆ ಶಿವಪ್ಪನವರಂತಹ ಐದಾರು ಲಕ್ಷ ಪೊಲೀಸರಿದ್ದಾರೆ. ಯಾವಾಗಲೂ ಬಿಳಿ ಶರ್ಟು, ಬಿಳಿ ಪಂಚೆ ಧರಿಸುವ ಚಿದಂಬರಂ ಕೆಲಕಾಲ ಲಾಯರ್ ಆಗಿದ್ದರು. 2003ರಲ್ಲಿ ಒಮ್ಮೆ ಸ್ಟೆಟಲೈಟ್ ಇಂಡಿಯಾ ಎಂಬ ಕಂಪೆನಿಯವರು, ಸರ್ಕಾರಕ್ಕೆ ತೆರಿಗೆ ವಂಚಿಸಿ, ಮೋಸ ಮಾಡಿ ಸಿಕ್ಕಿಹಾಕಿಕೊಂಡಾಗ ಆ ಕಂಪೆನಿಯ ಪರವಾಗಿ ವಾದ ಮಂಡಿಸಿದ್ದ ವ್ಯಕ್ತಿ ಈತ. ಅಂದಹಾಗೆ ಈ ಸ್ಟೆಟಲೈಟ್ ಕಂಪೆನಿ ವೇದಾಂತ ಗ್ರೂಪ್‌ನವರಿಗೆ ಸೇರಿದ್ದು. ಆಮೇಲೆ ಚಿದಂಬರಂ ಸಾಹೇಬರು ವೇದಾಂತ ಕಂಪೆನಿಯ ಬೋರ್ಡ್ ನಿರ್ದೇಶಕರಾದರು.

ಅದೇ ಮನುಷ್ಯ ಈಗ ನಮ್ಮ ದೇಶದ ಗೃಹಮಂತ್ರಿ. ವೇದಾಂತ ಕಂಪೆನಿಯು ಛತ್ತೀಸ್‌ಗಡದಲ್ಲಿ ಗಣಿಗಾರಿಕೆ ನಡೆಸಲು ಅಡ್ಡಿಯಾಗಿರುವ ಆದಿವಾಸಿಗಳನ್ನು ಮುಗಿಸಿಬಿಡಲು ನಿಮ್ಮ ತಂದೆಯನ್ನು ಕಳುಹಿಸಿದ ವ್ಯಕ್ತಿ.



ಈಗ ಯೋಚಿಸಿ ಹೇಳು ಚೇತನ್ ತಪ್ಪು ಯಾರದೆಂದು?

ಇದಿಷ್ಟೇ ಅಲ್ಲ, ನಿನ್ನ ಚಿಕ್ಕಬಸವನಹಳ್ಳಿಯ ರೈತರ ಪರಿಸ್ಥಿತಿ ಏನಾಗಿದೆ ಎಂತಲೂ ಒಮ್ಮೆ ಕೇಳಿ ತಿಳಿದುಕೋ. ಹಾಸನ ನಗರದಿಂದ ಕೇವಲ ಐದು ಕಿಲೋಮೀಟರ್ ದೂರದಲ್ಲಿರುವ ಈ ಹಳ್ಳಿಗಳ ಜಮೀನುಗಳನ್ನು ಕೈಗಾರಿಕಾ ಉದ್ದೇಶಕ್ಕೆಂದು 10 ವರ್ಷಗಳ ಹಿಂದೆ ರೈತರಿಂದ ಕಿತ್ತುಕೊಳ್ಳಲಾಯಿತು. ಬರಲಿರುವ ಹೊಸ ಫ್ಯಾಕ್ಟರಿಗಳಲ್ಲಿ ಸ್ಥಳೀಯರಿಗೆ ಕೆಲಸ ಕೊಡುವುದಾಗಿ ಆಗ ಸರ್ಕಾರ ಹೇಳಿತ್ತು ತಾನೇ? ಆದರೂ ಯಾಕೆ ನಿನ್ನ ಹಳ್ಳಿಯ ನಲವತ್ತು ಯುವಕರು ಸೇನೆ ಸೇರಿದ್ದಾರೆ.

ಅವರಿಗೆ ಹಾಸನದಲ್ಲೇ ಕೆಲಸ ಸಿಗಲಿಲ್ಲ ಯಾಕೆ? ಅಂದು ಭೂಮಿ ಕಳೆದುಕೊಂಡ ರೈತರು ಈಗೆಲ್ಲಿದ್ದಾರೆ? ಪರಿಹಾರದ ಹಣ ಸಿಕ್ತಾ ಹೇಗೇ?

ಈ ಪ್ರಶ್ನೆಗಳಿಗೆ ಯಾರಲ್ಲೂ ಉತ್ತರ ಇಲ್ಲ ಚೇತನ್ ದೊಡ್ಡದೊಡ್ಡ ರಾಜಕೀಯ ನಾಯಕರುಗಳೇ ಪ್ರತಿನಿಧಿಸುವ ಊರುಗಳ ಪರಿಸ್ಥಿತಿಯೇ ಹೀಗಿದ್ದರೆ ಇನ್ನು ಶಿಕ್ಷಣವೇ ಇರದ, ತಮಗಿರುವ ಮೂಲಭೂತ ಹಕ್ಕುಗಳ ಬಗ್ಗೆ ಅರಿವೇ ಇರದ ಛತ್ತೀಸ್‌ಗಡದ ಹಿಂದುಳಿದ ಆದಿವಾಸಿಗಳ ಪಾಡು ಹೇಗಿರಬಹುದು?

ಅಷ್ಟೇ ಅಲ್ಲ;

ಈಗ ನಿಮಗೆ ಉಳಿದಿರುವ ಕೇವಲ 2 ಎಕರೆ ಒಣಭೂಮಿ ಸೇರಿದಂತೆ ನಿಮ್ಮ ಇಡೀ ಹಳ್ಳಿಯ ಜಮೀನುಗಳನ್ನು ಸರ್ಕಾರ ಯಾವನೋ ಟಾಟಾನಿಗೋ, ವೇದಾಂತ ಕಂಪೆನಿಗೋ ಕೊಡಬೇಕೆಂದು ನಿರ್ಧರಿಸಿದರೆ ನೀವೇನು ಮಾಡುತ್ತೀರಿ?

ಪ್ರತಿಭಟನೆ ತಾನೆ!

ಇದು ನಿಯಂತ್ರಿಸಲಾಗದ ಉಗ್ರಪ್ರತಿಭಟನೆಯಾದರೆ ಮುಂದೊಂದು ದಿನ ನಿಮ್ಮ ಊರಿಗೂ ನಾಗ ಬೆಟಾಲಿಯನ್ನೋ ಸಿಆರ್‌ಪಿಎಫ್‌ನ ಇನ್ನೊಂದು ಬೆಟಾಲಿಯನ್ನೋ ಬಂದೇ ಬರುತ್ತದೆ.

ಕದನ ಭುಗಿಲೇಳುತ್ತದೆ. ಎರಡೂ ಕಡೆ ಜನ ಸಾಯುತ್ತಾರೆ. ಸರ್ಕಾರ ಹೊಸ ಹೊಸ ವಿನ್ಯಾಸದ ಶವಪೆಟ್ಟಿಗೆಗಳನ್ನು ತರಿಸುತ್ತದೆ.

ಅಂದಹಾಗೆ

ಈ ವೇದಾಂತ ಕಂಪೆನಿಯ ಮಾಜಿ ಲಾಯರ್ ಚಿದಂಬರಂ ಮೊನ್ನೆ ಒಂದು ಹೇಳಿಕೆ ನೀಡಿ 'ಎಷ್ಟೇ ಪೊಲೀಸರ ಪ್ರಾಣಹಾನಿಯಾದರೂ ಪರವಾಗಿಲ್ಲ, ನಾನು ಇನ್ನಷ್ಟು ಸೈನಿಕರನ್ನು ಹೋರಾಟಕ್ಕೆ ಕಳಿಸುತ್ತೇನೆ' ಅಂದಿದ್ದಾನೆ.

ಇಲ್ಲಿ ನ್ಯಾಯ-ಅನ್ಯಾಯದ ತರ್ಕ ನಡೆಯುತ್ತಿಲ್ಲ. ಸರಿ ಯಾವುದು ತಪ್ಪು ಯಾವುದೆಂದು ಸರ್ಕಾರ ಹೇಳುತ್ತಿಲ್ಲ. ನಿನ್ನ ತಂದೆ ಶಿವಪ್ಪನಂತವರು ಖಂಡಿತಾ ತಮ್ಮ ಮುಗ್ಧ ದೇಶಪ್ರೇಮ ಹಾಗೂ ಕರ್ತವ್ಯನಿಷ್ಠೆಯಿಂದ ಕೆಲಸ ಮಾಡಿ ತಮ್ಮ ಪ್ರಾಣವನ್ನೇ ಕೊಟ್ಟಿರುತ್ತಾರೆ ಚೇತನ್.

ನಿನ್ನ ತಂದೆಯ ದೇಹ ತಂದರಲ್ಲ ಶವಪೆಟ್ಟಿಗೆಯಲ್ಲಿರಿಸಿ. ಅದರದ್ದೂ ಒಂದು ಕತೆ ಇದೆ. ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಕಾರ್ಗಿಲ್ ಯುದ್ಧದಲ್ಲಿ ಮಡಿದ ನಿನ್ನ ತಂದೆಯ ಸಹೋದ್ಯೋಗಿಗಳ ದೇಹಗಳನ್ನು ಅವರವರ ತವರೂರಿಗೆ ಸಾಗಿಸಲು ಅಮೆರಿಕಾದಿಂದ ಶವಪೆಟ್ಟಿಗೆಗಳನ್ನು ತರಿಸಿದ್ದರು. ಅಸಹ್ಯ ಏನು ಗೊತ್ತಾ? ನಮ್ಮ ನೇತಾಗಳು ಅದರಲ್ಲೂ ಲಂಚ ತಿಂದು ಸಿಕ್ಕಿಹಾಕಿಕೊಂಡಿದ್ದರು.

ಈ ಎಳೆವಯಸ್ಸಿನಲ್ಲಿ ನಿನಗಿದೆಲ್ಲಾ ಗೋಜಲು ಸಂಕೀರ್ಣ ಅನ್ನಿಸಬಹುದು. ಆದರೂ ಕನಿಷ್ಠ ನೀನು ಬೆಳೆದು ದೊಡ್ಡವನಾದ ಮೇಲಾದರೂ ಈ ಎಲ್ಲ ಘಟನೆಗಳ ವಿವರ ತಿಳಿದುಕೋ.

ಚಿಕ್ಕಬಸವನಹಳ್ಳಿಯಲ್ಲಿ ಈ[illegible] ಹೇಗೆ ನೀನು, ನಿನ್ನ ತಾಯಿ ನೋವು ಸಂಕಟ ಅನುಭವಿಸುತ್ತಿದ್ದೀರೊ ಅದೇರೀತಿ ಒರಿಸ್ಸಾ, ಛತ್ತೀಸ್‌ಗಡದಲ್ಲೂ ಸಾವಿರಾರು ಆದಿವಾಸಿ ಮಹಿಳೆಯರು, ಮಕ್ಕಳು, ಸಂಕಟ ಪಡುತ್ತಿದ್ದಾರೆ. ಕಾರಣ ಬೇರೆಯದೇ ಆಗಿರಬಹುದು. ಆದರೂ ಇವೆಲ್ಲ ಸಂಕಟ ತರುವ ದುಃಖದ ಘಟನೆಗಳು. ನಿನ್ನ ವಯಸ್ಸಿನ ಅನೇಕ ಆದಿವಾಸಿ ಮಕ್ಕಳನ್ನು ಛತ್ತೀಸ್‌ಗಡ ಸರ್ಕಾರ ಜೈಲಿಗೆ ಹಾಕಿಸಿದೆ. ನೀನು ಹೇಗೆ ನಿರಪರಾಧಿಯೋ ಆ ಮಕ್ಕಳೂ ನಿರಪರಾಧಿಗಳೇ ಆಗಿವೆ. ನಿನ್ನ ತಂದೆ ಹೇಗೆ ಪಿ.ಚಿದಂಬರಂ ಮತ್ತು ವೇದಾಂತ ಕಂಪೆನಿಯ ಷಡ್ಯಂತ್ರಕ್ಕೆ ಬಲಿಯಾದರೂ ಹಾಗೆಯೇ ಅಲ್ಲಿನ ಆದಿವಾಸಿ ತಂದೆ, ತಾಯಿ, ಅಕ್ಕ, ತಮ್ಮ ಕೂಡ ಬಲಿಯಾಗುತ್ತಿದ್ದಾರೆ.

ಇಲ್ಲಿ ನೈಜ ಅಪರಾಧಿ ಸರ್ಕಾರವೇ ಎಂಬುದು ನಿನಗೆ ತಿಳಿಯಲಿ ಎಂದು ಇಷ್ಟೆಲ್ಲಾ ಹೇಳಬೇಕಾಯಿತು.

ನಿನ್ನ ದುಃಖದಲ್ಲಿ ಸಹಭಾಗಿ

● ಪಾರ್ವತೀಶ
bparvateesha@gmail.com

ಮೈಸೂರು: ಸಂಸ್ಕೃತಿ ಇಲಾಖೆಯಲ್ಲಿ ಮಂಜಪ್ಪನೆಂಬ ನುಂಗಪ್ಪ

ಹಣ ಹೊಡೆಯುವುದನ್ನೇ ಕಾಯಕವನ್ನಾಗಿ ಮಾಡಿಕೊಂಡಿರುವ ಮಂಜಪ್ಪನೆಂಬ ಮನುಷ್ಯ ಮೈಸೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕನ ಸ್ಥಾನದಲ್ಲಿ ಕೂತು ಇಲಾಖೆಯ ಯೋಜನೆಗಳನ್ನೆಲ್ಲ ನೆಬ್ಬೆಬ್ಬಿಸುತ್ತಿದ್ದಾನೆ. ಮೈಸೂರಿಗೆ ಸಕ್ಕರಿಸಿದ ಈ ಏಳು ವರ್ಷಗಳಲ್ಲಿ ಈತನ ವಿರುದ್ಧ ದಾಖಲಾದ ಇಲಾಖಾ ದೂರುಗಳಿಗೆ ಲೆಕ್ಕವೇ ಇಲ್ಲ, ಆದರೆ ಹಣದ ಥೈಲಿಯ ಮಂಜಪ್ಪ ಮಾತ್ರ ಸುರಕ್ಷಿತ.


ಮಂಜಪ್ಪ

ಪ್ರತಿವರ್ಷ ಇಲ್ಲಿ ನಡೆಯುವ ಚಿಗುರು, ಸಾಂಸ್ಕೃತಿಕ ಸೌರಭ, ನಾಟಕ, ಕಲಾಕಮ್ಮಟ, ಭಾಷಾಕಲಿಕೆ, ಗಡಿನಾಡ ಉತ್ಸವ ಮುಂತಾದ ಕಾರ್ಯಕ್ರಮಗಳಿಗಾಗಿ ಸರ್ಕಾರ ಬಿಡುಗಡೆ ಮಾಡುವ 80 ಲಕ್ಷ ರೂ.ಗಳಲ್ಲಿ ಶೇ.30ಕ್ಕೂ ಹೆಚ್ಚು ಮಂಜಪ್ಪನ ಮನೆ ಸೇರುತ್ತಿದೆ.

'ಸಾಂಸ್ಕೃತಿಕ ಸೌರಭ'ದಲ್ಲಿ ಪಾಲ್ಗೊಳ್ಳುವ ಪ್ರತಿ ಕಲಾತಂಡಕ್ಕೆ 10 ಸಾವಿರ ಬದಲು ಐದೇ ಸಾವಿರ ನೀಡಿ ಉಳಿದ ಐನೈದು ಸ್ವಾಹಾ ಮಾಡುವುದು, ಒಂದು ಅವಕಾಶ ಪಡೆದ ತಂಡದಿಂದ ಇನ್ನೊಂದನ್ನ ಬೇರೆಯಾಗಿ ಮಾಡಿಸಿ ಮತ್ತೆ ಹತ್ತುಸಾವಿರ ಮಾಯ ಮಾಡುವುದು ಮಂಜಪ್ಪನ ಹಾಬಿ. ಜಿಲ್ಲೆಯ ಪ್ರತಿ ಕಲಾತಂಡವನ್ನು ಪ್ರೋತ್ಸಾಹಿಸಬೇಕಾದ ಮಂಜಪ್ಪ ತನಗೆ ಸಹಕರಿಸುವ ತಮಟೆ ಮಂಜುನಾಥ ಎನ್ನುವಾತನಿಗೆ ಮಾತ್ರ ಸಾಕಷ್ಟು ಅವಕಾಶಗಳನ್ನು ನೀಡುತ್ತಾನೆ.

ದಲಿತ ವಿದ್ಯಾರ್ಥಿ ನಿಲಯಗಳಿಗೆ ಹೋಗಿ ಕಲಿಸುವ ಸಂಪನ್ಮೂಲ ವ್ಯಕ್ತಿಗೆ ಎರಡು ಸಾವಿರ, ವಿದ್ಯಾರ್ಥಿಗೆ 500 ರೂ. ಕೊಡಬೇಕು. ಆದರೆ ಅಂತಹ ಕಾರ್ಯಕ್ರಮಗಳನ್ನೇ ನಡೆಸದ ಮಂಜಪ್ಪ ಬೇನಾಮಿ ಹೆಸರಲ್ಲಿ ಬಿಲ್ ಎತ್ತುವುದನ್ನು ಮಾತ್ರ ಮಿಸ್ ಮಾಡಲ್ಲ.

ಸಂಘಸಂಸ್ಥೆಗಳಿಗೆ ನೀಡಲು ಬೇಕಾದ ವಾದ್ಯಪರಿಕರಗಳ ಖರೀದಿಗೆ ಟೆಂಡರ್ ಕರೆಯದ ಮಂಜಪ್ಪ ತನಗೆ ಬೇಕಾದವರಿಂದ ಖರೀದಿ ಮಾಡಿ 'ಸರಿಗಮ' ಎಂದು ವಾದ್ಯ ಬಾರಿಸುತ್ತಾನೆ.


ಆಕಾಶವಾಣಿ ಕಲಾವಿದೆ ಪುಷ್ಪಲತಾ ಅವರ ತಂಡಕ್ಕೆ 50 ಸಾವಿರ ನೀಡಬೇಕಿತ್ತು. ತಂಡದ ಸದಸ್ಯರಿಗೆ ಪ್ರತ್ಯೇಕವಾಗಿ ಹಣ ಹಂಚಿದ ಮಂಜಪ್ಪ ಪುಷ್ಪಲತಾರಿಗೆ ಹತ್ತು ಸಾವಿರ ಕೊಡುವ ಬದಲು 7,500 ನೀಡಿದ್ದ. ಪುಷ್ಪಲತಾ ಜಂಟಿ ನಿರ್ದೇಶಕರಿಗೆ ದೂರು ನೀಡಿ ಹಣ ಕಕ್ಕಿಸಿದ್ದು ಮಂಜಪ್ಪನಿಗೇನೂ ನಾಚಿಕೆ ಬರಿಸಿಲ್ಲ. 'ಉದ್ಯಾನ ಸಂಧ್ಯಾರಾಗ' ಎಂಬ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬ ಕಲಾವಿದರಿಗೆ ನಾಲ್ಕು ಸಾವಿರ ನೀಡುವ ಬದಲು ಒಂದೆರಡು ಸಾವಿರ ನೀಡಿ ಅಲ್ಲೂ ಲಬಕ್ ಅನಿಸುತ್ತಾನೆ.

ಇಲಾಖೆಯ ದಿನಗೂಲಿ ನೌಕರರನ್ನು ಕಾಯಂಗೊಳಿಸಲು ಯತ್ನಿಸದ ಮಂಜಪ್ಪ ಅವರನ್ನು ಗೋಳು ಹೊಯ್ದುಕೊಳ್ಳುತ್ತಿದ್ದಾನೆ. ಈತನ ಅಸಭ್ಯ ವರ್ತನೆಗೆ ಬೇಸತ್ತು ಕಂಪ್ಯೂಟರ್ ಆಪರೇಟರ್ ಆಗಿದ್ದ ಕುಮಾರಿ ಎನ್ನುವ ಹುಡುಗಿ ಕೆಲಸವನ್ನೇ ಬಿಟ್ಟಿದ್ದಾಳೆ.

ಮೈಸೂರಿಗೆ ಬಂದಿದ್ದ ಸಾಹಿತಿ ಚಂದ್ರಕಾಂತ ಕುಸನೂರು ಅವರು ಇಲಾಖೆಯ ವಿಶ್ರಾಂತಿ ಕೊಠಡಿ ಕೇಳಿದರೆ, 'ನೀವ್ಯಾರು ಮಾರಾಯ್ರೇ?' ಎಂದಿದ್ದ ಈ ಭೂಪ. ಇಡೀ ವಿಶ್ರಾಂತಿ ಕೊಠಡಿಗಳ ಮೇಟಿಯಂತೆ ವರ್ತಿಸುವ ಮಂಜಪ್ಪ, ಅದರ ಒಂದು ಭಾಗವನ್ನು ಸ್ವಂತಕ್ಕೆ ಬಳಸುತ್ತಿದ್ದಾನೆ.

ಇಲಾಖೆಯ ಮುಖ್ಯ ಕಾರ್ಯದರ್ಶಿ ಮನು ಬಳಿಗಾರ್ ಮತ್ತು ಕಾರ್ಯದರ್ಶಿ ಜಯರಾಮರಾಜೇ ಅರಸ್ ಅವರು ಮಂಜಪ್ಪನನ್ನು ಇಲ್ಲಿಂದ ಒದ್ದೋಡಿಸಿ ಮೈಸೂರಿನ ಸಾಂಸ್ಕೃತಿಕ ಲೋಕಕ್ಕೆ ಕಿಂಚಿತ್ತಾದರೂ ನ್ಯಾಯ ಒದಗಿಸುವಂತಾಗಲಿ.

ವರದಿಗಾರ



ಹುಬ್ಬಳ್ಳಿ ರೈಲ್ವೆ : ಆಫೀಸರ್‌ಗಳ ಐಲುಪೈಲಿಗೆ ಕೋಟಿ ಕೋಟಿ!


ಸುದೀರ್ಘ ಹೋರಾಟದ ನಂತರ ಹುಬ್ಬಳ್ಳಿಗೆ ಲಭಿಸಿದ ನೈರುತ್ಯ ರೈಲ್ವೆ ವಲಯವೀಗ ರೈಲ್ವೆ ಆಫೀಸರ್‌ಗಳ ಪಾಲಿಗೆ ಐಭೋಗದ ಜೀವನ ನಡೆಸುವ ತಾಣವಾಗಿ ಬಿಟ್ಟಿದೆ. ಇನ್ನೊಂದು ಕಡೆ ಕಾರ್ಮಿಕರಿಗೆ ಕವಡೆ ಕಾಸಿನ ಕಿಮ್ಮತ್ತೂ ಇಲ್ಲದಂತಾಗಿದೆ.

ಅಂದಂತೆ, ಆರಂಭದಲ್ಲಿ ನೈರುತ್ಯ ವಲಯ ಬಂದಾಗ ಕೇಂದ್ರ ಕಚೇರಿ ಮಾತ್ರ ಬೆಂಗಳೂರಲ್ಲೇ ಇತ್ತು. ಕಾರಣ ಏನಪಾ ಅಂದ್ರೆ, ಬೆಂಗಳೂರಿನ ವಿಲಾಸಿಜೀವನದ ಸವಲತ್ತುಗಳನ್ನು ಕಳೆದುಕೊಳ್ಳಲೊಲ್ಲದ ಆಫೀಸರ್‌ಗಳು ಕೇಂದ್ರ ಕಚೇರಿಯನ್ನು ಅಲ್ಲೇ ಉಳಿಸಿಕೊಂಡಿದ್ದರು. ನಂತರ ಇದಕ್ಕಾಗಿ ಮತ್ತೊಂದು ಉಪಹೋರಾಟ ನಡೆಸಿ ಹುಬ್ಬಳ್ಳಿಗೆ ಕೇಂದ್ರ ಕಚೇರಿ ತಂದಿದ್ದಾಯಿತು.


ಅಲೋಕ್ ಜವೇರಿ

ಶುರುವಿನಲ್ಲಿ ಆಫೀಸರ್ ಮಹಾಶಯರಿಗೆ ಇಲ್ಲಿ ಬೋರೋ ಬೋರು. ಪಬ್‌ಗಳಿಲ್ಲ, ಡಿಸ್ಕೋಥೆಕ್‌ಗಳಿಲ್ಲ, ಅದಿಲ್ಲ, ಇದಿಲ್ಲ! ಆದರೆ ವರ್ಷೋಪ್ಪತ್ತಿನಲ್ಲಿ ಈ ಮಹಾಶಯರು ತಮಗೆ ಬೇಕುಬೇಕಾದ ಐಶಾರಾಮಿ ವ್ಯವಸ್ಥೆಯನ್ನು ಇಲಾಖೆಯ ಹಣದಲ್ಲೇ ರೂಪಿಸಿಕೊಂಡು ಬಿಟ್ಟರು. ತಾವು, ತಮ್ಮ ಕುಟುಂಬದವರ ಪ್ರಯಾಣಕ್ಕೆಂದೇ ವಿಶೇಷ ಎ.ಸಿ. ಬೋಗಿಗಳನ್ನು ಇಟ್ಟುಕೊಂಡಿದ್ದಾರೆ. ಇಲ್ಲಿರುವ ಅಂತಹ 13 ಆರ್.ಎ. ಕೋಚ್‌ಗಳಿದ್ದು, ಇವಕ್ಕೆಂದೇ ಪ್ರತ್ಯೇಕ 8 ಅಟೆಂಡರ್‌ಗಳು! ತಪಾಸಣೆಯ ನೆಪದಲ್ಲಿ ಕುಟುಂಬ ಪ್ರವಾಸ ಹೊರಡುವ ಈ ಆಫೀಸರ್‌ಗಳ ಚಾಕರಿ ಮಾಡಲು ಒಬ್ಬ ಪ್ಯೂನ್, ಒಬ್ಬ ಎ.ಸಿ. ಮೆಕ್ಯಾನಿಕ್, ಇನ್ನೊಬ್ಬ ಜನರಲ್ ಮೆಕ್ಯಾನಿಕ್ ಇರಲೇಬೇಕು!

ಕಾರ್ಮಿಕ ವಸತಿಗೃಹಗಳು ಬಿರುಕು ಬಿಡುತ್ತಲೇ ಇವೆ. ಆದರೆ 462 ಆಫೀಸರ್‌ಗಳಿಗಾಗಿ ಇರುವ ಕೇಶ್ವಾಪುರದ ಆಫೀಸರ್ ಕಾಲೋನಿ ಮಾತ್ರ ತಿಂಗಳಿಗೊಂದು ಹೊಸ ಸೌಕರ್ಯ ಪಡೆಯುತ್ತಲೇ ಇದೆ. ರೈಲ್ವೆ ಆಸ್ಪತ್ರೆಯಲ್ಲಿ ಇವರಿಗೆಂದೇ ವಿಶೇಷ ರೂಮ್ ನಿರ್ಮಿಸಲು 2009-10ರಲ್ಲಿ 9 ಲಕ್ಷ ಖರ್ಚು ಮಾಡಲಾಗಿದೆ. ಗಾಲ್ಫ್ ಮೈದಾನದ ಪಕ್ಕವೇ ತಮ್ಮ ಕಾಲೋನಿ ಮಾಡಿಕೊಂಡಿರುವ ಈ ವಿಲಾಸಿಪುತ್ರರು ಕಾಲೋನಿಯಲ್ಲಿ ಗಾರ್ಡನ್ ನಿರ್ಮಿಸಿಕೊಳ್ಳಲು 2008-09ರಲ್ಲಿ 10 ಲಕ್ಷ ರೂ. ಸುರಿದಿದ್ದಾರೆ. ಅದೇ ವರ್ಷವೇ ಗಾಲ್ಫ್ ಕಾಲೋನಿಯಿಂದ ತಮ್ಮ ಕಾಲೋನಿಗೆ 9 ಲಕ್ಷ ಸುರಿದು ರಸ್ತೆ ಮಾಡಿಕೊಂಡಿದ್ದಾರೆ. ಭವ್ಯ ಜಿಮ್, ಸ್ವಿಮ್ಮಿಂಗ್ ಪೂಲ್, ಟೆನಿಸ್ ಕೋರ್ಟ್ ಮಾಡಿಕೊಂಡು ಇಲಾಖೆಯ ಇನ್ನೊಂದಿಷ್ಟು ಲಕ್ಷಗಳನ್ನು ಖರ್ಚು ಮಾಡಿದ್ದಾರೆ. ಬಾರ್ ಅಂಡ್ ರೆಸ್ಟೋರೆಂಟ್ ಇಲ್ಲದೇ ಇದ್ದರೆ ಹೇಗೆ? ಅದೂ ಇದೆ, ಭರಪೂರಾಗಿಯೇ ಇದೆ.


ಬಬಡಿವಾಲೆ

ಎರಡು ವರ್ಷದ ಹಿಂದೆ ಒಂದೂವರೆ ಕೋಟಿ ಪೋಲು ಮಾಡಿ ಅದ್ದೂರಿ ಚಾಲುಕ್ಯ ಕಲ್ಯಾಣ ಮಂಟಪ ಕಟ್ಟಿಕೊಂಡಿದ್ದಾರೆ. ಇದರ ದಿನದ ಬಾಡಿಗೆಯೇ 25 ಸಾವಿರ ಇರುವದರಿಂದ ಇಲ್ಲಿ ಕಾರ್ಮಿಕರ ಮಕ್ಕಳ ಮದುವೆಗಳಿಗೆ ಅವಕಾಶವೇ ಇಲ್ಲ, ಹೊರಗಡೆ 4-5 ಸಾವಿರ ಬಾಡಿಗೆ ಇರುವಾಗ ಈ ಆಫೀಸರ್‌ಗಳು 25 ಸಾವಿರ ಇಟ್ಟು ಕಾರ್ಮಿಕರಿಗೆ ಈ ಸವಲತ್ತು ಸಿಗದಂತೆ ಮಾಡಿದ್ದು ಇಲಾಖೆಗೆ ಬಗೆಯುತ್ತಿರುವ ದ್ರೋಹವೇ ಆಗಿದೆ.

ಹೀಗೆ ತಮ್ಮ ಐಶಾರಾಮಿ ತೆವಲುಗಳಿಗಾಗಿ ಇಲಾಖೆಯ ಹಣವನ್ನು ನೀರಿನಂತೆ ಪೋಲು ಮಾಡುತ್ತಿರುವ ಅಧಿಕಾರಿಗಳು ಕಮೀಷನ್ ಆಶೆಗೆ ಬಿದ್ದು ಪ್ರತಿ ತಿಂಗಳು 200 ಬೋಗಿ ಫ್ರೇಮ್ ತಯಾರಿಸುವ ಕಾರ್ಯಾಗಾರವನ್ನು ಮುಚ್ಚುವ ಹುನ್ನಾರ ನಡೆಸಿದ್ದಾರೆ. ಚೀಫ್ ಮೆಕ್ಯಾನಿಕಲ್ ಇಂಜಿನಿಯರ್ ಅಲೋಕ್ ಜವೇರಿ, ಬಬಡಿವಾಲೆಗಳು ಈ ಕೆಲಸಕ್ಕೆ ಕೈಹಾಕಿದ್ದು ಇದರಿಂದ ಸುಮಾರು 800 ಕಾರ್ಮಿಕರು ಬೀದಿಗೆ ಬೀಳಲಿದ್ದಾರೆ.

ಓದುಗರ ಗಮನಕ್ಕೆ

ಪತ್ರಿಕೆಯ ಹೆಸರಿನ ಬಗ್ಗೆ ಸ್ಪಷ್ಟನೆ

ಗ್ರೈಡ್

ನಿಮ್ಮೆಲ್ಲರ ಮೆಚ್ಚಿನ ಹಾಗೂ ಕರ್ನಾಟಕದ ನಂಬರ್ 1 ಸ್ಪರ್ಧಾ ಮಾಸಿಕ 'ಗ್ರೈಡ್' ಈಗ ನಾಲ್ಕು ವರ್ಷ ಪೂರೈಸಿ ಐದನೆ ವರ್ಷಕ್ಕೆ ಕಾಲಿರಿಸಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಈ ನಡುವೆ ಓದುಗರಲ್ಲಿ ಗೊಂದಲ ಮೂಡಿಸುವಂತೆ ಗ್ರೈಡ್ ಹೆಸರಿನಲ್ಲೇ ಒಂದೆರಡು ಪತ್ರಿಕೆಗಳು ಅಲ್ಲಲ್ಲಿ ಕಾಣಿಸಿಕೊಂಡಿರುವುದಾಗಿ ನಮ್ಮ ಓದುಗರು ಮಾಹಿತಿ ನೀಡಿದ್ದಾರೆ.

ಇನ್ನು ಮುಂದೆ 'ಗ್ರೈಡ್' ಖರೀದಿಸುವಾಗ ದಯಮಾಡಿ ಎಚ್ಚರ ವಹಿಸಿ.

ಲಂಕೇಶ್ ಬಳಗ ಪ್ರಕಟಿಸುತ್ತಿರುವ 'ಗ್ರೈಡ್' ಮಾಸಿಕದ ಮುಖಪುಟದಲ್ಲಿ 'ಗ್ರೈಡ್' ಸ್ಪರ್ಧಾ ಜಗತ್ತಿಯೊಂದು ಕ್ಲೂಚಿ ಎಂಬ ಹೆಡಿಂಗ್ (master head) ಎಂದಿನಂತೆ ಇರಲಿದೆ. ಜೊತೆಗೆ ನಮ್ಮ ಸಂಸ್ಥೆಯ ಲೋಗೊ ದ ಹೂ ಗ್ರೈಡ್‌ನ ಮುಖಪುಟದಲ್ಲೇ ಇರಲಿದೆ. ಎಂದಿನಂತೆ ಅತ್ಯುತ್ತಮ ಗುಣಮಟ್ಟದ ಲೇಖನಗಳು, ಸ್ಪರ್ಧೆಗೆ ಮಾಹಿತಿ ಪ್ರಶ್ನೋತ್ತರಗಳ ಅಗಾಧ ಜ್ಞಾನ ಭಂಡಾರ ಗ್ರೈಡ್‌ನಲ್ಲಿ ಇದ್ದೇ ಇರುತ್ತದೆ.

ಸ್ವಂತಿಕೆಯಿರದವರು 'ಗ್ರೈಡ್' ಹೆಸರನ್ನು ದುರುಪಯೋಗ ಮಾಡಿಕೊಂಡರೂ ಕೂಡ ಅವರು ಈ ನಿಮ್ಮ 'ಗ್ರೈಡ್' ಮಾಸಿಕದ ಗುಣಮಟ್ಟ ತಲುಪುವುದು ಸುಲಭವಲ್ಲ ಅಲ್ಲವೆ?

ನೀವು ಇನ್ನು ಮುಂದೆ 'ಗ್ರೈಡ್' ಖರೀದಿಸುವಾಗ ದಯವಿಟ್ಟು ಲಂಕೇಶ್ ಬಳಗದ 'ಗ್ರೈಡ್' ಅನ್ನೇ ಕೇಳಿ ಪಡೆಯಿರಿ.

ಪಾರ್ವತೀಶ
ಸಂಪಾದಕ

ಕಾರ್ಟೂನ್ ಕಾರ್ನರ್




'ಪ್ರಜಾವಾಣಿ'ಗೆ ಪೊಲೀಸ್ ಬೆದರಿಕೆ!

ಕರ್ನಾಟಕದ ಪೊಲೀಸರಿಗೆ ಹೊಸದೊಂದು ರೋಗ ಶುರುವಾಗಿದೆ. 'ಕೈಲಾಗದವನು ಮೈಪರಚಿಕೊಂಡ' ಅನ್ನೋ ರೀತಿಯಲ್ಲಿ ಕಾಡಿನಲ್ಲಿ ಅಡಗಿರುವ ಮಾವೋವಾದಿ ನಕ್ಸಲೀಯರನ್ನು ಹಿಡಿಯಲಾಗದ ಅವರು ಮಾವೋವಾದಿಗಳನ್ನು ಭೇಟಿ ಮಾಡಿ ಸಂದರ್ಶನ, ವರದಿಗಳನ್ನು ಬರೆದು ಪ್ರಕಟಿಸುವ ಪತ್ರಕರ್ತರ ಮೇಲೆ ಮುಗಿಬಿದ್ದಿದ್ದಾರೆ. ಅಸಲಿಗೆ ಈ ರೋಗ ಪಕ್ಕದ ಆಂಧ್ರ ಪೊಲೀಸರಿಗೆ ಬಹಳ ಹಿಂದೆಯೇ ಬಂದಿತ್ತು. ಕೊನೆಗೆ, ಇಡೀ ನಾಗರಿಕ ಸಮಾಜ ಮಾತ್ರವಲ್ಲ ನ್ಯಾಯಾಂಗ ವ್ಯವಸ್ಥೆ ಸೇರಿಕೊಂಡು ಅವರ ಮೂರ್ಖತನಕ್ಕೆ ಕ್ಯಾಕರಿಸಿ ಉಗಿದು ರೋಗ ನಿವಾರಣೆ ಮಾಡಿದ್ದರು.

ಅದರಿಂದ ಕರ್ನಾಟಕದ ಪೊಲೀಸರು ಎಚ್ಚೆತ್ತು ಕೊಂಡಿದ್ದರೆ ಈ ರೋಗವೂ ಅಂಟುತ್ತಿರಲಿಲ್ಲ, ಮತ್ತೆ ಅದರ ನಿವಾರಣೆಗೆ ಪರಿಶ್ರಮಿಸುವ ಅವಶ್ಯಕತೆಯೂ ಬೀಳುತ್ತಿರಲಿಲ್ಲ. ಆದರೆ ಹಾಗಾಗಿಲ್ಲ. ಪರಿಣಾಮವಾಗಿಯೇ ಇತ್ತೀಚೆಗೆ ಪ್ರತಿಷ್ಠಿತ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಕೆಲಸ ಮಾಡುತ್ತಿರುವ ಸಂವೇದನಾಶೀಲ ಪತ್ರಕರ್ತ ರಾಹುಲ್ ಬೆಳಗಲಿಗೆ ಶಿವಮೊಗ್ಗದ ಅವಿವೇಕಿ ದೊಡ್ಡಪೇಟೆ ಪೊಲೀಸರು ನೋಟೀಸ್ ಕೊಟ್ಟಿದ್ದಾರೆ. ಆ ಮೂಲಕ ಮಾಧ್ಯಮದ ಮೇಲಿನ ದಾಳಿ ಮಾಡುವುದಕ್ಕೆ ಹಾಗೂ ಅದೇ ವೇಳೆಯಲ್ಲಿ ಮಾಧ್ಯಮ ಮತ್ತು ನಾಗರಿಕ ಸಮಾಜದಿಂದ ದಾಳಿಗೊಳಗಾಗುವುದಕ್ಕೆ ನಾಂದಿ ಹಾಡಿದ್ದಾರೆ.

ಇಷ್ಟಕ್ಕೂ ರಾಹುಲ್ ಬೆಳಗಲಿ ಮಾಡಿದ ತಪ್ಪಾದರೂ ಏನು? ಬೆಂಗಳೂರಿನ ಅಜ್ಞಾತಸ್ಥಳವೊಂದರಲ್ಲಿ ಕರ್ನಾಟಕದ ಮಾವೋವಾದಿ ನಾಯಕನೊಬ್ಬನನ್ನು ಭೇಟಿ ಮಾಡಿ ಅವರ ಸಂದರ್ಶನ ಮಾಡಿದ್ದು. ಈ ಸಂದರ್ಶನ ಪ್ರಜಾವಾಣಿಯ ಮಾರ್ಚ್ 21ರ ಬೆಂಗಳೂರು ನಗರ ಸಂಚಿಕೆಯಲ್ಲಿ ಪ್ರಕಟಗೊಂಡಿತ್ತು. ಸಂದರ್ಶನದಲ್ಲಿ ಇರುವುದಾದರೂ ಏನು? 'ಜನರನ್ನು ಜಾಗ್ರತಗೊಳಿಸುವ ನಮ್ಮ ಚಟುವಟಿಕೆಯನ್ನು ನಾವು ಮುಂದುವರೆಸುತ್ತೇವೆ. ಪೊಲೀಸರು ಪಶ್ಚಿಮ ಘಟ್ಟದ ಮಲೆನಾಡಿನಲ್ಲಿ ನಮ್ಮ ಬಗ್ಗೆ ಮಾಹಿತಿಕೊಡಿ ಎಂದು ಆದಿವಾಸಿಗಳನ್ನು ಪೀಡಿಸುತ್ತಿದ್ದಾರೆ, ಅವರ ಮೇಲೆ ದೌರ್ಜನ್ಯವೆಸಗುತ್ತಿದ್ದಾರೆ. ಆದರೆ, ಇದನ್ನೆಲ್ಲಾ ನಾವು ಮೆಟ್ಟಿ ನಿಲ್ಲುತ್ತೇವೆ. ಎಷ್ಟೇ ಕಷ್ಟವಾದರೂ ನಮ್ಮ ಹೋರಾಟವನ್ನು ನಿಲ್ಲಿಸುವುದಿಲ್ಲ, ಅದು ನಿರಂತರವಾಗಿ ಮುಂದುವರೆಯಲಿದೆ. ಛತ್ತೀಸ್‌ಗಡದ ದಂತೆವಾಡ ಕಾಡಿನಲ್ಲಿ ಪೊಲೀಸ್ ದೌರ್ಜನ್ಯವನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿ ನಮ್ಮದೇ ಪರ್ಯಾಯ ಸರ್ಕಾರ ರಚಿಸಿದ್ದೇವೆ. ಪೊಲೀಸರು ನಮ್ಮ ಪ್ರದೇಶಕ್ಕೆ ಬರದಂತೆ ತಡೆದಿದ್ದೇವೆ' ಎಂಬಿತ್ಯಾದಿ ತಮ್ಮ ನಿಲುವುಗಳನ್ನು, ಅಭಿಪ್ರಾಯಗಳನ್ನು ಮಾವೋವಾದಿ ನಾಯಕ ವ್ಯಕ್ತಪಡಿಸಿದ್ದಾನೆ. ಜೊತೆಗೆ ಉಡುಪಿಯಲ್ಲಿ ಬಂಧಿತನಾದ ತಮ್ಮ ಕಾರ್ಯಕರ್ತರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕೆಂಬ ಬೇಡಿಕೆಯನ್ನೂ ಇಟ್ಟಿದ್ದಾನೆ.



ಅಸಲಿಗೆ ಈ ಸಂದರ್ಶನ ಪ್ರಕಟಗೊಂಡಿರುವುದು ಪ್ರಜಾವಾಣಿಯ ಬೆಂಗಳೂರು ನಗರ ಸಂಚಿಕೆಯಲ್ಲಿ. ಅದನ್ನು ಕೆದಕಿದ ಶಿವಮೊಗ್ಗದ ದೊಡ್ಡಪೇಟೆಯ ಡಿವೈಎಸ್‌ಪಿ ಶೇಖರಪ್ಪ ತಮಗೆ ಸಂಬಂಧವಿಲ್ಲದಿದ್ದರೂ ರಾಹುಲ್‌ಗೆ ನೋಟೀಸುಜಾರಿ ಮಾಡಿದ್ದಾರೆ. ನೋಟೀಸಿನಲ್ಲಿ "...ತಮಗೆ ಸಂದರ್ಶನ ನೀಡಿದ ಮಾವೋವಾದಿ ಮುಖಂಡರು ಯಾರು ಮತ್ತು ಇತರೆ ಮಾಹಿತಿಗಳ ಬಗ್ಗೆ ಶಿವಮೊಗ್ಗ ದೊಡ್ಡಪೇಟೆ ಠಾಣೆ ಗುನ್ನೆ ನಂ. 534/09 ಕಲಂ 10, 12 , 13 The Unlawful Activities (Prevention) Act - 1967ರ ಕೇಸಿನಲ್ಲಿ ನಿಮ್ಮನ್ನು ವಿಚಾರಣೆ ಮಾಡಿ ಹೇಳಿಕೆ ಪಡೆಯಬೇಕಾಗಿರುವುದರಿಂದ ನೀವು ಈ ನೋಟೀಸ್ ತಲುಪಿದ 3 ದಿನಗಳೊಳಗೆ ಪೊಲೀಸ್ ಉಪಾಧೀಕ್ಷಕರು, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ ಇವರ ಮುಂದೆ ಹಾಜರಾಗುವುದು. ನೀವು ವಿಚಾರಣೆಗೆ ಹಾಜರಾಗಲು ನಿರಾಕರಿಸಿದ ಪಕ್ಷದಲ್ಲಿ ಕಲಂ 43 (F) The Unlawful Activities (Prevention) Act - 1967ರ ರೀತ್ಯಾ ಕ್ರಮ ಕೈಗೊಳ್ಳಲಾಗುವುದು" ಎಂದು ಸ್ಪಷ್ಟವಾಗಿ ಬರೆದಿದ್ದಾರೆ. ವಿಚಾರಣೆಗೆ ಹಾಜರಾಗಲು ನಿರಾಕರಿಸಿದರೆ ನಿಮ್ಮ ಮೇಲೆಯೇ ಕ್ರಮ ಕೈಗೊಳ್ಳಲಾಗುತ್ತದೆ ಎಂಬುದು ಪೊಲೀಸರ ಉದ್ಧಟತನವಲ್ಲದೇ ಮತ್ತೇನೂ ಅಲ್ಲ. ಡಿವೈಎಸ್‌ಪಿ ಶೇಖರಪ್ಪನ ಆದೇಶದ ಮೇರೆಗೆ ಮೋಹನ್ ಕುಮಾರ್ ಎಂಬ ಎಸ್ಸೈ ಖುದ್ದಾಗಿ ಬೆಂಗಳೂರಿಗೆ ಬಂದು ರಾಹುಲ್ ಬೆಳಗಲಿಯನ್ನು ಹುಡುಕಿ ನೋಟೀಸು ಕೊಟ್ಟು ಹೋಗಿದ್ದಾನೆ. ಹೋಗುವಾಗ ಮೂರು ದಿನಗಳೊಳಗೆ ಶಿವಮೊಗ್ಗದ ದೊಡ್ಡಪೇಟೆ ಠಾಣೆಗೆ ಬಂದು ಹೇಳಿಕೆ ನೀಡಬೇಕೆಂದು ಇನ್ನೊಮ್ಮೆ ತಾಕೀತು ಮಾಡಿ ಹೋಗಿದ್ದಾನೆ.

ಇಲ್ಲಿ ಗಮನಿಸಬೇಕಾದ ವಿಚಾರ ಎಂದರೆ ಮಾಧ್ಯಮದವರಿಗೆ ಇಂತಹ ನೋಟೀಸ್ ಕೊಡುವುದೇ ಸಂವಿಧಾನ ಬಾಹಿರವಾಗುತ್ತದೆ ಎಂಬುದೂ ಶಿವಮೊಗ್ಗ ಪೊಲೀಸರಿಗೆ ತಿಳಿದಂತಿಲ್ಲ. ಕೆಲವು ವಿಚಾರಗಳನ್ನು ಗಮನಿಸಿ. The Unlawful Activities (Prevention) Act ಎಂಬ ಕಾಯ್ದೆ ಜಾರಿಗೆ ಬಂದಿದ್ದು 1967ರಲ್ಲಿ. ಕೇಂದ್ರದಲ್ಲಿ ಯುಪಿಎ ಸರ್ಕಾರ ಅಧಿಕಾರಕ್ಕೇರಿದ ಮೇಲೆ ಅದರ ಹಿಂದಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಜಾರಿಗೆ ತಂದಿದ್ದ Prevention of Terrorist Activities (Prevention) ಅಥವ ಪೋಟ ಎಂಬ ಕರಾಳ ಕಾನೂನನ್ನು ಹಿಂತೆಗೆದುಕೊಂಡು ಅದರ ಬದಲಿಗೆ ಈ ಅನ್‌ಲಾಫುಲ್ ಕಾಯಿದೆಯನ್ನೇ ಕೇಂದ್ರೀಯ ಕಾಯಿದೆಯನ್ನಾಗಿ ಮಾಡಿತು. ಪೋಟಾದಲ್ಲಿದ್ದ ಹಲವಾರು ಪ್ರಜಾತಂತ್ರ ವಿರೋಧಿ ಪ್ರಾವಿಷನ್‌ಗಳನ್ನು The Unlawful Activities (Prevention) Act ಕಾಯ್ದೆಗೆ ಸೇರಿಸಿತು. ಮತ್ತೆ ಅದಕ್ಕೆ 2008ರ ಡಿಸೆಂಬರ್‌ನಲ್ಲಿ ಮತ್ತಷ್ಟು ಕರಾಳ ಸ್ವರೂಪದ ತಿದ್ದುಪಡಿಗಳನ್ನು ಮಾಡಿತು. ಈಗ ದೇಶದಾದ್ಯಂತ ಭಯೋತ್ಪಾದನೆ ಮತ್ತು ಸಂಘಟಿತ ಅಪರಾಧಗಳಿಗೆ ಸಂಬಂಧಿದಂತೆ ಪ್ರಧಾನವಾಗಿ ಬಳಕೆಯಾಗುತ್ತಿರುವ ಕಾಯ್ದೆ ಇದೇನೆ. ಸೇರ್ಪಡೆಗೊಂಡ ತಿದ್ದುಪಡಿಗಳಲ್ಲಿ ಕಾಯ್ದೆಯ 43 (ಎಫ್) ಕೂಡ ಒಂದು. ಅದರ ಸಾರಾಂಶವೇನೆಂದರೆ ಈ ಕಾಯ್ದೆಯಡಿಯಲ್ಲಿ ದಾಖಲಾದ ಕೇಸುಗಳ ವಿಚಾರಣೆಗಾಗಿ ಎಸ್ಪಿಯಿಂದ ನಿರ್ದೇಶಿತನಾದ ಹಾಗೂ ಡಿವೈಎಸ್‌ಪಿಗಿಂತ ಕೆಳಗಿನ ದರ್ಜೆಯವನಲ್ಲದ ಪೊಲೀಸ್ ಅಧಿಕಾರಿಯು ಯಾವುದೇ ಸರ್ಕಾರಿ, ಅರೆಸರ್ಕಾರಿ, ಖಾಸಗಿ ಸಂಸ್ಥೆಗಳಿಗೆ ಹಾಗೂ ಬಿಡಿಬಿಡಿ ವ್ಯಕ್ತಿಗಳಿಗೆ ನೋಟೀಸ್ ಜಾರಿ ಮಾಡಿ ವಿಚಾರಣೆಗೆ ಕರೆಯಬಹುದು.


ಮೊದಲನೆಯದಾಗಿ ಡಿವೈಎಸ್‌ಪಿ ಶೇಖರಪ್ಪ ಎಸ್ಪಿಯಿಂದ ನಿರ್ದೇಶಿತನಾಗಿದ್ದಾನೆಯೇ ಎಂಬುದನ್ನು ನೋಟೀಸಿನಲ್ಲೆಲ್ಲೂ ಹೇಳಿಲ್ಲ. ಅಂದರೆ, ಎಸ್ಪಿ ಮುರುಗನ್ ಹೇಳಿರದಿದ್ದರೂ ಆತನೇ ಖುದ್ದಾಗಿ ಮುತುವರ್ಜಿ ವಹಿಸಿ ನೋಟೀಸ್ ಜಾರಿ ಮಾಡಿರುವ ಸಾಧ್ಯತೆಯೇ ಹೆಚ್ಚಿದೆ.

ಇನ್ನು ಎರಡನೆಯದು ಮತ್ತು ಬಹಳ ಮುಖ್ಯವಾದದ್ದು ಎಂದರೆ ನೋಟೀಸಿನಲ್ಲಿ 'ನಿಮಗೆ ಸಿಕ್ಕ ಮಾವೋವಾದಿ ಮುಖಂಡರು ಯಾರು ಎಂಬುದನ್ನು ತಿಳಿಸುವಂತೆ' ಹೇಳಲಾಗಿದೆ. ಇದು ಗಂಭೀರವಾದ ವಿಚಾರ. ಏಕೆಂದರೆ ಇದು ಈ ದೇಶದ ಪ್ರಜಾತಂತ್ರದ ಪ್ರಮುಖ ಅಸ್ತಿಭಾರವಾದ "ಸ್ವತಂತ್ರ ಪತ್ರಿಕೋದ್ಯಮ"ವನ್ನೇ ನಾಶ ಮಾಡುವ ಮನೋಭಾವಕ್ಕೆ ದಾರಿ ಮಾಡಿಕೊಡುವ ಅಂಶವನ್ನೊಳಗೊಂಡಿದೆ.

ನಮ್ಮ ಸಂವಿಧಾನದ 19 (1) ಕಲಮು ಈ ದೇಶದ ಎಲ್ಲಾ ನಾಗರಿಕರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಒದಗಿಸುತ್ತದೆ. ಈ ಕಲಮನ್ನು ದೇಶದ ಸರ್ವೋಚ್ಚ ನ್ಯಾಯಾಲಯ ಮತ್ತು ಅನೇಕ ಹೈಕೋರ್ಟುಗಳು ತಮ್ಮ ಅನೇಕಾನೇಕ ತೀರ್ಪುಗಳಲ್ಲಿ ವ್ಯಾಖ್ಯಾನಿಸುತ್ತಾ ವಕೀಲರು ಮತ್ತು ಪತ್ರಕರ್ತರು ತಮ್ಮ ಮಾಹಿತಿಯ ಮೂಲವನ್ನು ಬಹಿರಂಗಪಡಿಸುವ ಅವಶ್ಯಕತೆಯಿಲ್ಲ ಹಾಗೂ ಅದನ್ನು ಗೌಪ್ಯವಾಗಿಡುವುದು ಅವರ ಹಕ್ಕು ಎಂದು ಸ್ಪಷ್ಟವಾಗಿ ಹೇಳಿವೆ. ಒಂದು ನಿರ್ದಿಷ್ಟ ವಿಚಾರಕ್ಕೆ ಸಂಬಂಧಿಸಿದಂತೆ ಕಾನೂನು ಅಸ್ತಿತ್ವದಲ್ಲಿರದಿದ್ದರೆ ಆದಕ್ಕೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟು ಮತ್ತು ಹೈಕೋರ್ಟುಗಳು ನೀಡುವ ತೀರ್ಪು ಮತ್ತು ವ್ಯಾಖ್ಯಾನಗಳೇ ಕಾನೂನುಗಳಾಗಿ ಪ್ರವರ್ತಿಸುತ್ತವೆ ಎಂಬುದು ಕಾಮನ್‌ಸೆನ್ಸ್ ವಿಚಾರ. ಅಲ್ಲದೇ ಭಾರತೀಯ ಕಾನೂನು ಆಯೋಗ ತನ್ನ 93ನೇ ವರದಿಯಲ್ಲಿ ಮಾಧ್ಯಮಗಳ ಈ ಸ್ವಾತಂತ್ರ್ಯವನ್ನು ಎತ್ತಿಹಿಡಿದಿದೆ. ಇದು ಅಸಲಿ ವಿಚಾರ. ಹೀಗಿದ್ದರೂ 'ನಿಮಗೆ ಯಾರು ಭೇಟಿಯಾಗಿದ್ದರು, ಎಲ್ಲಿ ಭೇಟಿಯಾಗಿದ್ದರು, ಏನು ಮಾತನಾಡಿದರು, ಮತ್ತೆ ಎಲ್ಲಿ ಭೇಟಿಯಾಗುತ್ತೀರಿ' ಎಂದೆಲ್ಲಾ ಪತ್ರಕರ್ತರನ್ನು ಪ್ರಶ್ನಿಸುವುದು ಡಿವೈಎಸ್‌ಪಿ ಶೇಖರಪ್ಪನಂತಹ ಕಾಮನ್‌ಸೆನ್ಸ್ ಇಲ್ಲದ ಪೊಲೀಸರು ಮಾತ್ರ ಮಾಡಲು ಸಾಧ್ಯ



ಈ ಹಿಂದೆ ಆಂಧ್ರ ಪೊಲೀಸರೂ ಇದೇ ರೀತಿಯಲ್ಲಿ ವರ್ತಿಸಿದ್ದರು. ನಿಜ ಹೇಳಬೇಕೆಂದರೆ ಅವರು ಡಿವೈಎಸ್‌ಪಿ ಶೇಖರಪ್ಪನಿಗಿಂತ ಹತ್ತು ಹೆಜ್ಜೆ ಮುಂದೆ ಹೋಗಿ 'ಮಾವೋವಾದಿ ನಕ್ಸಲೀಯರನ್ನು ಭೇಟಿಯಾಗುವ ಮೊದಲು ಎಲ್ಲಿ ಭೇಟಿಯಾಗುತ್ತೀರಿ ಅಂತ ನಮಗೆ ತಿಳಿಸಿ ಹೋಗಬೇಕು' ಅಂತ ತಾಕೀತು ಮಾಡಿದ್ದರು. ಈ ದೇಶದ ಸಂವಿಧಾನ ಕೊಟ್ಟಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಅದನ್ನು ಕುರಿತಂತೆ ಸುಪ್ರೀಂ ಕೋರ್ಟು ಮತ್ತು ಹೈಕೋರ್ಟು ನೀಡಿರುವ ವ್ಯಾಖ್ಯಾನಗಳ ಬಗ್ಗೆ ಹಾಗೂ ಕಾನೂನು ಆಯೋಗದ ಅಭಿಪ್ರಾಯದ ಬಗ್ಗೆ ಆಂಧ್ರ ಪೊಲೀಸರು ಅಷ್ಟು nonsense ಆಗಿ ವರ್ತಿಸಿದ್ದರು. ಕೂಡಲೇ ಆಂಧ್ರದ ಮಾಧ್ಯಮಗಳು ಒಗ್ಗಟ್ಟಿನಿಂದ ಪೊಲೀಸರ ಮೇಲೆ ಮುಗಿಬಿದ್ದವು. sensible ನಾಗರಿಕ ಸಮಾಜ ಮತ್ತು ಮಾನವಹಕ್ಕು ಹೋರಾಟಗಾರರು ಅದರ ಬೆನ್ನಿಗೆ ನಿಂತರು. ಇಡೀ ರಾಜ್ಯಾದ್ಯಂತ ಅದೊಂದು ಚಳವಳಿಯ ಸ್ವರೂಪ ಪಡೆಯುತ್ತಿದ್ದಂತೆಯೇ ಖುದ್ದು ಗೃಹಮಂತ್ರಿಯೇ ಮಧ್ಯಪ್ರವೇಶಿಸಿ 'ಪೊಲೀಸರು ಆ ರೀತಿ ನೋಟೀಸು ಜಾರಿ ಮಾಡುವ ಹಾಗಿಲ್ಲ, ತಪ್ಪಾಗಿದೆ. ತಿದ್ದಿಕೊಳ್ಳುತ್ತೇವೆ' ಎಂದು ಒಪ್ಪಿಕೊಳ್ಳುವುದರೊಂದಿಗೆ ಸಮಸ್ಯೆ ಬಗೆಹರಿದಿತ್ತು.



ಪೊಲೀಸರು ಕಳುಹಿಸಿದ ನೋಟೀಸ್......

ಈಗ ಇಲ್ಲೂ ಅದೇ ಆಗುತ್ತಿದೆ. ತಮಗೆ ನೋಟೀಸ್ ಬಂದ ಮೇಲೆ ರಾಹುಲ್ ಬೆಳಗಲಿ ಮತ್ತು ಇನ್ನಿತರ ಪತ್ರಕರ್ತರು ರಾಜ್ಯದ ಪೊಲೀಸ್ ಮಹಾನಿರ್ದೇಶಕ ಅಜಯ್ ಕುಮಾರ್ ಸಿಂಗ್ ಅವರನ್ನು ಭೇಟಿ ಮಾಡಿದರು. ಅವರಿಗೂ ವಿಚಾರ ಏನಂತ ಸರಿಯಾಗಿ ಗೊತ್ತಿರದಿದ್ದುದರಿಂದ ಭೇಟಿಯಾದವರಿಗೆ ಸ್ಪಷ್ಟವಾಗಿ ಏನೂ ಹೇಳದೆ ಕಳಿಸಿಕೊಟ್ಟರು. ಆಮೇಲೆ ಸಂಪೂರ್ಣ ವಿಚಾರ ಏನು ಅಂತ ಅವರಿಗೂ ಗೊತ್ತಾಗಿದೆ. ಕೊನೆಗೆ ಅವರೇ ಖುದ್ದಾಗಿ ರಾಹುಲ್ ಬೆಳಗಲಿಗೆ ಫೋನ್ ಮಾಡಿ 'ಪ್ರಕರಣ ದಾಖಲಾಗಿರುವುದು The Unlawful Activities (Prevention) Act ಕಾಯ್ದೆಯಡಿಯಲ್ಲಿಯಾದ್ದರಿಂದ ಅದನ್ನೇ ನಿಮ್ಮ ಮೇಲೆ ಹಾಕಲು ಬರುವುದಿಲ್ಲ. ನೋಟೀಸ್ ಜಾರಿ ಮಾಡುವುದಕ್ಕೂ ಅವಕಾಶವಿಲ್ಲ. ನಾನು ಶಿವಮೊಗ್ಗ ಪೊಲೀಸರೊಂದಿಗೆ ಮಾತನಾಡಿ ಬಗೆಹರಿಸುತ್ತೇನೆ' ಎಂದು ಒಪ್ಪಿಕೊಂಡಿದ್ದಾರೆ. ಇನ್ನೊಂದೆಡೆ ಮಾಧ್ಯಮದವರು ಗೃಹ ಸಚಿವ ವಿ.ಎಸ್.ಆಚಾರ್ಯ ಅವರನ್ನು ಭೇಟಿ ಮಾಡಿ ಇದರ ಬಗ್ಗೆ ಕೇಳಿದಾಗ ಅವರೂ ಕೂಡ 'ಇಲ್ಲ ನೋಟೀಸ್ ಜಾರಿ ಮಾಡಿ ಪತ್ರಕರ್ತರಿಗೆ ಕಿರುಕುಳ ಕೊಡುವುದು ಸಂವಿಧಾನಬಾಹಿರ. ಪತ್ರಕರ್ತರೂ ಕೂಡ ಸಮಾಜದ ಸ್ವಾಸ್ಥ್ಯ ಕೆಡುವುದಕ್ಕೆ ಅನುಕೂಲವಾಗದಂತೆ ಹಾಗೂ ಅದನ್ನು ಕಾಪಾಡುವುದಕ್ಕೆ ಪೊಲೀಸರಿಗೆ ನೆರವಾಗುವಂತೆ ಜವಾಬ್ದಾರಿಯಿಂದ ವರ್ತಿಸಬೇಕು' ಎಂದಿದ್ದಾರೆ. ಅಂದರೆ ಅವರೂ ಕೂಡ ನೇರವಾಗಿಯೇ ಪತ್ರಕರ್ತರಿಗೆ ನೋಟೀಸ್ ಕೊಟ್ಟು ಬೆದರಿಸಿದ್ದನ್ನು ವಿರೋಧಿಸಿದ್ದಾರೆ.



ಇಷ್ಟೆಲ್ಲಾ ಆದಮೇಲೂ ಶಿವಮೊಗ್ಗ ಪೊಲೀಸರು ಬುದ್ಧಿ ಕಲಿತುಕೊಳ್ಳಲಿಲ್ಲ ಎಂದರೆ ಕಾನೂನು ರಕ್ಷಕರಿಂದಲೇ ಕಾನೂನನ್ನು ರಕ್ಷಿಸಬೇಕಾಗಿದೆ. ಇದೇ ಈ ದೇಶದ ದುರಂತ.

• ಕುಮಾರ್ ಬುರಡಿಕಟ್ಟಿ

ಶಿವಮೊಗ್ಗ ಪೊಲೀಸರು 'ಪ್ರಜಾವಾಣಿ'ಯ ಪತ್ರಕರ್ತ ರಾಹುಲ್ ಬೆಳಗಲಿಗೆ ನೋಟೀಸ್ ಜಾರಿ ಮಾಡುವ ಒಂದೂವರೆ ತಿಂಗಳ ಹಿಂದೆ ಮೈಸೂರು ಪೊಲೀಸರು ನಾಗರಿಕ ಹಕ್ಕುಗಳ ಸಂಘಟನೆಯಾದ ಪಿಯುಸಿಎಲ್‌ನ ಕರ್ನಾಟಕ ಘಟಕದ ಉಪಾಧ್ಯಕ್ಷರಾದ ಡಾ.ಇ. ರತಿ ರಾವ್ ಮೇಲೆ ಐಪಿಸಿ ಸೆಕ್ಷನ್ 124ಎ ಮತ್ತು 505 ಕಲಮಿನನ್ವಯ ಹಾಗೂ ಪ್ರೆಸ್ ಮತ್ತು ರಜಿಸ್ಟ್ರೇಶನ್ ಕಾಯ್ದೆಯ ಕಲಮು 15 ಪ್ರಕಾರ ಒಂದು ಕೇಸನ್ನು ಹಾಕಿ ನೋಟೀಸ್ ಜಾರಿಗೊಳಿಸಿದ್ದಾರೆ. 2007ರಲ್ಲಿ ಕರ್ನಾಟಕ ಪಿಯುಸಿಎಲ್ ಘಟಕವು ಖಾಸಗಿಯಾಗಿ ತನ್ನ ಕಾರ್ಯಕರ್ತರ ಮಾಹಿತಿಗಾಗಿ ಹೊರತರುತ್ತಿದ್ದ ಪಿಯುಸಿಎಲ್ ವಾರ್ತಾಪತ್ರದ ಬಗ್ಗೆ ಮಾಹಿತಿ ಕೇಳಿ ಈ ನೋಟೀಸು ಜಾರಿ ಮಾಡಿದ್ದಾರೆ.

ಮೈಸೂರು ಪೊಲೀಸರದ್ದೂ ಇದೇ ಕತೆ

ನಮಗೆಲ್ಲಾ ಗೊತ್ತಿರುವಂತೆ ಪಿಯುಸಿಎಲ್ ಒಂದು ಮಾನವ ಹಕ್ಕು ಸಂಘಟನೆ. 1977ರಲ್ಲಿ ಹಿರಿಯ ಸಮಾಜವಾದಿ ಹೋರಾಟಗಾರ ಜಯಪ್ರಕಾಶ್ ನಾರಾಯಣ್ ಅವರಿಂದ ಸ್ಥಾಪನೆಯಾದ ಈ ಸಂಘಟನೆ ಮೊದಲಿನಿಂದಲೂ ಮಾನವ ಹಕ್ಕುಗಳ ರಕ್ಷಣೆಗಾಗಿ, ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯುವುದಕ್ಕಾಗಿ ಪ್ರಯತ್ನಿಸುತ್ತಲೇ ಬಂದಿದೆ. ಜಸ್ಟೀಸ್ ತಾರ್ಕುಂಡೆ, ಜಸ್ಟೀಸ್ ರಾಜೇಂದ್ರ ಸಚಾರ್ ಅವರಂಥ ಗೌರವಾನ್ವಿತ ನ್ಯಾಯಮೂರ್ತಿಗಳು, ಕೆ.ಜಿ.ಕಣ್ಣಾಬಿರಾನ್ ಅವರಂಥ ಪ್ರಖ್ಯಾತ ಸಂವಿಧಾನ ಮತ್ತು ಕಾನೂನು ತಜ್ಞರು ಅದರ ಅಧ್ಯಕ್ಷ ಸ್ಥಾನವ[illegible] ಅಲಂಕರಿಸಿರು[illegible] ಆ ಸಂಘಟನೆಯ ಘನತೆಯನ್ನು ಎತ್ತಿ ತೋರುತ್ತದೆ. ಪ್ರಭುತ್ವದಿಂದ [illegible]ಾನವ ಹಕ್ಕುಗಳ ಉಲ್ಲಂಘನೆಯಾದರೂ ಸ್ವತಂತ್ರವಾಗಿ ಸತ್ಯಶೋಧನಾ ತನಿಖೆ[illegible]್ಯಾಂಶಗಳನ್ನು ಹೊರತರುತ್ತಾ ದೇಶ ಪೊಲೀಸ್ ರಾಜ್ಯವಾಗಿ ಮಾರ್ಪಡುವುದನ್ನು ತಡೆಯುತ್ತಿರುವ ಸಂಘಟನೆಗಳಲ್ಲಿ ಪಿ.ಯು.ಸಿ.ಎಲ್. ಕೂಡ ಒಂದು.

ಪಿಯುಸಿಎಲ್ ನಡೆಸುವ ಚಟುವಟಿಕೆಗಳ ಬಗ್ಗೆ ತನ್ನ ಕಾರ್ಯಕರ್ತರಿಗೆ ಮಾಹಿತಿ ನೀಡುವುದಕ್ಕಾಗಿ ಕರ್ನಾಟಕದ ಘಟಕವು 2007ರಲ್ಲಿ ಪಿಯುಸಿಎಲ್ ವಾರ್ತಾಪತ್ರ ಎಂಬ ಅನಿಯತಕಾಲಿಕ ಪತ್ರಿಕೆಯನ್ನು ಹೊರತರುತ್ತಿತ್ತು. ಕೇವಲ ಕಾರ್ಯಕರ್ತರಿಗಾಗಿ ಖಾಸಗೀ ಪ್ರಸಾರಕ್ಕಾಗಿ ಮಾತ್ರ ಇದನ್ನು ತರುತ್ತಿದ್ದುದರಿಂದ ಅದನ್ನು ರಿಜಿಸ್ಟರ್ ಮಾಡಿರಲಿಲ್ಲ. ಕಾನೂನುಬಾಹಿರ ಕೃತ್ಯವಾಗಬಾರದೆಂಬ ಕಾರಣಕ್ಕೆ ಪತ್ರಿಕೆ ಮೇಲೂ 'ಖಾಸಗಿ ಪ್ರಸಾರಕ್ಕೆ' ಎಂದು ಮುದ್ರಿಸಲಾಗುತ್ತಿತ್ತು. ನಂತರ ಪಿಯುಸಿಎಲ್‌ನ ನೋಂದಣಿಗೊಂಡ ಅಧಿಕೃತ ಪತ್ರಿಕೆಯನ್ನೇ ಹೊರತರಬೇಕೆಂಬ ತೀರ್ಮಾನ ಮಾಡಿ 2007ರಲ್ಲೇ ಪಿಯುಸಿಎಲ್ ವಾರ್ತಾಪತ್ರಿಕೆಯನ್ನು ನಿಲ್ಲಿಸಿತು. ಮೈಸೂರಿನ ವಿಜಯನಗರ ಪೊಲೀಸರಿಗೆ ಅದೇಕೆ ಈಗ ತುರಿಕೆಯಾಯಿತೋ ಗೊತ್ತಿಲ್ಲ, ಪತ್ರಿಕೆ ನಿಂತು ಹೆಚ್ಚೂ ಕಡಿಮೆ ಎರಡೂವರೆ ವರ್ಷಗಳ ನಂತರದಲ್ಲಿ ಈಗ ಕೇಸು ಹಾಕಿ ನೋಟೀಸ್ ಜಾರಿ ಮಾಡಿದ್ದಾರೆ. ಎಲ್ಲಕ್ಕಿಂತ ಗಂಭೀರವಾದ ವಿಚಾರ ಎಂದರೆ ಎಫ್‌ಐಆರ್‌ನಲ್ಲಿ ಐಪಿಸಿ ಸೆಕ್ಷನ್ 124ಎ ಅಡಿಯಲ್ಲಿ ಪ್ರಕರಣ ದಾಖಲಿಸಿರುವುದು. ಅಸಲಿಗೆ ರಾಜದ್ರೋಹವೆಸಗಿದವರ ಮೇಲೆ ಈ ಕಲಮಿನಡಿಯಲ್ಲಿ ಕೇಸು ದಾಖಲಿಸಲಾಗುತ್ತದೆ. ಒಂದು ಮಾನವ ಹಕ್ಕು ಸಂಘಟನೆಯ ಸಂವಿಧಾನಬದ್ಧ ಹಾಗೂ ಸಂವಿಧಾನದ ಆಶಯಗಳಿಗಾಗಿ ಚಟುವಟಿಕೆ ನಡೆಸುತ್ತಿರುವ ಪಿಯುಸಿಎಲ್‌ನಲ್ಲಿ ಮೈಸೂರು ಪೊಲೀಸರು ಅದೇನು ರಾಜದ್ರೋಹವನ್ನು ಕಂಡರೋ ಗೊತ್ತಿಲ್ಲ. ಅಲ್ಲದೇ ಆ ವಾರ್ತಾಪತ್ರಿಕೆಯನ್ನು ಖಾಸಗೀ ಪ್ರಸಾರಕ್ಕಾಗಿಯೇ ತರುತ್ತಿದ್ದುದರಿಂದ ಪ್ರೆಸ್ ಅಂಡ್ ರೆಜಿಸ್ಟ್ರೇಶನ್ ಕಾಯ್ದೆ ಕೂಡ ಅನ್ವಯವಾಗುವುದಿಲ್ಲ. ಆದರೂ ಆ ಕಾಯ್ದೆಗಳನ್ನು ಹೇರುತ್ತಾರೆಂದರೆ ಮೈಸೂರು ಪೊಲೀಸರಿಗೆ ತಲೆಕೆಟ್ಟಿರಬೇಕು. ಮೈಸೂರಿನ ವಿಜಯನಗರ ಪೊಲೀಸರನ್ನು ನಿಮ್ಹಾನ್ಸ್‌ಗೆ ಸೇರಿಸಿ ಅಂತ ಜನ ಪ್ರತಿಭಟನೆ ಮಾಡುವ ಮೊದಲು ಅವರೇ ಎಚ್ಚೆತ್ತುಕೊಂಡರೆ ಅವರಿಗೇ ಒಳ್ಳೆಯದು.

ಕಾಡಿಗೆ ಪ್ರವೇಶ



ಜಂಗಲ್‌ನಾಮ! ಹೆಸರೇ ಹೇಳುವಂತೆ ಇದು ಕಾಡಿನ ಕತೆ. ಇಡೀ ದೇಶದಲ್ಲೇ ಅಪಾರ ಖನಿಜ ಸಂಪತ್ತನ್ನು ಹೊಂದಿರುವ ಬಸ್ತರ್ ಕಾಡಿನಲ್ಲಿನ ಆದಿವಾಸಿಗಳು ಇವತ್ತಿಗೂ ತುತ್ತು ಖೂಳಿಗೂ ಪರದಾಡುತ್ತಾ ಬದುಕುತ್ತಿರುವ ಕತೆ. ಭಾರತ ಸರ್ಕಾರದಿಂದ 'ದೇಶದ ಆಂತರಿಕ ಭದ್ರತೆಯ ಅತಿದೊಡ್ಡ ಅಪಾಯ' ಎಂದು ಪರಿಗಣಿಸಲ್ಪಟ್ಟಿರುವ ಮಾವೋವಾದಿ ನಕ್ಸಲೀಯರನ್ನು ಕುರಿತ ಕತೆ.

ಲೇಖಕ ಸತ್ನಾಮ್ ಅವರು ಮಾವೋವಾದಿಗಳ ಭದ್ರಕೋಟೆಯಂತಿರುವ ಬಸ್ತರ್ ಕಾಡಿನಲ್ಲಿ ಮೂರು ತಿಂಗಳ ಕಾಲ ಆದಿವಾಸಿಗಳೊಂದಿಗೆ, ಮಾವೋವಾದಿ ಗೆರಿಲ್ಲಾ ದಳಗಳೊಂದಿಗೆ, ಮಾವೋವಾದಿ ನಾಯಕರೊಂದಿಗೆ, ಪ್ರಜಾ ಮಿಲೀಷಿಯಾದೊಂದಿಗೆ ಸುತ್ತಾಡಿ ಕಣ್ಣಾರೆ ಕಂಡ, ಕಿವಿಯಾರೆ ಕೇಳಿದ್ದೆಲ್ಲವನ್ನು 'ಜಂಗಲ್‌ನಾಮ'ದಲ್ಲಿ ಮನಮುಟ್ಟುವಂತೆ ಕಟ್ಟಿಕೊಟ್ಟಿದ್ದಾರೆ. ಈ ಪುಸ್ತಕ ಅವರ ಮಾತೃಭಾಷೆಯಾದ ಪಂಜಾಬಿಯಲ್ಲಿ 2004ರಲ್ಲಿ ಪ್ರಕಟಗೊಂಡಾಗ ಪಂಜಾಬ್‌ನಾದ್ಯಂತ ಚರ್ಚೆ, ವಾಗ್ವಾದಗಳ ಅಲೆ ಎದ್ದಿತು. ಸಾಹಿತಿಗಳು, ಸಾಮಾಜಿಕ ಕಾರ್ಯಕರ್ತರು, ವಿವಿಧ ಕಮ್ಯೂನಿಸ್ಟ್ ಗುಂಪುಗಳು, ಸಂಘಟನೆಗಳು, ಬುದ್ಧಿಜೀವಿಗಳು, ವಿದ್ಯಾರ್ಥಿಗಳು ಎಲ್ಲರೂ ಮಾವೋವಾದದ ಪ್ರಸ್ತುತತೆ-ಅಪ್ರಸ್ತುತತೆಯ ಬಗ್ಗೆ ಚರ್ಚೆಗಳಲ್ಲಿ ಭಾಗವಹಿಸಿದರು. ಕೆಲವೇ ದಿನಗಳಲ್ಲಿ ಪುಸ್ತಕದ ಪ್ರತಿಗಳೆಲ್ಲವೂ ಖಾಲಿಯಾಗಿ ಪುನರ್ ಮುದ್ರಣ ಮಾಡಬೇಕಾಗಿ ಬಂತು. ಅಲ್ಲಿಂದೀಚೆಗೆ ಅದು ಅನೇಕ ಮುದ್ರಣಗಳನ್ನು ಕಂಡು ಕಳೆದ ವಾರವಷ್ಟೇ ಪೆಂಗ್ವಿನ್ ಪ್ರಕಾಶನದವರು ಇಂಗ್ಲಿಷ್‌ನಲ್ಲಿ ಪ್ರಕಟಿಸಿದ್ದಾರೆ.

ಮಾವೋವಾದಿ ನಕ್ಸಲ್ ಚಳವಳಿಯ ಬಗ್ಗೆ ಇಡೀ ದೇಶದಾದ್ಯಂತ ಭಾರಿ ಚರ್ಚೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಆ ಚಳವಳಿಯನ್ನು ತಲಸ್ಪರ್ಶಿಯಾಗಿ ಕಟ್ಟಿಕೊಡುವ ಈ ಪುಸ್ತಕವನ್ನು ಲಂಕೇಶ್ ಓದುಗರಿಗಾಗಿ ಪ್ರತೀವಾರ ಧಾರಾವಾಹಿಯಾಗಿ ಪ್ರಕಟಿಸುತ್ತಿದ್ದೇವೆ.

ಜಂಗಲ್‌ನಾಮ

ಮಾವೋವಾದಿ ಗೆರಿಲ್ಲಾ ವಲಯದೊಳಗೆ...



1

ಮೂಲ: ಸತ್ನಾಮ್ ಕನ್ನಡಕ್ಕೆ: ಕುಮಾರ್ ಬುರಡಿಕಟ್ಟಿ

...ಅದು ಕಾಡಿನೊಳಗಿನ ನನ್ನ ಮೊದಲ ದಿನ. ವಾಸ್ತವದಲ್ಲಿ ಅದು ದಿನವಲ್ಲ, ...ತ್ರಿಯಾಗಿತ್ತು. ಕಾಡಿನೊಳಗೆ ಪ್ರವೇಶಿಸುವುದಕ್ಕೆ ರಾತ್ರಿಯ ಕತ್ತಲು ಅತ್ಯವಶ್ಯವಾಗಿತ್ತು. ...ಲಿನ ವೇಳೆಯಲ್ಲೇ ನಾನು ಬೈಲಾಡಿಲ್ಲಾವನ್ನು ತಲುಪಿದ್ದರೆ ರಸ್ತೆಗಳಲ್ಲಿ ...ಗಾಡುತ್ತಲೋ ಅಥವಾ ಪ್ರಶಾಂತ ಸ್ಥಳವೊಂದರಲ್ಲಿ ವಿಶ್ರಾಂತಿ ಪಡೆಯುತ್ತಲೋ ... ಕಳೆಯುತ್ತಾ ರಾತ್ರಿಯ ಕತ್ತಲು ಕವಿಯಲು ಕಾಯಬೇಕಾಗುತ್ತಿತ್ತು. ನಾನು ...ದಿತ ಸಮಯಕ್ಕಿಂತ ಮೂರು ತಾಸು ಮುಂಚೆಯೇ ತಲುಪಿದ್ದೆ. ಸಮೀಪದ ...ಮಲೀಲ' ಪ್ರದರ್ಶನವಾಗುತ್ತಿದ್ದ ಸದ್ದು ಕೇಳಿಸುತ್ತಿತ್ತು. ರಿಕ್ಷಾದಲ್ಲಿ ...ೀಗುವುದಕ್ಕಿಂತ ಕಾಲ್ನಡಿಗೆಯಲ್ಲೇ ಆ ಕಡೆ ಹೋಗುವುದಕ್ಕೆ ನಿರ್ಧರಿಸಿದೆ. ...ಮಲೀಲದ ಕರ್ಕಶ ಧ್ವನಿಯ ವಾತಾವರಣದಲ್ಲೇ ಎರಡು ಗಂಟೆ ಕಳೆದೆ. ...ರೂ ಅದು ನನ್ನನ್ನು ನಿತ್ರಾಣಗೊಳಿಸಲಿಲ್ಲ, ಬದಲಿಗೆ ಸಮಯ ಕಳೆಯುವುದಕ್ಕೆ ...ಾಯ ಮಾಡಿತು. ನಾನಿನ್ನೂ ಒಂದು ಗಂಟೆ ಕಾಯಬೇಕಿತ್ತು, ನನ್ನನ್ನು ...ಮಕೊಂಡು ಹೋಗುವುದಕ್ಕಾಗಿ ಬರಲಿದ್ದ ವ್ಯಕ್ತಿಗಾಗಿ ಬೈಲಾಡಿಲ್ಲಾ ನಗರದ ...ಭಾಗದ ರಸ್ತೆಯೊಂದರ ಬದಿಯಲ್ಲಿ ನಿಂತು ಕಾಯಬೇಕಿತ್ತು.

... 'ಸಮಯ ಆಯ್ತು, ನಾವಿನ್ನು ಹೊರಡೋಣ' ನನ್ನ ಮಾರ್ಗದರ್ಶಿ ಹೇಳಿದ. ... ಮಧ್ಯರಾತ್ರಿ. ನಾವು ಕಾಡಿನತ್ತ ಪಯಣ ಬೆಳೆಸಿದೆವು. ನನ್ನ ಕಿಟ್‌ಬ್ಯಾಗ್ ...ಕೊಂಡು, ಬೂಟುಗಳು ಕಳಚಿಹೋಗದಂತೆ ಲೇಸನ್ನು ...ತ್ತೊಮ್ಮೆ ಬಿಗಿಯಾಗಿ ಕಟ್ಟಿಕೊಂಡೆ.

... 'ನಾನೂ ಸಿದ್ಧ' ಎನ್ನುತ್ತಾ ತಲೆಯಾಡಿಸಿದೆ. ನನ್ನ ...ರ್ಗದರ್ಶಿ ಮುಗುಳ್ನಕ್ಕ. ಇಬ್ಬರೂ ಅಲ್ಲಿಂದ ಹೊರಟು ... ಈ ಮೊದಲು ಬಿಟ್ಟುಬಂದಿದ್ದ ನಗರದ ಹೊರವಲಯಕ್ಕೆ ...ಳಿದೆವು. ತಗ್ಗುದಿಣ್ಣೆಗಳ, ಅಂಕುಡೊಂಕುಗಳ ಜಟಿಲ ... ನಮ್ಮನ್ನು ನಗರದಿಂದ ಹೊರಹೋಗುವ ವಿಶಾಲ ...ಗೆ ಕರೆತಂದಿತು. ಕೆಲವರು ಇನ್ನೂ ರಾಮಲೀಲ ...ಷ್ಟಿಯಿಂದ ಮರಳುತ್ತಿದ್ದರು. ಯಾವ ಹಾದಿಹೋಕನೂ ...ಮ್ಮನ್ನು ಹಿಂದಿಕ್ಕಿ ಹೋಗಲಿಲ್ಲ; ನಾವೂ ಯಾರ ಹತ್ತಿರವೂ ...ೀಗದಂತೆ ತುಸು ಅಂತರ ಕಾಪಾಡಿಕೊಳ್ಳುತ್ತಾ ...ನ್ನಾಗಿದೆವು. ನಮ್ಮ ಮತ್ತು ಅವರ ನಡುವೆ ಹರಡಿಕೊಂಡಿದ್ದ ...ಯೇ ನಮಗೆ ಅತ್ಯುತ್ತಮ ರಕ್ಷಾಕವಚವಾಗಿತ್ತು.

...ಒಬ್ಬರ ಹಿಂದೆ ಮತ್ತೊಬ್ಬರಂತೆ ನಡೆಯುತ್ತಾ ಒಂದು ಕಚ್ಚಾ ರಸ್ತೆಯನ್ನು ...ದೆವು. ಈಗ ಯಾವುದೇ ಬೂಟಿನ ಸದ್ದು ಇರಲಿಲ್ಲ, ತುಸು ಹೊತ್ತು ಈ ...ಬ್ಬರಸ್ತೆಗುಂಟಾ ನಡೆದು ಆದಷ್ಟು ಬೇಗ ಅದನ್ನು ದಾಟಬೇಕಿತ್ತು.

...ತಕ್ಷಣವೇ ಆ ರಸ್ತೆಯ ಅನತಿ ದೂರದ ತಿರುವಿನಲ್ಲಿ ಎದುರಿನಿಂದ ಒಂದು ... ಬಂದು ತನ್ನ ಪ್ರಕಾಶಮಾನ ಬೆಳಕಿನಲ್ಲಿ ನಮ್ಮನ್ನು ಮುಳುಗಿಸಿಬಿಟ್ಟಿತು. ...ವೇ ತನ್ನ ಬೆನ್ನಹಿಂದೆ ಅವಿತುಕೊಳ್ಳುವಂತೆ ನನ್ನ ಮಾರ್ಗದರ್ಶಿ ನನಗೆ ...ತಿಸಿದ. ನಾನು ಗಡಿಬಿಡಿಯಿಂದ ಹಾಗೆ ಮಾಡುವ ಮೊದಲೇ ಕಾರು ... ಪಕ್ಕದಲ್ಲೇ ಹಾದುಹೋಯಿತು. ಅದರ ಪ್ರಖರ ಬೆಳಕಿನ ಕಿರಣಗಳು ... ಕಣ್ಣುಗಳಲ್ಲಿ ದಟ್ಟ ಕತ್ತಲು ಕವಿಯುವಂತೆ ಮಾಡಿದ್ದರಿಂದ ಹಲವು ...ಡುಗಳ ನಂತರವಷ್ಟೇ ನನ್ನ ಮಾರ್ಗದರ್ಶಿಯ ನೆರಳಗೆರೆ ಕಾಣುವುದಕ್ಕೆ ... ಸಾಧ್ಯವಾಯಿತು.

...'ಈ ರಸ್ತೆಯಲ್ಲಿ ಸಾಮಾನ್ಯವಾಗಿ ವಾಹನದಟ್ಟಣೆ ಬಹಳ ಕಡಿಮೆಯಿರುತ್ತದೆ, ... ಕೆಲವು ಸಂದರ್ಭಗಳಲ್ಲಿ ಪೊಲೀಸರ ಜೀಪುಗಳು ಹಾದು ಹೋಗುತ್ತಿರುತ್ತವೆ,' ...ಳ ಸಣ್ಣ ದನಿಯಲ್ಲಿ ಆತ ಹೇಳಿದ. ವಾಹನದ ಹೆಡ್‌ಲೈಟ್ ನೋಡಿಯೇ ... ಪೊಲೀಸ್ ಜೀಪ್ ಅಲ್ಲ ಎಂದು ಆತ ಗುರುತಿಸಿದ್ದ. 'ನಾವು ಸ್ವಲ್ಪ ...ದ ಮಾತ್ರವೇ ಸಾಗಬೇಕಿದೆ' ಎನ್ನುತ್ತಾ ಆತ ವೇಗವಾಗಿ ನಡೆಯಲಾರಂಭಿಸಿದ. ... ಹೊತ್ತಿನಲ್ಲಿಯೇ ನಾವು ಇಕ್ಕೆಲಗಳಲ್ಲಿ ಸಾಲುಮರಗಳಿರುವ, ಕಿರಿದಾದ ...ದು ಮೇಲಿದ್ದೆವು. ಅದಾದ ಸ್ವಲ್ಪ ಹೊತ್ತಿನಲ್ಲಿ ಆತ ತುಸು ಹೊತ್ತು ನಿಂತು ... ಸವೆದುಬಂದ ದಾರಿಯನ್ನೊಮ್ಮೆ ಹಿಂತಿರುಗಿ ನೋಡುತ್ತಾ ಅದು ಕತ್ತಲಲ್ಲಿ ...ಯಾಗುವ ತವಕವೂ ಸೂಕ್ಷ್ಮವಾಗಿ ಪರಿಶೀಲಿಸಿದ. ನಂತರ ಮತ್ತೊಂದು ...ದಾರಿಯನ್ನು ಹಿಡಿದು ಒಂದು ಪೊದೆಯತ್ತ ನಡೆದ. ಅದರ ಹತ್ತಿರ ಬರುತ್ತಿದ್ದಂತೆಯೇ ಆತ 'ನಾನು...' ಎಂದು ಮೆಲ್ಲಗೆ ಹೇಳಿದ್ದು ನನಗೆ ಕೇಳಿಸಿತು.

ಕತ್ತಲಲ್ಲಿ ಆ ಪೊದೆಯ ಕಡೆಯಿಂದ ವ್ಯಕ್ತಿಯೊಬ್ಬನ ಆಕೃತಿ ನಮ್ಮತ್ತ ಬಂತು. ನಾವು ಆತನ ಕೈಕುಲುಕಿದೆವು. ಆತ ಬಗ್ಗಿ ತನ್ನ ಕಿಟ್‌ಬ್ಯಾಗ್ ಅನ್ನು ಹೆಗಲ ಮೇಲಿಟ್ಟು ಸರಿಪಡಿಸಿಕೊಂಡ. ಆತ ಮಧ್ಯಮ ಎತ್ತರ, ತೆಳುದೇಹ ಹೊಂದಿರುವ ವ್ಯಕ್ತಿಯೆಂಬುದು ಬೆಳದಿಂಗಳ ಬೆಳಕಿನಲ್ಲಿ ಕಾಣಿಸುತ್ತಿತ್ತು, ನನ್ನ ಮಾರ್ಗದರ್ಶಿಯಂತೆಯೇ ಆತನೂ ಬಹಳ ಚುರುಕಾಗಿದ್ದ.

ನಮ್ಮ ಮಾರ್ಗದರ್ಶಿ ನೇತೃತ್ವದಲ್ಲಿ ನಾವು ಒಬ್ಬರ ಹಿಂದೆ ಮತ್ತೊಬ್ಬರಂತೆ ಸಾಲುಗಟ್ಟಿ ಹೊರಟೆವು; ಮಾರ್ಗದರ್ಶಿ ಎಲ್ಲರಿಗಿಂತ ಮುಂದೆ, ಮಧ್ಯದಲ್ಲಿ ನಾನು ಮತ್ತು ನನ್ನ ಹಿಂದೆ ಹೊಸದಾಗಿ ಸೇರಿಕೊಂಡ ಸಂಗಾತಿ.

ಸ್ವಲ್ಪ ಹೊತ್ತಿನ ನಂತರ, ಆ ಹಾದಿಯಿಂದ ತಿರುಗುವ ಮೊದಲು ನಮ್ಮ ಟಾರ್ಚ್‌ಲೈಟ್‌ಗಳನ್ನು ಸ್ವಿಚ್‌ಆಫ್ ಮಾಡದಂತೆ ನಮ್ಮ ಮಾರ್ಗದರ್ಶಿ ನಿರ್ದೇಶನ ಕೊಟ್ಟ. ನಾವೀಗಾಗಲೇ ನಗರದಿಂದ ಬಹಳ ದೂರ ಸಾಗಿಬಂದಿದ್ದರೂ ಈಗ ಸುಮಾರು ಎಂಟು-ಹತ್ತು ಗುಡಿಸಲುಗಳಿರುವ ಒಂದು ಸಣ್ಣ ಆದಿವಾಸಿ ಹಳ್ಳಿಯ ಬದಿಯಲ್ಲಿ ಸಾಗಬೇಕಿತ್ತು, ನಾವೆಲ್ಲರೂ ಒಂದೊಂದು ಟಾರ್ಚ್ ಅನ್ನು ಇಟ್ಟುಕೊಂಡಿದ್ದೆವಾದರೂ ನಮ್ಮನಮ್ಮ ಪಾದಗಳನ್ನು ಸರಿಯಾದ ಜಾಗದಲ್ಲಿಯೇ ಇಡುತ್ತಿದ್ದೇವೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದಕ್ಕಾಗಿ ಮಾತ್ರವೇ ಅವುಗಳನ್ನು ಸ್ವಿಚ್‌ಆನ್ ಮಾಡುತ್ತಿದ್ದೆವು. ದಾರಿಯಲ್ಲಿ ಏನಾದರೂ ಚಿಕ್ಕಪುಟ್ಟ ಅಡೆತಡೆಗಳಿದ್ದರೆ ನಮ್ಮ ಮಾರ್ಗದರ್ಶಿ ತನ್ನ ಬೂಟುಗಾಲಿನಿಂದ ನೆಲಕ್ಕೆ ಒದೆಯುವ ಮೂಲಕ ನಮ್ಮನ್ನು ಎಚ್ಚರಿಸುತ್ತಿದ್ದನಾದ್ದರಿಂದ ನಮ್ಮ ಟಾರ್ಚ್ ಆನ್‌ಮಾಡಿ ಕ್ಷಣಾರ್ಧದಲ್ಲಿ ಅದನ್ನು ಆಫ್ ಮಾಡಿಬಿಡುತ್ತಿದ್ದೆವು. ಈಗ ನನಗೆ ನನ್ನ ಮಾರ್ಗದರ್ಶಿಯ ಹೆಜ್ಜೆಗಳ ಮೇಲೆ ಗಮನ ಕೇಂದ್ರೀಕರಿಸುವುದು, ನನ್ನನ್ನು ಹಿಂಬಾಲಿಸುತ್ತಿದ್ದ ಹೊಸ ಸಂಗಾತಿಗೆ ನನ್ನ ಹೆಜ್ಜೆಗಳ ಮೇಲೆ ಲಕ್ಷ್ಯಕೊಡುವುದು ಅವಶ್ಯವಾಗಿತ್ತು.

ಅದೊಂದು ಕಡಿದಾದ ಇಳಿಜಾರು ದಾರಿ; ಆ ಕಗ್ಗತ್ತಲಲ್ಲಿ ನಾವು ಎರಡು ಬೆಟ್ಟಗಳ ನಡುವಿನ ದುರ್ಗಮ ಕಣಿವೆಯೊಳಗೆ ನುಗ್ಗುತ್ತಿದ್ದೇವೆಯೇನೋ ಎನ್ನಿಸುತ್ತಿತ್ತು, ಕಾಡುದಾರಿ ಕಾಲಿಡುವುದಕ್ಕೂ ಜಾಗವಿರದಷ್ಟು ದಟ್ಟವಾಗಿತ್ತು, ನಮ್ಮ ಮಾರ್ಗದರ್ಶಿ ಬಹಳ ಎಚ್ಚರಿಕೆಯಿಂದ ಒಂದೊಂದೇ ಹೆಜ್ಜೆಗಳನ್ನು ಹಾಕುತ್ತಾ ಮುನ್ನಾಗುತ್ತಿದ್ದ; ತುಸು ದೂರ ಹೋಗಿ ನನಗಾಗಿ ಕಾಯುತ್ತಿದ್ದ, ನಾನೂ ಆತನ ಹೆಜ್ಜೆಗಳನ್ನೇ ಹಿಂಬಾಲಿಸುತ್ತಿದ್ದೆ, ಈ ರೀತಿಯಲ್ಲಿ ನಾವು ಆ ಕಡಿದಾದ ಇಳಿಜಾರು ದಾರಿಯಲ್ಲಿ ಇಳಿಯುತ್ತಾ ಸಾಗುತ್ತಿದ್ದಾಗ ಅಕಸ್ಮಾತ್ತಾಗಿ ಒಂದು ಕಲ್ಲಿನ ಮೇಲೆ ನನ್ನ ಕಾಲು ಜಾರಿತು. ಆದರೆ ನಾನು ಎಡವಿ ಬೀಳುವ ಮೊದಲೇ ಮಾರ್ಗದರ್ಶಿ ನನ್ನನ್ನು ಹಿಡಿದುಕೊಂಡು ಬಚಾವು ಮಾಡಿದ. ಆದರೂ ನನ್ನ ದೇಹ ಸಂಪೂರ್ಣವಾಗಿ ಬಗ್ಗಿಹೋಗಿ ಇಡೀ ದೇಹದ, ಕಿಟ್‌ಬ್ಯಾಗ್‌ನ ತೂಕವೆಲ್ಲಾ ಬಾಗಿದ ಪಾದಗಳ ಮೇಲೆ ಬಿತ್ತು, ಏನೇ ಆಗಲಿ, ಕೊನೆಗೆ ಮೇಲೆದ್ದು ಅಂತಿಮವಾಗಿ ಸಮತಟ್ಟಾದ ಜಾಗ ಸಿಗುವ ತನಕ ನಡೆಯುತ್ತಾ ಹೋದೆವು.

ಸ್ವಲ್ಪ ಸಮಯದಲ್ಲೇ ನಾವು ಆ ಆದಿವಾಸಿ ಮನೆಗಳಿದ್ದ ಹಳ್ಳಿಯ ಹೊರವಲಯವನ್ನು ದಾಟಿ ಮುಂದೆ ಬಂದೆವು; ಈಗ ಅವಶ್ಯವಿದ್ದಲ್ಲೆಲ್ಲಾ ನಮ್ಮ ಟಾರ್ಚ್‌ಗಳನ್ನು ಸ್ವಿಚ್‌ಆನ್ ಮಾಡಿಕೊಳ್ಳುತ್ತಿದ್ದೆವು. ಹೆಚ್ಚೂಕಡಿಮೆ ಎರಡು ತಾಸುಗಳ ಕಾಲ ಆ ಕಾಡುದಾರಿಯಲ್ಲಿ ಮೌನವಾಗಿ ನಡೆಯುತ್ತಲೇ ಹೋದೆವು. ನಿಶ್ಶಬ್ಧ ಆವರಿಸಿತ್ತು, ಕತ್ತಲು ಕವಿದಿತ್ತು, ಅಂಕುಡೊಂಕಾದ, ಕಲ್ಲುಬಂಡೆಗಳಿಂದ ಕೂಡಿದ ಈ ದುರ್ಗಮ ಕಾಡುದಾರಿಯಲ್ಲಿ ಕತ್ತಲು ಕವಿದಿದ್ದರಿಂದ ಕಾಡಿನ ಸೊಬಗನ್ನು ನೋಡಲಾಗಲಿಲ್ಲ.

ಎರಡು ತಾಸುಗಳ ಕಾಲ ನಾವ್ಯಾರೂ ಒಂದೇ ಒಂದು ಶಬ್ದವನ್ನೂ ಆಡದೇ ಸಾಗಿದೆವು. ಒಂದೋ ನಮ್ಮ ಹೆಜ್ಜೆಯ ಶಬ್ಧ ಇಲ್ಲವೇ ನಮ್ಮ ಕಿಟ್‌ಬ್ಯಾಗ್‌ನಲ್ಲಿದ್ದ ಬಾಟಲ್‌ಗಳಲ್ಲಿ ನೀರು ಕಲಕುತ್ತಿದ್ದ ಶಬ್ಧ ಮಾತ್ರವೇ ಆ ನೀರವ ಮೌನವನ್ನು ಮುರಿಯುತ್ತಿತ್ತು, ಅದರಲ್ಲೂ ನಮ್ಮ ಹೆಜ್ಜೆ ಶಬ್ಧಕ್ಕಿಂತ ಬಾಟಲ್‌ನಲ್ಲಿ ನೀರು ಕಲಕುವ ಶಬ್ಧವೇ ಸ್ವಲ್ಪ ಜಾಸ್ತಿ ಕೇಳಿಸುತ್ತಿತ್ತು, ಏಕೆಂದರೆ ಕಿಟ್‌ಬ್ಯಾಗ್‌ನಲ್ಲಿದ್ದ ನೀರಿನ ಬಾಟಲ್‌ಗಳು ನಮ್ಮ ಭುಜಕ್ಕೆ ತುಂಬಾ ಹತ್ತಿರದಲ್ಲಿದ್ದವು. ಈ ಶಬ್ಧಗಳ ಬಗ್ಗೆ ನಾವು ಮೂರೂ ಜನ ಒಂದೇ ರೀತಿಯಲ್ಲಿ ಯೋಚಿಸುತ್ತಿದ್ದೆವೆಂಬುದು ನಮಗೆ ಆ ನಂತರ ಗೊತ್ತಾಯಿತು.

ಸುಮಾರು ಎರಡೂವರೆ ತಾಸುಗಳ ನಡಿಗೆಯ ನಂತರ ನಮ್ಮ ಮಾರ್ಗದರ್ಶಿ ನಿಂತುಕೊಂಡ. "ಹತ್ತು ನಿಮಿಷ ವಿಶ್ರಾಂತಿ ತೆಗೆದುಕೊಂಡು ಆಮೇಲೆ ಹೊರಡೋಣ" ಎಂದು ಹೇಳಿದ. ಕಿಟ್‌ಬ್ಯಾಗ್‌ಗಳನ್ನು ಕೆಳಗಿಟ್ಟು, ಒಂದೆರಡು ಗುಟುಕು ನೀರು ಹೀರಿ ವಿಶ್ರಾಂತಿಗಾಗಿ ಕುಳಿತುಕೊಂಡೆವು. ನಾವೀಗ ಜನವಸತಿ ಪ್ರದೇಶದಿಂದ ಬಹಳ ದೂರ ಸಾಗಿಬಂದಿದ್ದೆವಾದ್ದರಿಂದ ಸ್ವಲ್ಪ ಆರಾಮಾಗಿ ಮಾತನಾಡುವುದಕ್ಕೆ ಅಡ್ಡಿಯಿರಲಿಲ್ಲ, ಜೋರಾಗಿ ಮಾತನಾಡಿದರೂ ನಮ್ಮ ಮಾತುಗಳು ಐದಾರು ಅಡಿಗಳಾಚೆಗೆ ಕೇಳುತ್ತಿರಲಿಲ್ಲ, ಕಾಡಿನ ಮೌನವನ್ನು ಹೊರತುಪಡಿಸಿ ನಮ್ಮ ಮಾತುಗಳನ್ನು ಕೇಳಿಸಿಕೊಳ್ಳುವುದಕ್ಕೆ ಅಲ್ಲಿ ಯಾರೂ ಇರಲಿಲ್ಲ. ನಡೆಯುವಾಗ ಮೌನವಾಗಿರಬೇಕೆಂಬುದು ಅಲ್ಲಿ ಎಲ್ಲರೂ ಕಟ್ಟುನಿಟ್ಟಾಗಿ ಪರಿಪಾಲಿಸಬೇಕಾದ ನಿಯಮ. ರಾತ್ರಿವೇಳೆಯಲ್ಲಿ ಕಾಡು ಪ್ರಶಾಂತವಾಗಿರುತ್ತದೆ ಯಾದ್ದರಿಂದ ಕಾಡುಪ್ರಾಣಿಗಳು, ಪಕ್ಷಿಗಳು ವಿಶ್ರಾಂತಿ ಪಡೆಯುತ್ತಿರುತ್ತವೆ; ಅವುಗಳಿಗೆ ತೊಂದರೆ ಕೊಡುವ ಯಾವ ಉದ್ದೇಶವೂ ನಮಗಿರಲಿಲ್ಲ.

ನಾವು ಜಾಸ್ತಿಯೇನೂ ಮಾತನಾಡಲಿಲ್ಲ, ಬಹಳ ಸಮಯ ಮೌನವಾಗಿಯೇ ಇದ್ದೆವು. ಹತ್ತು ನಿಮಿಷಗಳ ನಂತರ ಇನ್ನೊಂದಿಷ್ಟು ನೀರು ಕುಡಿದು ಅಲ್ಲಿಂದ ಹೊರಟೆವು.

ನಮ್ಮ ದಾರಿ ಕೆಲವೊಮ್ಮೆ ಕಾಡಿನಲ್ಲಿ, ಕೆಲವೊಮ್ಮೆ ಹೊಲಗದ್ದೆಗಳ ನಡುವೆ ಮತ್ತೆ ಕೆಲವೊಮ್ಮೆ ದಟ್ಟ ಪೊದೆಗಳ ನಡುವೆ ಸಾಗಿತ್ತು, ಇಡೀ ಕಾಡುದಾರಿ ಕಲ್ಲು-ಬಂಡೆಗಳಿಂದ ಕೂಡಿತ್ತು, ಕತ್ತಲಲ್ಲಿ ಕೆಲವೊಮ್ಮೆ ಮರದ ಬೊಡ್ಡೆಗೆ, ಮತ್ತೆ ಕೆಲವೊಮ್ಮೆ ಕಲ್ಲುಗಳಿಗೆ ಎಡವುತ್ತಿದ್ದೆವು; ಒಮ್ಮೊಮ್ಮೆ ದಾರಿ ತಪ್ಪಿ ಕಾಡಿನೊಳಗೆ ನುಗ್ಗಿಬಿಡುತ್ತಿದ್ದೆವು. ನಮ್ಮಲ್ಲಿ ಯಾರೇ ಒಬ್ಬರಿಗೆ ಅಂಥ ಏನೇ ಅಡಚಣೆ ಎದುರಾದರೂ ಎಲ್ಲರೂ ನಿಂತು, ಸರಿಪಡಿಸಿಕೊಂಡು ಜೊತೆಯಾಗಿ ಮುನ್ನಡೆಯುತ್ತಿದ್ದೆವು. ಎಡವಿದ ವ್ಯಕ್ತಿ ಉಳಿದವರಿಗೆ 'ಹೋಗೋಣ' ಎಂಬ ಸೂಚನೆ ಕೊಟ್ಟ ಮೇಲಷ್ಟೇ ಎಲ್ಲರೂ ಹೊರಡುತ್ತಿದ್ದೆವು. ಇದೆಲ್ಲಾ ಯಾವುದೇ ಮಾತುಚರ್ಚೆಗಳಿಲ್ಲದೇ ತನ್ನಿಂದ ತಾನೇ ಬಹಳ ನಾಜೂಕಾಗಿ ನಡೆಯುತ್ತಿತ್ತು.

ಹೀಗೆ ಮತ್ತೊಂದು ತಾಸಿನ ಪಯಣದ ನಂತರ ನಮ್ಮಲ್ಲೊಬ್ಬ 'ಹ್ವಾನು...!' ಎಂದು ಕೂಗಿದ. ಮರುಕ್ಷಣದಲ್ಲೇ ನಾವೆಲ್ಲರೂ ಪಕ್ಕದ ಪೊದೆಗಳಿಗೆ ನುಗ್ಗಿ ನೆಲದ ಮೇಲೆ ಅವಿತುಕೊಂಡೆವು.

(ಮುಂದುವರೆಯುವುದು)

ಅಪ್ಪಟ ಹೋರಾಟಗಾರ್ತಿ ದುಲೈಖಾ

"ಇದರಲ್ಲಿ ನನ್ನದಾಗಲಿ, ನನ್ನ ಗಂಡನದಾಗಲಿ, ನನ್ನ ಗಂಡು ಮಕ್ಕಳದಾಗಲಿ ಏನು ತಪ್ಪಿದೆ? ದಿನದಿನವೂ ಕ್ಷಣಕ್ಷಣವೂ ನಾವು ಅನುಭವಿಸುವ ಅಪಮಾನದ ಹಿಂಸೆ, ಭಯದ ವಾತಾವರಣಕ್ಕಿಂತ ಸಾವೇ ಎಷ್ಟೋ ಮೇಲು ಎನಿಸುತ್ತಿದೆ. 'ಅಮ್ಮಾ, ನಾಳೆ ನಾವು ಬದುಕಿರುತ್ತೇವೋ ಇಲ್ಲವೋ, ಇಂದೇ ಹೊಟ್ಟೆತುಂಬ ಉಂಡು, ಮನತುಂಬ ಮಾತಾಡಿ ಮಲಗೋಣ' ಎನ್ನುವ ಮಕ್ಕಳಿಗೆ ನಾನು ಹೇಗೆ ಸಮಾಧಾನ ಹೇಳಲಿ? ಹೀಗೆ ಇಂಚಿಂಚೇ ನಮ್ಮನ್ನು ಕೊಲ್ಲಲು ಈ ಧರ್ಮದ ಮುಖಂಡರಿಗೆ, ಅವರ ಮಾತಿಗೆ ಬೆಲೆನೀಡುವ ನೆರೆಹೊರೆಯವರಿಗೆ ಅಧಿಕಾರ ಕೊಟ್ಟವರಾದರೂ ಯಾರು?. . . . . ಯಾರು?"

- ಎಂದು ದುಲೈಖಾ ಎಳೆಎಳೆಯಾಗಿ ದುಗುಡವನ್ನು ತೆರೆದಿಡುತ್ತಿದ್ದರೆ, ಕೇಳುತ್ತಿದ್ದ ನಮ್ಮ ಮೈಯ ರೋಮ ನಿಮಿರಿನಿಂತಿತ್ತು. ದಿನವಲ್ಲ, ವಾರವಲ್ಲ, ತಿಂಗಳೂ ಅಲ್ಲ, ಕಳೆದ ಮೂರು ವರ್ಷಗಳಿಂದ ತಪ್ಪದ ಈ ಹಿಂಸೆಯ ರೌದ್ರತೆಯ ಬಗ್ಗೆ ಆಕ್ರೋಶ, ಇಂತಹ ಹಿಂಸೆಯ ನಡುವೆಯೂ ಬದುಕಿ ತೋರಿಸುವ ಛಲ ಹೊತ್ತ ದುಲೈಖಾ ಮತ್ತವಳ ಕುಟುಂಬದವರ ಕುರಿತ ಅಭಿಮಾನ, ಇಂತಹ ಈ ಕುಟುಂಬಕ್ಕೆ ನಾವು ಏನು ಮಾಡಬಹುದು ಎಂಬ ಪ್ರಶ್ನೆ ಎಲ್ಲವೂ ಏಕಕಾಲಕ್ಕೆ ಒಡಮೂಡಿದ್ದವು.

ದುಲೈಖಾ ಕುಂದಾಪುರ ತಾಲೂಕಿನ ಪುಟ್ಟ ಹಳ್ಳಿಗೆ ಸೇರಿದಾಕೆ. ಅವಳದು ದಿನಗೂಲಿ ದುಡಿಮೆಯಲ್ಲಿ ಬದುಕುವ ಕುಟುಂಬ. ಆಕೆ ಇರುವ ಮನೆಯ ಸುತ್ತಮುತ್ತೆಲ್ಲ ಮುಸ್ಲಿಮರ ಮನೆಗಳೇ. ಇವಳ ಮಗಳು ಒಂದು ದಿನ ಪ್ರೀತಿಸಿದ ಹುಡುಗನ ಜೊತೆ ಹೊರಟುಹೋದಳು; ಹೊಸಗೂಡು ಕಟ್ಟಿಕೊಂಡಳು. ಆ ಹುಡುಗ ಹಿಂದೂ. ಇಬ್ಬರೂ ಇಂದು ಪಕ್ಕದ ಊರಲ್ಲಿ ನೆಮ್ಮದಿಯ ಜೀವನ ಮಾಡುತ್ತಿದ್ದಾರೆ; ಆಗೀಗ ದಾರಿಯಲ್ಲಿ ಎದುರಾಗುವ ತಾಯಿ-ಮಗಳು ಸುಖ-ದುಃಖ ಹಂಚಿಕೊಳ್ಳುತ್ತಿದ್ದಾರೆ. 'ಎಲ್ಲಿದ್ದರೇನು, ಮಗಳು ಸುಖವಾಗಿದ್ದಾಳೆ. ಅದು ಸಾಕು' ಎಂಬ ಹೆತ್ತವರ ನೆಮ್ಮದಿಯನ್ನು ಅವರ ಧಾರ್ಮಿಕ ಮುಖಂಡರು ಇಂದಿಗೂ ಸ್ವೀಕರಿಸಲು ಸಿದ್ಧರಿಲ್ಲ, ಅದರ ಪರಿಣಾಮವೇ ದುಲೈಖಾ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರದ ಶಿಕ್ಷೆ! ನೆರೆಹೊರೆಯ ಯಾರೂ ಈ ಕುಟುಂಬದೊಡನೆ ಮಾತಾಡಬಾರದು, ಯಾವುದೇ ವ್ಯವಹಾರ ಮಾಡಬಾರದು ಎಂಬ ತಾಕೀತು. ಅದನ್ನು ಕುರಿಗಳಂತೆ ಒಪ್ಪಿದ ಕುಟುಂಬಗಳು ದುಲೈಖಾ ಕುಟುಂಬದ ಸದಸ್ಯರು ಎದುರಾದೊಡನೆ ಕ್ಯಾಕರಿಸಿ ಉಗುಳುವುದು, ಯಾರನ್ನೋ ಉದ್ದೇಶಿಸಿ ಬಯ್ಯುವಂತೆ ಇವರನ್ನು ಬೈಯುವುದು, ಇಲ್ಲವೇ ಮುಖ ತಿರುಗಿಸುವುದು, ಮನೆಯ ಕಿಟಕಿ ಪರದೆಯನ್ನು ಎಳೆದುಕೊಳ್ಳುವುದು, ರಾತ್ರಿ ವೇಳೆ ಇವರ ಮನೆಹಂಚಿಗೆ ಕಲ್ಲು ಒಡೆಯುವುದು.... ಹೀಗೇ ಹತ್ತು ಹಲವು ಕಿರುಕುಳಗಳನ್ನು ನೀಡುವ ಸ್ಯಾಡಿಸ್ಟ್‌ರಾಗಿದ್ದಾರೆ. ಇದರಲ್ಲಿ ವೃದ್ಧರಾದಿಯಾಗಿ ಚಿಳ್ಳೆಪಿಳ್ಳೆಗಳೂ ಹೊರತಲ್ಲ!

ಇಂತಹ ವಿಷಮ ವಾತಾವರಣದಿಂದ ರೋಸಿಹೋಗಿದ್ದರೂ, ಇರುವ ಒಂದೇ ಒಂದು ಸ್ವಂತ ಮನೆಯಿಂದ ಹೊರಹೋಗಿ ನಿರ್ಗತಿಕರಾಗುವ ಸ್ಥಿತಿಯನ್ನು ಸ್ವೀಕರಿಸಲು ಸಿದ್ಧವಿಲ್ಲದ ಕುಟುಂಬ ದುಲೈಖಾಳದ್ದು. 'ಎತ್ತಿಗೆ ಜ್ವರಬಂದರೆ ಎಮ್ಮೆಗೆ ಬರೆ ಎಳೆದರು' ಎಂಬ ಮಾತಿಗೆ ಇದೇ ಅರ್ಥ ಇರಬಹುದೇ? 'ಅನ್ಯ ಧರ್ಮೀಯನನ್ನು ವಿವಾಹವಾದ ತಮ್ಮ ಮಗಳಿಗೆ ಹೆತ್ತವರು ಬಹಿಷ್ಕಾರ ಹಾಕಬೇಕು. ಅವಳೊಂದಿಗೆ ಯಾವುದೇ ಸಾಮಾಜಿಕ, ಭಾವನಾತ್ಮಕ ಸಂಬಂಧ ಹೊಂದಿರಬಾರದು. ಅವಳ ಮನೆಗೆ ಇವರಾಗಲಿ, ಇವರ ಮನೆಗೆ ಅವರಾಗಲಿ ಹೋಗಿ-ಬರುವುದು ನಡೆಯಬಾರದು.' ಹಾಗಂತ ಒಪ್ಪಂದ ಪತ್ರಕ್ಕೆ ಸಹಿ ಹಾಕಿದಲ್ಲಿ ದುಲೈಖಾ ಕುಟುಂಬಕ್ಕೆ ತಾವು ಹಾಕಿದ ಸಾಮಾಜಿಕ ಬಹಿಷ್ಕಾರವನ್ನು ಹಿಂತೆಗೆಯುವ ಆಮಿಷ ಜಮಾತಿನದು. ಇಷ್ಟಿದ್ದರೂ ಕರುಳಕುಡಿಗೆ ಬಹಿಷ್ಕಾರ ಹಾಕುವುದಕ್ಕಿಂತ ಸಾಮಾಜಿಕ ಬಹಿಷ್ಕಾರದ ಈ ಕಹಿ ವಿಷವನ್ನು ತಾವು ಕುಡಿಯುವುದೇ ಹಿತವೆಂದು ಬಗುವ ದುಲೈಖಾ ನಮ್ಮ ನಡುವಿನ ಮಾನವೀಯತೆಗೆ ಜ್ವಲಂತ ನಿದರ್ಶನ.

ದುಲೈಖಾಳ ಬದುಕನ್ನು ಒಂದಿಷ್ಟಾದರೂ ಸಹನೀಯಗೊಳಿಸಬೇಕೆಂಬ ತುಡಿತದಿಂದ ಮೊದಲು ಕೋಮು ಸೌಹಾರ್ದ ವೇದಿಕೆಯ ಮುಖಂಡರನ್ನು ಕರೆದು ವಿವರಿಸಿದ್ದಾಯ್ತು. 'ನನಗೆ ಆ ಊರಿನ ಮುಸ್ಲಿಂ ಲೇಖಕರ ಸಂಘಟನೆಯ ಮುಖಂಡ ಪರಿಚಿತ. ಆತ ಆ ಊರಿನ ಜಮಾತ್‌ನವರೊಡನೆ ಮಾತಾಡಿ ಚಿಟಿಕೆ ಹೊಡೆದಂತೆ ಸಮಸ್ಯೆಗೆ ಪರಿಹಾರ ತೋರಬಲ್ಲ' ಎಂದು ಬಣ್ಣದ ಚಿತ್ತಾರಗಳನ್ನು ಅವರು ಬಿಡಿಸಿಬಿಟ್ಟರು. ಸಂಭ್ರಮದಿಂದ ಅದನ್ನು ಆಕೆಗೆ ನಾವು ಅರುಹಿದ್ದೂ ಆಯಿತು. ಒಂದೆರಡು ದಿನವಲ್ಲ, ವಾರಗಳೇ ಉರುಳಿದರೂ ಯಾವ ಬೆಳವಣಿಗೆಗಳೂ ನಡೆಯದಾದಾಗ, ವೇದಿಕೆಯ ಮುಖಂಡರಿಗೆ ಮತ್ತೆ ನೆನಪಿಸಿದೆವು. 'ಹೇಳಿದ್ದೇವೆ, ಅವರನ್ನು ಕರೆಸುತ್ತಾರೆ. ಅದಕ್ಕೂ ಮೊದಲು ದುಲೈಖಾ ಒಂದು ಮನವಿಯನ್ನು ಅವರಿಗೆ ಕೊಡಲಿ' ಎಂದರು. ಅದೂ ಮಾಡಿ, ವಾರಗಳೇ ಉರುಳಿದರೂ ಹುಲ್ಲುಕಡ್ಡಿಯಷ್ಟೂ ಬೆಳವಣಿಗೆ ಆಗಲಿಲ್ಲ.

ಬೇಸತ್ತು ದುಲೈಖಾ ಕುಟುಂಬಕ್ಕೆ ನೆರವಾಗಲು ಮುಸ್ಲಿಂ ಯುವಕರ ಮತ್ತು ರಾಜಕೀಯ ಮುತ್ಸದ್ದಿಗಳ ಸಂಪರ್ಕವಿದ್ದ ವ್ಯಕ್ತಿಯನ್ನು ಕೋರಿದ್ದಾಯ್ತು. ಅವರೂ ರಂಗುರಂಗಿನ ಪರಿಹಾರದ ಭರವಸೆ ನೀಡಿದರು. ಪ್ರಗತಿ ಮಾತ್ರ ಕಾಣಲಿಲ್ಲ. "ಒಮ್ಮೆ ನಾವೇ ಖುದ್ದಾಗಿ ದುಲೈಖಾ ಊರಿಗೆ ಹೋಗಿ ವಾಸ್ತವಾಂಶ ತಿಳಿಯೋಣ" ಎಂದೆವು. ರಜಾ ದಿನಗಳಲ್ಲಿ ಆರೋಗ್ಯದಿಂದಿರುವ ತನ್ನ ತಾಯಿಯನ್ನು ಭೇಟಿಯಾಗುವುದು ಈ ಮುಖಂಡರಿಗೆ ಮುಖ್ಯವಾಯಿತೇ ಹೊರತು, ಚಿತ್ರಹಿಂಸೆಯುಣ್ಣುತ್ತಿರುವ ದುಲೈಖಾ ಅಲ್ಲ! "ನೀವಿಷ್ಟು ತಡಮಾಡಿದರೆ, ನಾಳೆ ಅವರು ಈ ಜಗತ್ತಿನಲ್ಲೇ ಇರದಿದ್ದರೆ ನಮ್ಮನ್ನು ನಮಗೆ ಕ್ಷಮಿಸಿಕೊಳ್ಳಲಾದೀತೇ?" ಎಂದೆ. ಅದಕ್ಕೆ "ಆ ನರಕವನ್ನು ಅನುಭವಿಸಿಯೂ ಮೂರು ವರ್ಷ ಬದುಕಿರುವವರು ಖಂಡಿತ ಇನ್ನು ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ" ಎಂಬ ಭರವಸೆ ಈ ನಾಯಕರದು! ಸಾಲದ್ದಕ್ಕೆ "ಬ್ಯಾರಿಗಳನ್ನು ಹಾಗೆ ನೇರವಾಗಿ ಮುಟ್ಟಲಾಗುವುದಿಲ್ಲ" ಎಂಬ ಎಚ್ಚರಿಕೆ ಬೇರೆ. ಅನ್ಯಧರ್ಮೀಯರು ಇಂತಹ ವಿಚಾರಗಳಲ್ಲಿ ಪ್ರವೇಶಮಾಡಿ, ಸಮಸ್ಯೆಯನ್ನು ಜಟಿಲಗೊಳಿಸುವುದು ಬೇಡವೆಂದೇ ಇವರುಗಳ ಮೊರೆಹೊಕ್ಕ ನಮಗೆ ಸಿಕ್ಕ ದೊಡ್ಡ ಎಚ್ಚರಿಕೆ "ಬ್ಯಾರಿಗಳನ್ನು ಹಾಗೆಲ್ಲ ಮುಟ್ಟಲಾಗುವುದಿಲ್ಲ"!

"ನೀವೂ ಬ್ಯಾರಿಗಳೇ ಅಲ್ಲವೇ" ಎಂಬ ಮರುಪ್ರಶ್ನೆಗೆ "ಒಂದು ಜಿಲ್ಲೆಯ ಬ್ಯಾರಿಗಳು ಇನ್ನೊಂದು ಜಿಲ್ಲೆಯ ಬ್ಯಾರಿಗಳ ಸಮಸ್ಯೆಗೆ ನೇರವಾಗಿ ಧುಮುಕುವಂತಿಲ್ಲ, ಅದೇನಿದ್ದರೂ ಕ್ರಮಪ್ರಕಾರ ನಡೆಯಬೇಕು" ಎಂಬ ಉತ್ತರ! ಹೀಗಾಗಿ ಒಂದು ವರ್ಷವೇ ಉರುಳಿ ಹೋಗಿದೆ, ಕ್ರಮಪ್ರಕಾರದಂತೆ ಅವರ ಪರಿಹಾರ ನಡೆಯುತ್ತಿರಬಹುದು! ಅವರೆಲ್ಲರ ಸ್ಮೃತಿಪಟಲದಿಂದ ದುಲೈಖಾ, ಅವಳ ದುರಂತ ಇನ್ನಿಲ್ಲದಂತೆ ಅಳಿಸಿಹೋಗಿದೆ. ಏಕೆಂದರೆ ಹತ್ತು ಹಲವು ದುಲೈಖಾಗಳು ನಮ್ಮ ಸುತ್ತಮುತ್ತ ಹುಟ್ಟಿಕೊಂಡಿದ್ದಾರೆ; ಜೆಹಾದ್ ವಿವಾಹಗಳಾದವೆಂದು ಬೊಬ್ಬೆಹೊಡೆವ ಗುಂಪು ಒಂದೆಡೆಗೂ, ಇನ್ನೊಂದೆಡೆ ತಮ್ಮ ಸಮುದಾಯಕ್ಕೆ ಹೊಸ ಸೇರ್ಪಡೆ ಆಯಿತೆಂದು ಸಂಭ್ರಮಿಸುವ ಗುಂಪೂ ತಮ್ಮ ಹಳೆವಂಡಗಳಲ್ಲಿರುವಾಗ ದುಲೈಖಾ ನೆನಪಾಗುವುದಾದರೂ ಹೇಗೆ ಸಾಧ್ಯ?

● ಸಬಿಹಾ ಭೂಮಿಗೌಡ

▶▶ 2 RAY ಜಾರಿಗೆ ಬಂದರೆ....

ಉದ್ಯಮಿ ಬಂಡವಾಳ ಹೂಡುತ್ತಾರೆಂದರೆ ಇತರ ಉದ್ಯಮಗಳಿಗಿಂತ ಇದರಲ್ಲಿ ಅವರಿಗೆ ಹೆಚ್ಚಿನ ಲಾಭದ ಖಾತರಿ ಇದೇ ಎಂತಲೇ ಅರ್ಥ. ಅಂದರೆ ಈ ಎಲ್ಲಾ 'ಜನಪರ' ಯೋಜನೆಗಳು ಪರೋಕ್ಷವಾಗಿ ಸರ್ಕಾರದ ಸಂಪತ್ತು ಮತ್ತು ಆದಾಯವನ್ನು 'ಜನಹಿತ'ದ ಹೆಸರಲ್ಲಿ ಖಾಸಗಿಯವರಿಗೆ ಹಸ್ತಾಂತರಿಸುತ್ತದೆ ಎಂದೇ ಅರ್ಥ! ಈ ಪ್ರಕ್ರಿಯೆಯಲ್ಲಿ ಜನರ ಕಣ್ಣಿ ಒರೆಸಲು ಒಂದಷ್ಟು ಜನರಿಗೂ ಮೂಳೆಚೂರನ್ನು ಎಸೆಯುತ್ತಾರೆ. ಅದನ್ನೇ 'ಜನಹಿತ' ಎಂದು ಸರ್ಕಾರ ಮತ್ತು ಮಾಧ್ಯಮಗಳು ತುತ್ತೂರಿ ಬಜಾಯಿಸುತ್ತವೆ.

ಈ ರೇ ಯೋಜನೆಯೂ ಅಷ್ಟೆ. 10 ಲಕ್ಷ ಕೋಟಿ ರೂಪಾಯಿಗಳ ಈ ಯೋಜನೆಗೆ ಅರ್ಧದಷ್ಟನ್ನು ಖಾಸಗಿ ರಿಯಲ್ ಎಸ್ಟೇಟ್ ಉದ್ಯಮಿಗಳು ಮತ್ತಿತರ ಉದ್ಯಮಿಗಳು ಹೂಡಲಿದ್ದಾರೆ ಎಂದು ನಿರೀಕ್ಷಿಸಲಾಗಿದೆ. ಲಾಭವಿಲ್ಲದೆ ಯಾವ ಕೆಲಸವನ್ನೂ ಮಾಡದ ಈ ಉದ್ಯಮಿಗಳಿಗೆ ಈ ರಾಜೀವ್ ಗಾಂಧಿ ಆವಾಸ್ ಯೋಜನೆಯಿಂದ ಹೇಗೆ ಲಾಭವಾಗಲಿದೆ?

ಇದನ್ನು ಅರ್ಥ ಮಾಡಿಕೊಂಡರೆ ಸಾಕು ಈ ಉದ್ಯಮಿಗಳ ಉದ್ದೇಶ ಮತ್ತು ಕಾಂಗ್ರೆಸ್ ಮತ್ತು ಸೋನಿಯಾ ಗಾಂಧಿಯವರ ಜನಪರತೆಯ ಅಸಲಿ ಹಿಕ್ಮತ್ತು ಅರ್ಥವಾಗುತ್ತದೆ. ಈ ಯೋಜನೆಯಡಿ ಸರ್ಕಾರವೇ ಖಾಸಗಿಯವರಿಗೆ ಭೂಮಿ, ನೀರು, ರಿಯಾಯಿತಿ ದರದಲ್ಲಿ ಬಂಡವಾಳ ಒದಗಿಸಿಕೊಡುತ್ತದೆ. ಅಂದರೆ ಹೆಚ್ಚೂ ಕಡಿಮೆ ಅರ್ಧ ಖರ್ಚನ್ನು ಸರ್ಕಾರವೇ ಮಾಡುತ್ತದೆ. ಇನ್ನು "ಅವರು" ಕಟ್ಟುವ ಮನೆಗಳಲ್ಲಿ ಶೇ.50 ಭಾಗವನ್ನು ಅಥವಾ ಕೆಲವು ಕಡೆ ಕೇವಲ ಶೇ.30ರಷ್ಟು ಭಾಗವನ್ನು ಮಾತ್ರ ಹಳೆಯ ಸ್ಲಂ ನಿವಾಸಿಗಳಿಗೆ ಕೊಟ್ಟು ಉಳಿದರ್ಧ ಭಾಗದಲ್ಲಿ ಈ ರಿಯಲ್ ಎಸ್ಟೇಟ್ ಉದ್ಯಮಿಗಳು ತಮಗೆ ಬೇಕಾದ ಮಹಲು-ಮಾಲ್‌ಗಳನ್ನು ಅಥವಾ ವಿಲಾಸಿ ಮನೆಗಳನ್ನು ಕಟ್ಟಿ ಮಾರಿಕೊಳ್ಳಬಹುದು. ಇದಕ್ಕಾಗಿ ನಗರದಲ್ಲಿ ಇಂತಿಂಥಾ ಜಾಗದಲ್ಲಿ ಇಂತಿಷ್ಟೇ ಎತ್ತರದ ಕಟ್ಟಡಗಳನ್ನು ಕಟ್ಟಬೇಕೆಂಬ (Floor Space Index-FSI) ನಿಯಮಗಳನ್ನೂ ಸಡಿಲಿಸಲಾಗುತ್ತಿದೆ. ಇದರಿಂದಾಗಿ ಅಪಾಯಕಾರಿ ಹೈರೈಸ್ (ಅತಿ ಎತ್ತರದ) ಕಟ್ಟಡಗಳು ತಲೆ ಎತ್ತುತ್ತವೆ ಮತ್ತು ಹೇಗೋ ಬದುಕುತ್ತಿದ್ದ ಸ್ಲಂ ನಿವಾಸಿಗಳನ್ನು ಶಾಶ್ವತ ಅಪಾಯಕ್ಕೆ ದೂಡುತ್ತದೆ.

ಈ 'ಜನಹಿತ' ಕಾರ್ಯದಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳಿಗಾಗುವ ಲಾಭವನ್ನು ನೋಡಿ. ಇಂದು ಮಹಾನಗರಗಳಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳು ಎದುರಿಸುತ್ತಿರುವ ಅತಿ ದೊಡ್ಡ ಸಮಸ್ಯೆ ಭೂಮಿಯದು. ನಗರಗಳ ಬೆಳವಣಿಗೆಯಾಗುತ್ತಾ ಈಗ ಸ್ಲಂಗಳಿರುವ ಜಾಗಕ್ಕೆ ಕೋಟ್ಯಾಂತರ ರೂಪಾಯಿ ಬೆಲೆಬಂದಿದೆ. ಆದರೆ ಅಲ್ಲಿಂದ ಸ್ಲಂ ಎತ್ತಂಗಡಿಯಾಗದೆ ಆ ಜಾಗ ಅವರಿಗೆ ಸಿಗುತ್ತಿಲ್ಲ. ಈಗ ಸ್ಲಂ ಜನರಿಗೆ ಮನೆ ಕಟ್ಟಿಸಿಕೊಡುವ ಕ್ಯಾರೆಟ್ಟನ್ನು ಅವರ ಮುಂದೆ ತೂಗಿಬಿಟ್ಟು ತಮ್ಮ ಎತ್ತಂಗಡಿಯನ್ನು ತಾವೇ ಒಪ್ಪಿಕೊಳ್ಳುವಂತೆ ಚಾಣಾಕ್ಷ ಯೋಜನೆಯಾಗಿ ಈ ರೇ ರೂಪಿತವಾಗಿದೆ. ಇದರಿಂದಾಗಿ ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಅರ್ಧಕ್ಕಿಂತಲೂ ಹೆಚ್ಚು ಜಾಗ ಬಿಟ್ಟಿಯಾಗಿ ದಕ್ಕುತ್ತದೆ. ಈ ರೇ ಯೋಜನೆಯ ಪ್ರಕಾರ ಮನೆ ಪಡೆದುಕೊಂಡ ಸ್ಲಂ ಜನರಿಗೆ ಮನೆ ಒಡೆತನದ ಹಕ್ಕುಪತ್ರವೂ ಸಿಗುತ್ತದೆ ಎಂಬುದೇನೋ ನಿಜ. ಆದರೆ ಉಳಿದ ಮುಕ್ಕಾಲು ವಾಸಿ ಭೂಮಿಯ ಒಡೆತನ ರಿಯಲ್ ಎಸ್ಟೇಟ್ ಉದ್ಯಮಿಗಳದ್ದೇ ಆಗುತ್ತದೆ. ಅಷ್ಟು ಮಾತ್ರವಲ್ಲ ಈ ಹಿಂದೆ ಸ್ಲಂ ಜನರಿಗೆ ಅಲಾಟ್ ಆದ ಮನೆಗಳನ್ನು ಅದರ ಫಲಾನುಭವಿಗಳೂ ಮಾರುವಂತಿರಲಿಲ್ಲ. ಈಗ ಸ್ಲಂ ಜನರಿಗೇ ಹಕ್ಕುಪತ್ರ ಕೊಡುವುದರಿಂದ ಈ ರಿಯಲ್ ಎಸ್ಟೇಟ್ ಉದ್ಯಮಿಗಳು ತಮ್ಮ ಪಾರಂಪರಿಕ ರೌಡಿಸಮ್, ಹಣಬಲ ಇನ್ನಿತ್ಯಾದಿಗಳನ್ನು ಬಳಸಿ ಬಡ ಸ್ಲಮ್ಮಿಗರಿಂದ ಕ್ರಯಪತ್ರವನ್ನು ಬರೆಸಿಕೊಂಡು ಸಂಪೂರ್ಣ ಜಮೀನಿಗೆ ಒಡೆಯರಾಗಬಹುದು. ಇದು ಆಗಲಿಲ್ಲವೆಂದರೆ ಇಲ್ಲಿ ವಾಸಿಸುತ್ತಿರುವ ಸ್ಲಮ್ಮಿಗರಿಗೆ ಬೇರೆಡೆ ಉತ್ತಮ ಮನೆಗಳನ್ನು ಕಟ್ಟಿಸಿಕೊಡುವ ಹೆಸರಲ್ಲಿ ಅವರನ್ನು ಸಂಪೂರ್ಣವಾಗಿ ಅಲ್ಲಿಂದ ಒಕ್ಕಲೆಬ್ಬಿಸಿ ಇಡೀ ಭೂಮಿಯನ್ನು ತಮ್ಮ ವಶಮಾಡಿಕೊಳ್ಳಬಹುದಾದ ಅವಕಾಶವೂ ಈ 'ರೇ'ಯಲ್ಲಿದೆ.

ಇದು ಈ ರಾಜೀವ್ ಗಾಂಧಿ ಆವಾಸ್ ಯೋಜನಾ- ರೇ-ಯ ಅಸಲಿ ಮುಖ. ಈಗ ಹೇಳಿ ಕಾಂಗ್ರೆಸ್‌ನೊಳಗೆ ಈಗಲೂ 'ಎಡಪಂಥ' ಎನ್ನುವುದು ಇದೆಯೇ? ಜನ ಒಮ್ಮೆ ಎಚ್ಚೆತ್ತುಕೊಂಡಮೇಲೆ ಹಲವು ಜನವಿರೋಧಿ ಕೆಲಸಗಳನ್ನು ಮೊದಲಿನಂತೆ ಖುಲ್ಲಂಖುಲ್ಲಾ ಮಾಡಲು ಆಗುವುದಿಲ್ಲ. ಇಂಥಾ ಜನದ್ರೋಹಿ ಕೆಲಸಗಳಿಗೆ ಯಾರು ಯಶಸ್ವಿಯಾಗಿ 'ಜನಪರತೆ'ಯ ಮುಖವಾಡವನ್ನು ಹೊದಿಸಿ ಜನರ ಸಮ್ಮತಿ ಪಡೆದುಕೊಳ್ಳಬಲ್ಲರೆಂಬುದೇ ಈ ಚುನಾವಣಾ ಪ್ರಜಾತಂತ್ರ ಆಳುವ ಪಕ್ಷಗಳ ಮುಂದಿಟ್ಟಿರುವ ಸವಾಲು. ಅದನ್ನು ಸೋನಿಯಾ ಗಾಂಧಿಯ ಕಾಂಗ್ರೆಸ್ ನರಸಿಂಹರಾವ್ ಕಾಲಕ್ಕಿಂತ ಚೆನ್ನಾಗಿ ಮಾಡುತ್ತಿದೆ. ಅಂದರೆ ಜನರಿಗೆ ಚೆನ್ನಾಗಿ ಟೋಪಿ ಹಾಕುತ್ತಿದೆ. ಹಾಗಿದ್ದ ಮೇಲೆ ಸೋನಿಯಾ ಕಾಂಗ್ರೆಸ್ಸಿನ ಯಶಸ್ಸಿನ ಬಗ್ಗೆ ಆಳುವ ವರ್ಗಗಳು ಸಂಭ್ರಮ ಪಟ್ಟುಕೊಳ್ಳಬೇಕೇ ವಿನಃ ಜನರೇಕೆ ಸಂಭ್ರಮಪಡಬೇಕು?

ಹುಲ್ಲಿಗೆ ಆಸರೆ ಬೇಕಿಲ್ಲ

ನಾನೇನು ಮರವಾಗಬೇಕಿಲ್ಲ
ನೆರಳು ನೀಡದ ನಿರಾಶೆ
ಪಡ್ಬೇಕಿಲ್ಲ;
ನನಗ್ಯಾವ ಮಹದಾಸೆ?
ನಿಜ ಹೇಳಬೇಕೆಂದರೆ
ಹುಲ್ಲಿಗೆ ಆಸರೆ ಬೇಕಿಲ್ಲ

ಹಚ್ಚ ಹಸಿರ ಉಡುಗೆ
ಹೊತ್ತ ನೆಲವೇ ಬೆರಗು

ಹಾಸು ನಿಮ್ಮ ಮೈಗೆ


ಬೆನ್ನು ಕೊಟ್ಟಾಗಲೊಮ್ಮೆ
ನನ್ನದೋ ಊರ್ಧ್ವಾಸನ,
ಕೂರ್ಮಾಸನ

ಮೇಲೆ ನೋಡುತ್ತೇನಾದರೂ
ಮುಗಿಲ ತಂಟೆ ಬೇಕಿಲ್ಲ
ನೆಲವೇ ಸಾಕು
...ಯಲೋ ನರಳಲೋ?

ಎರಡೇ ಬೆರಳು ಸಾಕು
ಕತ್ತು ಹಿಚುಕಲು

ಬೀಜ ಚೆಲ್ಲಿರುವೆನೆಲ್ಲಾ
ಅದರ ಲೆಕ್ಕ ನಿಮಗೆ
ಸಿಗುವುದೇ ಇಲ್ಲ!

ಸಾಯಿಸುವುದಷ್ಟೆ ಗೊತ್ತು
ನಿಮಗೆ
ಉಳಿಸುವವರ ಹಂಗು
ಬೇಕಿಲ್ಲ ನನಗೆ
ಆಸರೆಗೆ ಯಾರ
ಅಂಗಲಾಚುವುದಿಲ್ಲ
ನಿಜ ಹೇಳಬೇಕೆಂದರೆ
ಹುಲಿಗೆ ಆಸರೆ ಬೇಕಿಲ



ಅಂತೂ ಸ್ವಾಮಿಗಳು ದಲ್ಲಾಳಿಗಳಾದ್ರು ಅನ್ನು

ಆರಾಮವಾಗಿದ್ದ ಜುಮ್ಮಿಗೆ ದುತ್ತನೆ ಪಂಚಾಯ್ತಿ ನಾವಣೆ ಎದುರು ಬಂದ ಸುದ್ದಿ ಕೇಳಿ ಲಿಗೊಳಗಾದಳು. ಏಕೆಂದರೆ ಅವಳ ಎದುರು ವನ್ನಾದರೂ ನಿಲ್ಲಿಸಿ ಅವಳನ್ನು ಸೋಲಿಸಬೇಕೆಂದು ಷ್ಟು ಹುಡುಗರು ತಯಾರಿ ನಡೆಸಿದ್ದರು. ಅದನ್ನ ಕೊಂಡ ಆಕೆ,

"ಪಂಚಾತಿ ಮೆಂಬ್ರುಗಿರಿ ನಮ್ಮಪ್ಪನ ಮನೆ ಆಸ್ತಿನೆ? ದರೋಯ್ತದೆ. ನನೆದ್ರಿಗೆ ನಿಂತು ಗೆಲ್ಲೊ ಅಂಥೋಳು ಊರಲ್ಯಾವಳವ್ಳೆ ನಾನು ನೋಡೇ ಬುಡ್ತಿನಿ" ಎಂದು ತನಾಡಿಕೊಂಡು ಬಂದಳು.

"ಲೇ ಜುಮ್ಮಿ, ಕಾಂಗ್ರೆಸ್ನಿಂದ ನಿಂತಗಳೈ ಗೆಲ್ತಿ" ಎಂದ ಸೀರ.

"ಕಾಂಗ್ರೆಸ್ ಪಾರ್ಟಿ ಹಾಳುಬಿದ್ದ ಮನಿಯಾಗ್ಯದೆ. ಅಲ್ಲಿ ಯಂಗೆ ಗೆಲ್ತಳೊ?" ಎಂದ ಉಗ್ರಿ.

"ಅಂಬರೀಸೇನೊ ಇಂಟ್ರೆಸ್ ತಗಂಡವ್ರನಂತೆ. ಕರಕಂಡು ಬಂದ್ರಾಯ್ತು."

"ಯಮ್ಮೆಲ್ಲೆ ಯಲಕ್ಷನ್ನಿಗೇ ಬರದೋನು ಪಂಚಾತಿ ಮೆಂಬ್ರ ಚುನಾವಣೆಗೆ ಬಂದನೇ?"

"ಬರದೇಯಿದ್ರು ಅವ್ರುನ ಸಪೋಟು ಜುಮ್ಮಿಗದೆ ಅಂದ್ರೆ ಗೆಲ್ಲದಿಲವೇನ್ಲ?"

ಕಟ್ಟೆಪುರಾಣ

ಯ ಲು ಸೀ ಮೆ

▶ ಬಿ. ಚಂದ್ರೇಗೌಡ

"ಆ ಕಾಲ ಹೋಯ್ತು. ಈ ಬಿಜೆಪಿಗಳು ಅವುರ ಕಾಂಡಿಡೇಟ್‌ಗೆ ದುಡ್ಡು ಕೊಟ್ರೆ ಇವುರೆಲ್ಲಿಂದ ತಂದರೂ. ಆ ಬೆಂಗಳೂರಲ್ಲಿ ಅಂಗೆ ಆಯ್ತಂತೆ."

"ಅಲ್ಲೇನಾಯಿತ್ಲ?"

"ಈ ಕಾಂಗ್ರೆಸಿನೋರು ಕ್ಯಾಂಡೇಟತ್ರ ಕಾಸೀಸಗಂಡು ತಿಕೀಟುಕೊಟ್ರಂತೆ. ಜೆಡಿಎಸ್‌ನೋರು ಕ್ಯಲಸಕ್ಕೆ ಬಾರದ ಗದ್ದಮಂಡೆವ್ರುಕೆ ತಿಕೇಟು ಕೊಟ್ರಂತೆ. ಆದ್ರೆ ಬಿಜೆಪಿಗಳು ತಿಕೀಟು ಕೊಟ್ಟಿದ್ದೂ ಅಲ್ದೆ ಬೇಕಾದೋಟು ದುಡ್ಡುನೂ ಕೊಟ್ರಂತೆ. ಕ್ಯಾನುವಾಸನೂ ಮಾಡಿದರಂತೆ. ಅದೇ ಕಾಂಗ್ರೆಸ್ನು, ಜೆಡಿಎಸ್ನು ಮನೇಲಿದ್ರಂತೆ."

"ಅದ್ಯಾಕ್ ಮನೆ ಸೇರಿಕಂಡ್ರೂ?"

"ಬಿಜೆಪಿ ಆಡಳತ ಮಾಡ್ತ ಅದೆ. ಅದರಷ್ಟು ದುಡ್ಡ ನಾವು ಖರ್ಚು ಮಾಡಕ್ಕಾಗದಿಲ್ಲ, ಆಮ್ಯಾಲೆ ಗೆದ್ದು ಬಂದು ಮ್ಯಾಲೆ ಬಿಜೆಪಿಗಳು ಯಾರ್ನಾರ್ನು ಕೊಳ್ಳತರೊ ಏನೋ ಅನ್ನಕಂಡು ಬಿಜೆಪಿಗೇ ಅನುಕೂಲ ಮಾಡಿಕೊಟ್ರಂತೆ. ಅದೇ ಪಂಚಾತಿಲೂ ನ್ಯಡದ್ರೆ ಅಂತ."

"ಇಲ್ಲೆಲ್ಲಿ ಬಿಜೆಪಿಗಳು ಬಂದವುಲ?" ಎಂದ ಕಾಳಮಾವ.

"ಅಂಗೇಳಕ್ಕೆ ಬರದಿಲ್ಲ ಕಣ ಮಾವ. ಶಿವರಾಮೇಗೌಡಾಗ್ನೆ ಎಡೂರಪ್ಪನ ಜ್ವತೆಲೆ ತಿರುಗ್ತಾಯಿದ್ದನಂತೆ. ನಿನಿಗ್ಯಾಕಪ್ಪ ಇಡೀ ಮಂಡ್ಯ ಜಿಲ್ಲೆ ಪಂಚಾಯ್ತಿನೇ ಗೋರಿಕಂಡು ಬತ್ತೀನಿ ಅಂತ ಗ್ಯಬರಿಕಂಡು ಬತ್ತನೆ."

"ಗ್ಯಬರಿಕಂಡು ಬಂದುದ್ನಲ್ಲ ಜನಕೆ ಕೊಟ್ನನೇನ್ಲ ಅವ್ರುನು?"

"ಅದು ನಿಜವೆ ಬುಡು. ಆದ್ರು ಒಂದಪಾಯಂತೂ ಎದುರಾಗ್ಯದೊ."

"ಯಾರ್ನ ಬೈತಿಲೆ ಜುಮ್ಮಿ?" ಎಂದ ಕಾಳಮಾವ.

"ನನ್ನೆದ್ರಿಗೆ ಯಾವನೊ ನಿಲ್ಲಿಸಿ ನನ್ನ ತಾಡೇ ಬುಡತರಂತೆ ಮಾವ."

"ಯಾರ್ಲೇ?"

"ಇನ್ಯಾರು ಆ ಕರಿಯನುವೆ, ಕುಳ್ಳನೂ ಸೇರಿಕೊಂಡು ಂತಿದ್ರಂತೆ."

"ನೀನು ಆಕಾರ ಹೇಳದಿದ್ರೆ ನನಿಗೇನು ಗೊತ್ತಾದತ್ಲೆ, ರ‍್ಯಾರು ಅಂತ ಹೇಳು."

"ಹೆಸರೇಳಿಸಿಗಳೊ ಯೆಗ್ಗಿ ಇದ್ದತೆ ಆ ನನ್ನ ಮಕ್ಕಳಿಗೆ. ಚಾತಿ ಮೆಂಬ್ರಗಿರಿ ನಮ್ಮಪ್ಪನಾಸ್ತಿನೊ, ನನ್ನ ಗಂಡನಾಸ್ತಿನೊ ದರೋಯ್ತದೆ."

"ಮತ್ತಾ ಬಗಿಸಿಗೆ ಮಾತ್ಯಾಕಾಡ್ತಿ ಸುಮ್ಮನಿರ್ಲೆ."

"ಇನ್ನ ಮೀಸ್ಲಾತಿ ಬಂದಿಲ್ಲ ಕಣಮಾವ. ಜನರಲ್ಲಿಗೆ ರೈ ಇವುಳು ನಿಂತಗಬವುದು. ಏನಾರ ಮೀಸ್ಲಾತಿ ರೈ ಇವುಳು ಮನಿಗೋಗದೆಯಾ" ಎಂದ ಉಗ್ರಿ.

"ಹೋದರೋಯ್ತಿನಿ ತಗಳ್ಳ. ಮೂರುಸತಿ ಬರಾಗಿದ್ದೆ. ಮುಂದೆ ಅದಿನ್ಯಾರು ಮೂರು ಸತಿ ತು ನಾನ್ನು ನೋಡ್ತಿನಿ" ಎಂದು ಜುಮ್ಮಿ ಠೇಂಕಾರ ಡಿದಳು.

"ಏನೇ ಆದ್ರು ಇಲ್ಯಲ್ಲ ದಳವೇ ಮುಂದು ಬುಡ್ಯ."

"ಏ, ದಳ ಕಾಂಗ್ರೆಸ್ನು ಯಾವುದೂ ಇಲ್ಲ ಇಲ್ಲಿ, ಏನಿದ್ರು ಕ್ಯಾಂಡೇಟೆ ಮುಖ್ಯ. ನಾನೂರ ಜನ ನೋಡಿಕಂಡ್ರೆ ಗೆದ್ದಂಗೆಯ" ಎಂದು ಉಗ್ರಿ ಹೇಳುವಾಗ ಬಂದ ವಾಟಿಸ್ನೆ,

"ನಾನೂರು ಜನ ಯಾಕೊ ನೋಡಿಕಬೇಕು. ನಾನೂರು ಓಟಿಗೆ ಕನಿಷ್ಟ ನಾಕು ಜನ ಕ್ಯಾಂಡೇಟ್ ನಿಂತಗತ್ತರೆ. ಆಗ ನೀನು ನೂರೈವತ್ತು ಓಟ ಕಾನ್‌ಸನ್‌ಟ್ರೇಟ್ ಮಾಡಿದ್ರೆ ಸಾಕು ಕಣಕ್ಕ" ಎಂದ.

"ಇರ್ಲಿ ನಾನೂರ ಜನನೂ ಮಾತಾಡುಸ್ಲೆ ಅತ್ತಗೆ" ಎಂದ ಸೀರ.

"ಅದಾಮ್ಯಾಗಲ ಮಾತು. ಮದ್ಲು ಮೀಸ್ಲಾತಿ ಬರ್ಲಿರು" ಎಂದ ಉಗ್ರಿ.

"ಜನ ಯಂಗವ್ರುರಕ್ಕ ನಿನ್ನ ಜ್ವತೆಯಾ?" ಎಂದ ವಾಟಿಸ್ನೆ.

"ಆ ಕರಿಯ, ಕುಳ್ಳ, ಗೂರ್ಲ, ಮೈಳ್ಪೆ ಇವುರ‍್ಯಲ್ಲ ನನ್ನ ಕಂಡ್ರೆ ಮಸಿತರೆ ಕಂಡ್ರು."

"ನೀನೇನು ಹೆದರಬ್ಯಾಡ, ರಾಜಿ ಮಾಡಸನ. ಅಂತ ರೇಣುಕಾಚಾರಿ, ಜಯಲಕ್ಷ್ಮಿನೇ ಒಂದಾದರಂತೆ. ಇನ್ನ ನಿನ್ನದ್ಯಾವ ಲ್ಯಕ್ಕ."

"ಅದ್ಯಾವಾಗೊಂದಾದ್ರೂ?"

"ಗುರುವನು ಕೂಡಿದೆನೇ ನಾನೊಂದರುಳಿನ ಲಯದೋಳು ಅಂತ ಬೆಂಗಳೂರಲ್ಲಿರೊ ಯಾವನೋ ಸ್ವಾಮಿ ಇಬ್ಬರ್ನೂ ಕರದು ಜ್ವತೆಲಿ ಇರಂಗೆ ಮಾಡಿದನಂತೆ. ಜ್ವತೆಲಿದ್ರು ಅಂದ್ರೆ ಜಗಳ ಕ್ವೊಬಲವೆ" ಎಂದು ವಾಟಿಸ್ನೆ ನಕ್ಕ.

"ಅದೇನೊ ನಿಜ ಬುಡು. ಅವುರ ಜಗಳವೇ ಕೊಡದುಕೋಸ್ಕರ ನ್ಯಡಿತಾಯಿತ್ತು ಅನ್ನಸ್ತದೆ" ಎಂದ ಉಗ್ರಿ.

"ಯು ಆರ್ ಕರಟ್ ಕಣೊ ಉಗ್ರಿ. ಅವುರಿಬ್ರ ದ್ವೇಶ ನೋಡಿದ್ರೆ ಇವುರೆಸ್ಟು ಪ್ರೀತುಸ್ತಿದ್ದರಪ್ಪ ಅನ್ನಂಗಾಗದು ನನಿಗೆ. ಕಡಿಗೂ ಇದ ಯಾವನೊ ಸ್ವಾಮಿ ಪತ್ತೆಹಚ್ಚಿ ಒಂದು ಮಾಡಿದ ಅತ್ತಗೆ."

"ಸ್ವಾಮಿಗ್ಯಂಗೆ ಇವುರ ಲವ್ವು ಇಂತದೂ ಅಂತ ಗೊತ್ತಾಯ್ತು ಅಂತಿನಿ?"

"ಇದೇನೊ ಉಗ್ರಿ ಹಿಂಗಂತಿ? ಸ್ವಾಮಿಗಳ ನೀನು ಏನೂ ಅಂತ ತಿಳಕಂಡಿದ್ದಿ. ಯಾವತ್ಲೂ ಮನುಷ್ಯ ತನ್ನಲ್ಲಿ ಏನಿಲ್ಲೊ ಅದರ ಬಗ್ಗನೇ ಯೋಚನೆ ಮಾಡ್ತನೆ. ಪರೆಗ್ ಜಾಂಪಲ್ ಈಗ ನಾನು ನನ್ನೆದ್ತಿ ಬಗ್ಗೆ ಯೋಚನೆ ಮಾಡದಿಲ್ಲ, ಯಾಕಂದ್ರೆ ಮನೆಲವ್ಳೆ. ಯಾವಾಗ ಅಂದ್ರೆ ಆವಾಗ ಹೋಗಿ ಕೇಳಬವುದು. ಆದ್ರೆ ನಾವು ಕೇಳದಿಲ್ಲ ಯಾಕಂದ್ರೆ ಮನೆಲವ್ಳೆ. ಅದೇ ಸ್ವಾಮಿ ಎಗ್‌ಜಾಂಪಲ್ ತಗಂಡ್ರೆ ಅದಷ್ಟು ಸುಲಭ ಅಲ್ಲ, ಆದ್ರಿಂದ ಅವ್ರುನ್ಯಾವಾಗ್ಲು ಹೆಣ್ಣು



ಪ್ರೀತಿ, ಪ್ರೇಮ ಮತ್ತೆ ಸಂಭೋಗದ ಬಗ್ಗೇನೆ ಯೋಚನೆ ಮಾಡ್ತನೆ. ಅದೇ ಪೇಜಾವರ ಅಂಗೆ ಯೋಚನೆ ಮಾಡದಿಲ್ಲ, ಅವುನಿಗಂತ ಪ್ರಾಬ್ಲಮ್ ಇಲ್ದೆ ಇರದ್ರಿಂದ ಅವುನ್ಯಾವಾಗ್ಲು ಸಾಬರ ಬಗ್ಗೆ, ದಲಿತರ ಬಗ್ಗೆ ಯೋಚನೆ ಮಾಡ್ತನೆ."

"ಅದಿರ್ಲಿ, ರೇಣುಕಾಚಾರಿದೇಳ್ಳ" ಎಂದಳು ಜುಮ್ಮಿ.

"ಅದೇ ಕಣಕ್ಕ, ರೇಣುಕಾಚಾರಿ ಈಗ ಮಿನಿಷ್ಟ್ರು. ಮಂತ್ರಿಯಾದೋನು ಕೋರ್ಟಿಗೆ ಬಂದು ನಿಂತಗಳಕ್ಯಾಗದಿಲ್ಲ, ಅದ್ಕೆ ಸ್ವಾಮಿ ಹಿಡದವ್ರುನೆ. ಜಯಲಕ್ಷ್ಮಿನು ಸುಮ್ಮನಾಗ್ಯವ್ರಳೆ. ಅಲ್ಲಿಗೆ ಹಿಟ್ಟು ಹಳಸಿತ್ತು, ನಾಯಿ ಕೂಡ ಹಸಿದಿತ್ತು ಅನ್ನಂಗಾಯ್ತು."

"ಅಂತೂ ಸ್ವಾಮಿಗಳು ದಳ್ಳಾಳಿ ಕ್ಯಲಸಕ್ಕೆ ಬಂದ್ರು ಅನ್ನು" ಎಂದ ಕಾಳಮಾವ.

"ಇನ್ನು ಮುಂದೆ ನೋಡಿವಿರು ದ್ವಡಪ್ಪ, ನೇರ ಸರಕಾರನೆ ನ್ಯಡುಸ್ತರೆ." ●

ನೆನಪಿನಲ್ಲಿ ಉಳಿಯಬೇಕಾದರೆ

ಮೊನ್ನೆ ಜಿಲ್ಲೆಯ ಕೇಂದ್ರವೊಂದಕ್ಕೆ ಹೋಗಿದ್ದಾಗ ಒಬ್ಬ ಹುಡುಗ ನನ್ನ ಕೈಕುಲುಕಿ, 'ನಿಮ್ಮನ್ನು ನೋಡಿದ್ದು ನನ್ನ ಪುಣ್ಯ' ಅಂದ. ನಾನು ಅದಕ್ಕೆ ಏನನ್ನು ಹೇಳಬಹುದು ಎಂದು ಕುತೂಹಲದಿಂದ ಎಲ್ಲರೂ ನೋಡುತ್ತಿದ್ದರು. ನಾನು,



"ನನ್ನನ್ನು ನೋಡಿದ್ದು ನನ್ನ ಪುಣ್ಯ ಕೂಡ ಇರಬೇಕು- ಆದರೆ ಪುಣ್ಯದಲ್ಲಿ ನನಗೆ ಅಷ್ಟಾಗಿ ನಂಬಿಕೆ ಇಲ್ಲ" ಎಂದು ನಕ್ಕೆ. ಎಲ್ಲರೂ ನಕ್ಕರು. ಅಲ್ಲಿಂದ ಪ್ರಯಾಣವಾಗುವುದು ಒಳ್ಳೆಯದೆಂದು ಹೊರಟೆ. ಇನ್ನೊಬ್ಬ ಹುಡುಗ ಪಕ್ಕದಲ್ಲಿ ಬರುತ್ತಾ, "ನಿಮ್ಮ ಸ್ನೇಹಿತ ಸ್ವಾಮಿ ಇದ್ದಾರಲ್ಲ, ಅವರ ಅಕ್ಕನ ಮಗ ನಾನು. ನಿಮ್ಮ ಊರಿನ ಪಕ್ಕದ ಊರಿನವನು. ಇಲ್ಲೇ ಓದ್ತಿದ್ದೇನೆ. ನಿಮ್ಮ ಸಂಬಂಧಿಗಳೆಲ್ಲ ಗೊತ್ತು" ಹೀಗೇ ಏನೇನೋ ಹೇಳುತ್ತಿದ್ದ. ಈತ ಯಾಕೆ ಹೀಗೆ ಮಾತಾಡುತ್ತಿದ್ದಾನೆಂದು ತಿಳಿಯದೆ, "ನಿನ್ನ ಹೆಸರೇನು?" ಅಂದೆ. ಆಮೇಲೆ "ಯಾಕೆ ಇದನ್ನೆಲ್ಲ ಹೇಳ್ತಿದ್ದೀ?" ಅಂದೆ. "ಮತ್ತೇನಿಲ್ಲ ಸಾರ್, ಪರಿಚಯ ಮಾಡಿಕೊಳ್ಳೋದಕ್ಕೆ" ಅಂದ. "ಇದರಿಂದೆಲ್ಲ ನನಗೆ ಪರಿಚಯವೇ ಆಗೋಲಪ್ಪ, ನೀನು ಒಳೆಯವನಾಗಿರಬೇಕು, ಕ್ರಿಯಾಶೀಲನಾಗಿರಬೇಕು, ಒಳ್ಳೆಯದನ್ನು ಮಾಡಬೇಕು ಅಥವಾ ಸೃಷ್ಟಿಸಬೇಕು. ಆಗ ನನಗೆ ನಿನ್ನ ಹೆಸರು ಮರೆಯೋದೇ ಇಲ್ಲ, ಇಲ್ಲದಿದ್ದರೆ ನಾನು ಎಷ್ಟೇ ಪ್ರಯತ್ನಿಸಿದರೂ ನೆನಪಿರೋಲ್ಲ" ಅಂದೆ.

ಬದುಕಿನಲ್ಲಿ ಸುಲಭ ಮಾರ್ಗಗಳಿಲ್ಲ-ಅಂಥ ಸುಲಭ ಮಾರ್ಗಗಳಿದ್ದರೆ ಅವೆಲ್ಲ ಬೋಗಸ್ ಮಾರ್ಗಗಳು.

"ಹೂತ ಹುಣಸಿಮರ ಸಾಕ"


ಒಬ್ಬ ಲೇಖಕನ ಜೊತೆಗೆ ನನ್ನ ಸಂಭಾಷಣೆ ಹೀಗಿತ್ತು:

"ಹುಣಸೇಮರದ ಮೇಲೆ ಒಂದು ಒಳ್ಳೆಯ ಲೇಖನ ಬರೀತೀಯಾ?"

"ಯಾವ ಹುಣಸೇಮರ?"

"ನಾವು ಚಿಕ್ಕಂದಿನಿಂದ ನೋಡಿರುವ ಕೆರೆ ಏರಿಯ ಮೇಲಿನ ಹುಣಸೇಮರ."

"ಓ, ಅದಾ, ಗೊತ್ತಾಯ್ತು! ಕಮ್ಮಾರರ ಚಂದ್ರಿ ಹುಣಸೇಕಾಯಿಗೆ ಹಾರಿಹಾರಿ ತಾನು ಬಸಿರಾಗಿದ್ದನ್ನ ಬಯಲು ಮಾಡಿಕೊಂಡ್ಯಲ್ಲ, ಆ ಮರ ತಾನೆ?"



"ಅವಳಪ್ಪ ಅವಳ್ನ ಹಿಡ್ಕೊಂಡು ಹೊಡೆದು ಆಕೆ ಬಡಿಗ್ಯೋರ ಹಲಗನಿಗೆ ಬಸಿರಾದದ್ದು ಬಾಯಿಬಿಟ್ಯಲ್ಲ- ಅದು ತಾನೆ?"


"ಆಮೇಲೆ ತಗಡಿನ ಮನೆ ಸುವರ್ಣಕ್ಕನಿಗೆ ದೆವ್ವ ಹಿಡಿದದ್ದು ಅದರ ನೆಳ್ಳಲ್ಲಿ ಕುಂತಾಗಲೇ ಅಲ್ವ?"

"ಹೌದು, ಅದು ದೆವ್ವ ಅಲ್ಲ, ಇಂಗಾಲಾಮ್ಲ- ಹುಣಸೇಮರ ಕೆಲವು ಸಲ ಆಮ್ಲಜನಕಕ್ಕೆ ಬದ್ಲು ಇಂಗಾಲಾಮ್ಲ-ಕಾರ್ಬನ್ ಡೈಯಾಕ್ಸೈಡ್-ಬಿಡುತ್ತೆ, ಅದು ಉಸಿರುಕಟ್ಟೋ ಹಾಗೇ ಮಾಡುತ್ತೆ ಅಂತ ಪರಮೇಶಿ ತನ್ನ ಹೈಸ್ಕೂಲ್ ವಿಜ್ಞಾನದಿಂದ ಎಷ್ಟು ವಿವರಿಸಿದ್ರೂ ಯಾರೂ ನಂಬ್ಲಿಲ್ಲ!"

"ಅದೇ ಹುಣಸೇಮರದ ಹತ್ರ ಅಲ್ವ- ಸರ್ಕಾರಿ ಕಂಟ್ರಾಕ್ಟರ್ ಸಾಂಬ್ರಾಣಿಗೂ ಹುಣಸೇಹಣ್ಣಿನ ಕಳ್ಳ ದುಗ್ಗನಿಗೂ ಮಾರಾಮಾರಿ ಆಗಿ ಪೊಲೀಸರು ಬಂದಿದ್ದು?"

-ನಾವಿಬ್ರೂ ಒಳ್ಳೇ ಕಾದಂಬರಿಕಾರರ ತರಹ ಹುಣಸೇ ಪುರಾಣ ಬೆಳೆಸುತ್ತಿದ್ದಾಗ ಮೂರನೆಯ ಗೆಳೆಯ ಹೇಳಿದ, "ಹುಣಸೇಮರಕ್ಕೆ ಗಂಟುಬಿದ್ದೋರು ನೀವಿಬ್ರೇ ಬೃಹಸ್ಪತಿಗಳಲ್ಲ ಕಣ್ರಯ್ಯ, ದ.ರಾ. ಬೇಂದ್ರೆ ಕೂಡ ಬೇರೆ ವಿಷಯ ಸಿಕ್ಕದೇ ಇದ್ದಾಗ ತಗಲಿಕೊಂಡಿದ್ರು. ಈ ಪದ್ಯ ನೋಡಿ" ಅಂದು "ಹೂತದ ಹುಣಸಿ" ಪದ್ಯ ತೋರಿದ. ನಾವೆಲ್ಲ ಓದಿದ್ದ ಪದ್ಯವೇ ಅದು. ಹೂವು ಬಿಟ್ಟಿರುವ ಹುಣಸೆಮರದ ಚಂದವೇ ಚಂದ; ಆದರೆ ಬೇಂದ್ರೆ ಬರೀ ಚಂದದ ಬಗ್ಗೆ ಬರೆದಿಲ್ಲ, ಯಾವ ಒಳ್ಳೆಯ ಕವಿಯೂ ಬರೀ ಚಂದಕ್ಕೆ ನಿಲ್ಲುವುದಿಲ್ಲ, ಮಧ್ಯಾಹ್ನದ ಬಿಸಿಲಲ್ಲಿ ಹೂತ, ಚಿಗಿತ ಹುಣಸೆಯ ಮರದಡಿ, ನೆಲದ ಮೇಲೆ ಹಾಸಿದಂತಿರುವ ಚಿಗುರು, ಹೂವಿನ ಚಾಪೆಯ ಮೇಲೆ ಕೂತ ಪ್ರೇಮಿಗಳು ಸುತ್ತ ನೋಡುತ್ತಾರೆ; ಮೊದಮೊದಲು ಧಗೆಯಲ್ಲಿ ದಣಿದವರಿದ್ದಂತಿದ್ದಾರೆ. ಹುಣಸೆ ಹೂವು, ಚಿಗುರಿನ "ರುಚಿಯ ಹುಳಿಯಾಗಿಸಲು" ಹುಣಸೆಯ "ಉಗುರ್ಗೆಂಪು ಹಸಿರು ಬಳಿನಿಂಬಿ, ಹುಣಸಿಯಾಕೊಂಬಿ" ಎಂದವಳು ಇನ್ನೊಂದು ಮಜಲು ಕಲ್ಪನೆಯ ಮೆಟ್ಟಲೇರಿ "ಚಿಗಿತಿಯೇನೋ ಎಂಬಿ ಕಾಮನ ಬಿಲ್ಲಿನ ಕೊಂಬಿ" ಅನ್ನುತ್ತಾರೆ. ಕವಿ ನೆರಳಿನಲ್ಲಿ ಅಡ್ಡಾಡುತ್ತಾರೆ-ಆಕೆಯನ್ನು 'ಹಾಂಗ ಸನ್ನಿದಿರ, ಕಣ್ಣಳತಿಯೊಳಗ ನೀ ಬಾರ' ಎಂದು ಹತ್ತಿರ ಕರೆದು ನೋಡುತ್ತಾರೆ.

ಸುಂಟರಗಾಳಿ ಧೂಳಿನ ಕಂಬ ಸೃಷ್ಟಿಸಿದೆ; ಅದು ಕರಗಿದಂತೆ ಪಾರಿವಾಳದ ಜೋಡಿ ಬಿಸಿಲ ತೆರೆಯನ್ನು ಹರಿದು, ಒಂದಕ್ಕೊಂದು ಕೂಡಿ ಹಾರುತ್ತವೆ; ಚಿತ್ತ ಗಾಳಿಸವಾರಿಗೆ ಹೊರಟು ಮನಸ್ಸು ಹಗುರವಾಗತೊಡಗುತ್ತದೆ; ಪ್ರಕೃತಿಯ ಹುಣಸೇಮರ ತನ್ನ ಹೂವು ಚಿಗುರಿನಿಂದ ಮನದ ಆಳಲನ್ನು ಗುಡಿಸಿ ಹಾಕುತ್ತದೆ. ಅದೇ ಕವಿಯಲ್ಲಿನ ವಿಶೇಷ. ಆತ ನೋಡುವ ಮರವೂ ಬೇರೆಯವರು ನೋಡುವ ಮರವೂ ಒಂದೇ ಅಲ್ಲ; ಕವಿಗೆ ಬೇಸರವನ್ನು ಹೋಗಲಾಡಿಸಲು ಮಹಾಕಾವ್ಯ ಅಥವಾ ಪುಣ್ಯಭಾವಂತ ವ್ಯಕ್ತಿಗಳೇ ಬೇಕಿಲ್ಲ.




"ಕವಿಜೀವದ ಬ್ಯಾಸರ ಹರಿಸಾಕ
ಹಾಡ ನುಡಿಸಾಕ
ಹೆಚ್ಚಿಗೇನು ಬೇಕ?
ಒಂದು ಹೂತ ಹುಣಸಿಮರ ಸಾಕ."

-ಸೆಪ್ಟೆಂಬರ್ 1, 1993

ಏನು ಒಳ್ಳೆ ಜನ ಅಂತೀರಿ

ಅಣಕ



ಎಚ್.ಎಲ್. ಕೇಶವಮೂರ್ತಿ

ನಮ್ಮ ಜನ ಏನು ಮುಗ್ಧರು ಅಂತೀರಿ, ಅವರ ಒಳ್ಳೆತನಕ್ಕೆ ಯಡ್ಯೂರಪ್ಪನವರು ಮಾರು ಹೋಗಿದ್ದರು. ಹಾಗೆ ಯೋಚಿಸಿದರು. ಬಾಲ್ಯದಲ್ಲಿ ಕಲಿತ ಹಾಡು ನೆನಪಾಯಿತು.

ಏನೇನೋ ಮಾಡ್ಯಂಡೆ
ಹೆಂಗೇಗೋ ಮಾಡ್ಯಂಡೆ
ಹಂಗಾದ್ರೂ ನನ್ನೀವ ಹೋಗ್ನೆ ಇಲ್ಲ

ಈ ಹಾಡಿದ ಧಾಟಿಯಲ್ಲೇ ಮನಸ್ಸಿನಲ್ಲಿ ಹಾಡಿಕೊಂಡ್ರು

ಏನೇನೋ ಮಾಡ್ದೆ
ಹೆಂಗೆಂಗೋ ಮಾಡ್ದೆ
ಹಂಗಾದ್ರೂ ನನ್ನೋಲುಸ್ಲೇ ಇಲ್ಲ!

ವಿದ್ಯುತ್ ಅಭಾವ ಇದೆ. ನಿಗದಿತ ಸಮಯದಲ್ಲಿ ಸರಬರಾಜು ನಿಲ್ಲುಸ್ತೀವಿ ಅಂದೆ. ಅದು ಆಗಲಿಲ್ಲ, ಅನಿಯಮಿತವಾಗೇ ನಿಲ್ಲುಸ್ತಾ ಬಂದೆ. ಜನ ತಕರಾರು ಮಾಡಬಾರದಾ. ಉಹುಂ. ಪೂರ್ವಜನ್ಮದಲ್ಲಿ ನಂಬಿಕೆ ಇರೋ ಜನ ನೋಡಿ. ಹಿಂದಿನವರು ಮಾಡಿದ ಪಾಪ ನಮ್ಮನ್ನು ಕಾಡ್ತಾ ಇದೆ ಅಂದೆ. ನಂಬಿದರು. ಮೊದಮೊದಲು ಆರರಿಂದ ಏಳು ಗಂಟೆಯವರೆವಿಗೆ ವಿದ್ಯುತ್ ಸರಬರಾಜು ಇರೋಲ್ಲ ಅಂದೆ. ಜನ ಏಳು ಗಂಟೆಗೆಲ್ಲ ಕರೆಂಟು ಬಂದ್ಬುಡ್ತದೆ ಅಂತ ನೆಮ್ಮದಿಯಾಗೇ ಇದ್ರು. ಕರೆಂಟ್ ಬಂದಾಗ ಏನೋ ನಿಧಿ ಸಿಕ್ದಂಗೆ ಸಂತೋಷಪಟ್ರು. ಆದ ಮೆಲ್ಲಗೆ ಏಳೂವರೆ ತನಕ ವಿಸ್ತರಿಸಿದೆ. ಮಿದಿನ ಗೊಣಗಿಕೊಂಡರು ನಿಜ. ಆಮೇಲೆ ಅದಕ್ಕೆ ಹೊಂದಿಕೊಂಡರು. ಏಳೂವರೆಗೆಲ್ಲ ಬಂದ್ಬುಡ್ತದೆ ಅಂತಾ ಹೇಳ್ತಾ ಬಂದ್ರು. ಆದ ಎಂಟು, ಎಂಟೂವರೆ, ಒಂಭತ್ತು ಹಿಂಗೆ ವಿಸ್ತರಿಸ್ತಾನೆ ಹೋದೆ. ಅದಕ್ಕೂ ಹೊಂದಿಕೊಂಡರಲ್ಲ ನಮ್ಮ ಜನ ಯಾವುದೇ ತಂಟೆತಕರಾರು ಇಲ್ಲದೆ. ಕರೆಂಟು ಬಂದಾಗ ಅವರ ಮುಖದಲ್ಲಿ ಆನಂದ ಅನ್ನೋದು ತುಂಬಿ ತುಳುಕೋದ ನೋಡೋಕೆ ಒಂದು ಇದು. ಏನು ಒಳ್ಳೆ ಜನ ಅಂತೀರಿ....

ಏನೇನೋ ಮಾಡ್ದೆ
ಹೆಂಗೆಂಗೋ ಮಾಡ್ದೆ
ಹಂಗಾದ್ರೂ ನನ್ನೋಲುಸ್ಲೇ ಇಲ್ಲ
ಕರೆಂಟ್ ಕೊಡ್ತೀನಿ ಅಂದೆ
ಕರೆಂಟ್ ಕೊಡ್ಲಿಲ್ಲ
ಹಂಗಾದ್ರೂ ನನ್ನೋಲುಸ್ಲೇ ಇಲ್ಲ!

ಹಾಲಿನ ದರ ಹೆಚ್ಚಿಸಲ್ಲ ಹೆಚ್ಚಿಸಲ್ಲ ಅಂತ ಬಾರಿಬಾರಿ ಹೇಳ್ದೆ. ಹೆಚ್ಚಿಸ್ದೆ. ಈ ಹಿಂದೆ ಕೆ.ಆರ್. ಪೇಟೆ ಕೃಷ್ಣ ಪಶು ಸಂಗೋಪನಾ ಸಚಿವರಾಗಿದ್ದರು. ಹೈನುಗಾರಿಕೆ ಕಷ್ಟ ಅರಿತಿದ್ದೋರು. ಹಳ್ಳಿಯವರಿಗೆ ಅನುಕೂಲ ಆಗಲಿ ಅಂತ ಲೀಟರ್‌ಗೆ ಒಂದು ರೂಪಾಯಿ ಹಾಲಿನ ಬೆಲೆ ಏರುಸ್ತೀನಿ ಅಂದ್ರು. ನಾವು ಸುಮ್ಮನೆ ಕೂರಲಿಲ್ಲ, ಮಕ್ಕಳ ಮೆರವಣಿಗೆ ತಂದು ಶಾಸಕರ ಭವನಕ್ಕೆ ಮುತ್ತಿಗೆ ಹಾಕಿದ್ವಿ. ಯಾಕೆ ಅಲ್ಲಿಗೆ ಅಂದ್ರೆ ಆ ಮಂತ್ರಿಗೆ ಮಂತ್ರಿಗಿರಿ ಮೋಜು ಮಾಡೋದೇ ಗೊತ್ತಿರಲಿಲ್ಲ; ಮಂತ್ರಿ ಮನೆಗೆ ಹೋಗದೆ ಶಾಸಕರ ಭವನದ ರೂಮಿನಲ್ಲೇ ಇದ್ದರು ಅದಕ್ಕೆ. 'ಅಂಕಲ್ ಗಿವ್ ಅಸ್ ಮಿಲ್ಕ್' ಅಂತ ಮಕ್ಕಳ ಕೈಲಿ ಕೂಗಿಸಿ ರಂಪಾಟ ಮಾಡಿದ್ವೊ. ಅಷ್ಟಕ್ಕೇ ಬೆದರಿದ ಕೃಷ್ಣ ಹಾಲಿನ ರೇಟ ಏರಿಸಲೇ ಇಲ್ಲ! ಆನಂತರ ಎಚ್.ಡಿ. ರೇವಣ್ಣ ಜಮಾನ ಬಂತು. ಕೆಎಂಎಫ್ ಅಧ್ಯಕ್ಷರಾಗಿದ್ದ ಅವರು ಇದೇ ವಾದ ಮುಂದೆ ಇಟ್ಟು ಲೀಟರ್‌ಗೆ ಎರಡು ರೂಪಾಯಿ ಹೆಚ್ಚಿಸುವ ಪ್ರಸ್ತಾವನೆ ಮುಂದಿಟ್ಟರು. ನಾನೇ ಮುಖ್ಯಮಂತ್ರಿ ಆಗಿದ್ದೆ... ಗ್ರಾಹಕರಿಗೆ ತೊಂದರೆಯಾಗುತ್ತೆ ಯಾವ ಕಾರಣಕ್ಕೂ ಹಾಲಿನ ದರ ಏರಿಸಲಾಗದು ಅನ್ನುವ ಕಠಿಣ ನಿಲುವು ತಾಳಿದೆ. ನಗರದ ಜನ 'ಭೇಷ್ ಭೇಷ್' ಅಂದ್ರು. ರೇವಣ್ಣ ಪ್ರಸ್ತಾವನೆ ಮೂಲೆಗೆ ಸೇರ್ತು. ಈಗ ನಾನು ಒಂದು ಲೀಟರ್ ಹಾಲಿಗೆ ನಾಲ್ಕು ರೂಪಾಯಿ ಹೆಚ್ಚಿಸಿದ್ದೀನಿ. ಅದರೂ ಜನ ಅನ್ನೋರು ಪಿಟ್ ಪೀ ಅನ್ನಬಾರ್ದು... ಮೂಗು ಬಸವನಂಗೆ ಪೀಕ್ತಾ ಬಿದ್ದವಲ್ಲಾ.... ಏನು ಒಳ್ಳೆ ಜನ ಅಂತೀರಿ....



ಏನೇನೋ ಮಾಡ್ದೆ
ಹೆಂಗೆಂಗೋ ಮಾಡ್ದೆ
ಹಂಗಾದ್ರೂ ನನ್ನೋಲುಸ್ಲೇ ಇಲ್ಲ
ಕರೆಂಟ್ ಕೊಡ್ತೀನಿ ಅಂದೆ
ಕರೆಂಟ್ ಕೊಡಿಲ್ಲ
ಹಾಲಿನ ರೇಟೇರ್ಸಲ್ಲ ಅದೆ
ಹಾಲಿನ ರೇಟೇರುಸ್ದೆ
ಹಂಗಾದ್ರೂ ನನ್ನೋಲುಸ್ಲೇ ಇಲ್ಲ!

ಬೇಸಿಗೆ ಕಾಲ. ನೀರಿಗೆ ಬರ ಬರ್ತದೆ ಅನ್ನೋದು ಮಾಮೂಲಿ ಸಂಗತಿ. ನಾನು ಎಷ್ಟೊಂದು ಜಿಲ್ಲೆ ಸುತ್ತಿದೀನಿ. ಅಲ್ಲೆಲ್ಲ ನೀರಿನ ಬರದ ಕುರುಹೂ ಇರಲಿಲ್ಲ ಎಲ್ಲಾ ಕಡೆಯೂ ಬೇಜಾನ್ ನೀರು ಸಿಗ್ತಿತ್ತು! ಆದರೂ ರಾಜಕೀಯ ವಿರೋಧಿಗಳು ಇದಾರಲ್ಲ ಅವರು ಸೇರ್ಕಂಡು ಜನ ಸೇರ್ಸಿ ನೀರಿಲ್ಲ ಅಂತ ಖಾಲಿ ಕೊಡ ಪ್ರದರ್ಶಿಸುತ್ತಾ ಬಿದ್ದವೆ. ಅವರೇನೇ ಮಾಡಿಕೊಳ್ಳಲಿ. ಈ ಸಾಮಾನ್ಯ ಜನ ಇದಾರಲ್ಲ ಅವ್ರು ಬಲೇ ಒಳ್ಳೇರು. ಇಂತಹವರ ಮಾತಿಗೆಲ್ಲ ಮರುಳಾಗೋರಲ್ಲ. ನೀರಿಲ್ಲದಿದ್ರೂ ಹೆಂಗೋ ಜೀವ ಹಿಡ್ಕೊಂಡು ಬದ್ಕೋದ ಕಲ್ತವ್ರೆ. ನೀರಿನ ದರ ಹೆಚ್ಚುಸ್ತೀವಿ ಅಂದ್ರೊ. 'ಇಲ್ಲದ ನೀರಿಗೆ ದರ ಬೇರೆ ಕೇಡು' ಅಂತ ಅವರು ಹೇಳ್ಳೇ ಇಲ್ವಲ್ಲಾ.... ಛೆ ಎಂತಹ ಒಳ್ಳೆ ಜನ ಇವರು ಅಂತೀನಿ..........

ಏನೇನೋ ಮಾಡ್ದೆ
ಹೆಂಗೆಂಗೋ ಮಾಡ್ದೆ
ಹಂಗಾದ್ರೂ ನನ್ನೋಲುಸ್ಲೇ ಇಲ್ಲ
ಕರೆಂಟ್ ಕೊಡ್ತೀನಿ ಅಂದೆ
ಕರೆಂಟ್ ಕೊಡ್ಲಿಲ್ಲ
ಹಾಲಿನ ರೇಟೇರ್ಸಲ್ಲ ಅಂದೆ
ಹಾಲಿನ ರೇಟೇರುಸ್ದೆ
ನೀರಿನ ದರ ಏರ್ಸೊಲ್ಲ ಅಂದೆ
ನೀರಿನದರ ಏರುಸ್ದೆ
ಹಂಗಾದ್ರೂ ನನ್ನೋಲುಸ್ಲೇ ಇಲ್ಲ!

ಬಿಬಿಎಂಪಿ ಚುನಾವಣೇಲಿ ಕಂಡೂಕಂಡೂ ಗಂಡೋ ಹೆಣ್ಣೊ ಅಂದಂಗೆ ನಮ್ಗೇ ಓಟಾಕವ್ರಲ್ಲಾ.... ಒಂದೊಂದೋಟಿಗೆ ಐನೂರೋ ಸಾವಿರಾನೋ ಕೊಟ್ಟಿರಬಹುದು. ಯಾವ ಪಕ್ಷ ಕೊಡೋದಿಲ್ಲ ಹೇಳಿ.... ನಮ್ಮ ಜನ ಅವ್ರಲ್ಲಾ ಬಾರಿ ಒಳ್ಳೇ ಜನ..... ●


ಮಹಾದೇವರ ಆತಂಕವನ್ನು ರಶೀದ್ ಅರ್ಥಮಾಡಿಕೊಳ್ಳಲಿ

ನಿಮ್ಮ ಪತ್ರಿಕೆಯಲ್ಲಿ ಆಪರೇಷನ್ ಗ್ರೀನ್ ಹಂಟ್, ಗೋಹತ್ಯೆ ಕೋಮುವಾದ ಮುಂತಾದ ಜ್ವಲಂತ ಸಮಸ್ಯೆ ಕುರಿತು ವರದಿ-ಲೇಖನಗಳು ವಸ್ತುನಿಷ್ಠವಾಗಿ ಮೂಡಿಬರುತ್ತಿವೆ.

ಇವುಗಳನ್ನು ಓದಿದ ಎಷ್ಟೋ ಮಂದಿಗೆ ತಿಳಿವಳಿಕೆ ಜ್ಞಾನ ಬರುತ್ತದೆ. ಜನಪರ ಹೋರಾಟಗಳಿಗೆ ಮಾರ್ಗಸೂಚಿಯಾಗಿದ್ದಿರಿ. ಅದರಲ್ಲಿಯೂ ಕುಮಾರ್ ಬುರಡಿಕಟ್ಟಿ, ಶಿವಸುಂದರ್ ಲೇಖನಗಳು ಜನಜಾಗೃತಿ ಮೂಡಿಸುತ್ತವೆ.

ಇನ್ನು ಜಾತಿವಾದ, ಕೋಮುವಾದ, ಆಳುವವರ ಜನವಿರೋಧಿ ನೀತಿಗಳ ಬಗ್ಗೆ ಹೆಚ್ಚು ಬರೆಯಿರಿ.

-ಎಂ.ಪ್ರಸಾದ್, ಮೈಸೂರು



ಕಿಂಚಿತ್ತು ಮಾನವೀಯತೆ ಇಲ್ಲದ, ಕೆಲಸಕ್ಕೆ ಬಾರದ, ವ್ಯಕ್ತಿಕೇಂದ್ರಿತ ಹಿಂದೂ ತತ್ವಜ್ಞಾನ ಬೋಧಿಸುವ, ಧಾರ್ಮಿಕತೆ ಸ್ವರ್ಗ ನರಕ ಪುಣ್ಯ ಇತ್ಯಾದಿಗಳ ಬಗ್ಗೆ ಸಜ್ಜನರಂತೆ ಮಹಾನ್ ಸಂಸ್ಕಾರಸ್ಥರಂತೆ ಮಾತಾಡುವ ಕಾವಿ ರಾಕ್ಷಸರು, ಅರ್ಚಕರು, ಬ್ರಾಹ್ಮಣ ರಾಜಕಾರಣವು ಈ ಹಿಂದೂ ಧರ್ಮದಷ್ಟೇ ಮರ್ಯಾದೆಗೆಟ್ಟವರು ಎಂದೆನಿಸಿಬಿಡುತ್ತದೆ.

ಸಜ್ಜನಿಕೆ ಬಗ್ಗೆ ತುಂಬ ಹರಿಯುವಷ್ಟು ಮಾತಾಡುವ ಹಿಂದೂ ಸಜ್ಜನರು ಹಿಂದೂ ಅಸ್ಪೃಶ್ಯರಿಗೆ ಸಂಬಂಧಿಸಿದ ವಿಷಯದಲ್ಲಿ ಹಿಂದೂ ದುರ್ಜನರಾಗಿ ಬಿಡುತ್ತಾರಲ್ಲಾ ಏಕಿರಬಹುದು? ದುರಂತವೆಂದರೆ, ದಲಿತರ ವಿರುದ್ಧ ಕ್ರೂರವಾಗಿ ವರ್ತಿಸಬೇಕೆಂದು ಸ್ವತಃ ಹಿಂದೂ ಧರ್ಮ ಸಮರ್ಥಿಸುತ್ತದೆ! ಭಾರತದ ಸವರ್ಣೀಯರು, ಮುಸ್ಲಿಂ ಕ್ರೈಸ್ತರಿಗಿಂತ ಹೆಚ್ಚಾಗಿ ಹಿಂಸಿಸುವುದು 'ಒಗ್ಗಟ್ಟು' ಇಲ್ಲದ ದಲಿತ ಸಮುದಾಯವನ್ನು, ಹಿಂದೂ ದಲಿತರು ಮಲಹೊರುವುದು ಹಿಂದೂ ಬ್ರಾಹ್ಮಣರ, ಇವರ ಧರ್ಮದ 'ಶ್ರೇಷ್ಠತೆ'ಯ ಸಂಕೇತ!

ಬಹಳಷ್ಟು ಬಾರಿ ಸಾಬೀತುಗೊಳ್ಳುವುದು ಹಿಂದೂ ಬ್ರಾಹ್ಮಣರಿಗಿಂತ ಶೂದ್ರ ಹಿಂದೂ ಜಾತಿಗಳು ಅಸ್ಪೃಶ್ಯರ ಪಾಲಿನ 'ರಾಕ್ಷಸರು' ಎನ್ನುವುದು. ಇದು ಸತ್ಯವೂ ಹೌದು! ಮಂಡ್ಯ ಹಾಗೂ ಮದ್ದೂರು ಬಳಿಯ ಕನ್ನಲಿ ಹಾಗೂ ಐ.ಎಸ್.ಹೊನ್ನಲಗೆರೆಯಲ್ಲಿನ ಶೂದ್ರ ಹಿಂದೂ ಒಕ್ಕಲಿಗರು ಇದಕ್ಕೆ ಉದಾಹರಣೆ. ದೇವರನ್ನು ನೋಡಲು, ದೇವಸ್ಥಾನ ಮೆಟ್ಟಲು ಮುಟ್ಟಲು ಬಿಡದ ಈ ಹಿಂದೂ ಧರ್ಮವೊಂದು ಧರ್ಮವೇ? ನಾಚಿಕೆಯಾಗಬೇಕು ಇದನ್ನೊಂದು ಧರ್ಮವೆಂದು ಹೇಳುವವರಿಗೆ...! ಈ ವಿಕೃತ ದೈವ ಭಕ್ತ ಜಾತಿವಾದಿ ಮನಸ್ಸುಗಳಿಗೆ 'ಜಾತಿಪದ್ಧತಿ' ಶ್ರೇಷ್ಠ ಉತ್ತಮ ಸಿದ್ಧಾಂತವೆಂದು ಸಮರ್ಥಿಸುವವರಿಗೆ.. ದೈವ ಸೃಷ್ಟಿ ಮನುಷ್ಯರನ್ನು ಹೇಗೆ 'ಧರ್ಮಬದ್ಧ' ನಡೆಸಿಕೊಳ್ಳಬಹುದೆಂದು ತಿಳಿಯಲು ಕನಿಷ್ಠಪಕ್ಷ ಬೌದ್ಧ ಕ್ರೈಸ್ತ ಇಸ್ಲಾಂ, ಸಿಖ್ ಧರ್ಮಗಳತ್ತ ನೋಡಲಿ... ಮತಾಂತರದ ಸತ್ಯವಾದ್ರೂ ತಿಳಿಯುತ್ತದೆ.

-ಸಿ.ರಾಮ್, ಮಡಿಕೇರಿ

ದೇವನೂರು ಮಹಾದೇವ ಅವರ 'ಭಾರತ ಸಂವಿಧಾನಕ್ಕೆ ಭೂತಬೇಷ್ಟೆ' ಭಾಷಣ ಸಾರದ ಬಗ್ಗೆ ಚಿಂತಿಸುವ ಬದಲು 'ಕೆಂಡ' ಸುರಿದು ಹೊಗೆ ಹಾಕಿದ್ದಾರೆ. ಹಸಿವಿನ ಸಂಕಟ ಹಸಿವಿದ್ದವನಿಗೇ ಗೊತ್ತು, ದಲಿತನ ಸಂಕಟ, ನೋವು, ಗೋಳು, ತಾಕಲಾಟ, ಅವಮಾನ ದಲಿತನಿಗೆ ಮಾತ್ರ ಗೊತ್ತು! ಪುರೋಹಿತಶಾಹಿ ಮನಸ್ಸುಗಳಿಗೇನು ಗೊತ್ತು? ವಂಚನೆ ಯಾವ ರೂಪದಲ್ಲಾದರೇನು? ಅದು ವಂಚನೆಯೇ. ನನಗೆ 'ಕೆಂಡಸಂಪಿಗೆ' ಗೊತ್ತಿಲ್ಲ, ಸಾಹಿತ್ಯದಲ್ಲಿ ಸಂಪಿಗೆ ಕಂಪಿನ ಪರಿಮಳ ಸೂಸುವ ಅಬ್ದುಲ್ ರಶೀದ್ ಬಗ್ಗೆ ಒಂಚೂರು ಗೊತ್ತು, ಆ ಪರಿಮಳವು ಕೆಂಡದಲ್ಲಿ ಬಿದ್ದು ಹೊಗೆ ಏಳಿಸಿ ಕಮಟುವಾಸನೆ ಬೀರಿ ಅಸಹನೆ ಹುಟ್ಟಿಸುತ್ತಿತ್ತೆಂದು ಯಾರಿಗೆ ಗೊತ್ತಿತ್ತು! 'ಕೆಂಡಸಂಪಿಗೆ'ಯಲ್ಲಿ ಪ್ರಕಟವಾಗಿರುವ ಪ್ರತಿಕ್ರಿಯೆಗಳನ್ನು 'ಲಂಕೇಶ್'ನಲ್ಲಿ ನೋಡಿದೆ. ದೇವನೂರರ ಬಗ್ಗೆ ಇಷ್ಟು ಹಗುರವಾದ ಪ್ರತಿಕ್ರಿಯೆಗಳು ಗಾಬರಿ ಹುಟ್ಟಿಸುವಂತವು. ಬಹುಶಃ ಇವು ಒಂಥರ ಪೂರ್ವಾಗ್ರಹಪೀಡಿತ ಪ್ರತಿಕ್ರಿಯೆಗಳು ಅನ್ನಿಸುವಂತಿವೆ.

ಕೆಲವರ ಪ್ರತಿಕ್ರಿಯೆಗಳಲ್ಲಿ ಅನವಶ್ಯಕವಾಗಿ 'ಮೀಸಲಾತಿ ಪ್ರಸ್ತಾಪ'ವಿದೆ. ಎಲ್ಲರಿಗೂ ಮೀಸಲಾತಿ ಮೇಲೆಯೇ ಕಣ್ಣು! ಒಂದು ಪ್ರಶ್ನೆ: ರಾಜಕೀಯವಾಗಿ ಮೀಸಲು ಕ್ಷೇತ್ರಬಿಟ್ಟು ಸಾಮಾನ್ಯ ಕ್ಷೇತ್ರವೊಂದರಲ್ಲಿ ದಲಿತನೊಬ್ಬ ಅಭ್ಯರ್ಥಿಯಾದರೆ ನಿಜವಾಗಿಯೂ ಆತ ಜಾತ್ಯತೀತನಾಗಿ ಆರಿಸಿ ಬರುವನೇ? ನಾವೆಲ್ಲರೂ 'ಬ್ರಾಹ್ಮಣರ ಫಲಹಾರ ಮಂದಿರ', 'ವೀರಶೈವ ಫಲಹಾರ ಮಂದಿರ' ಎಂಬಿತ್ಯಾದಿ ಬೋರ್ಡ್ ಇರುವ ಹೋಟೆಲ್‌ಗಳನ್ನು ನೋಡಿರುವುದುಂಟು. ಅಂತಹ ಹೋಟೆಲ್‌ಗಳು ಯಾವ ತಕರಾರೂ ಇಲ್ಲದೆ ವ್ಯವಹಾರ ಮಾಡುತ್ತಿರುವುದೂ ಉಂಟು! ಈ ರೀತಿಯಾಗಿ 'ದಲಿತ ಫಲಹಾರ ಮಂದಿರ' ಎಂತಲೋ ಅಥವಾ 'ಹೊಲೆಯರ', 'ಮಾದಿಗರ ಫಲಹಾರ ಮಂದಿರ' ಅಂತಲೋ ಬೋರ್ಡು ಹಾಕಿ ಹೋಟೆಲ್ ನಡೆಸಿದರೆ ವ್ಯವಹಾರ ಅದೇರೀತಿ ಆಗುತ್ತದೆಯೋ? ಮೀಸಲಾತಿಯ ಬಗ್ಗೆ ಹಗುರಾಗಿ ಮಾತಾಡುವವರು ಈ ತರಹದ ಜಾತಿತಾರತಮ್ಯದ ಬಗ್ಗೆ ಉತ್ತರ ಕೊಡಬಲ್ಲರೇ? ಜಾತಿ ಒಬ್ಬರಿಗೆ 'ಲಾಭದ ಅಸ್ತ್ರ'ವಾದರೆ ಅದೇ ಜಾತಿ ಇನ್ನೊಬ್ಬರಿಗೆ 'ಅವಮಾನ, ಶೋಷಣೆ ಮತ್ತು ನಷ್ಟದ ರಂಧ್ರ'ವಾಗುತ್ತಿರುವುದು ಸ್ಪಷ್ಟ!

ಇಂಥ 'ಜಾತಿತನ' ಇರುವ ತನಕ ಮೀಸಲಾತಿಯ ಅನಿವಾರ್ಯತೆ ಹಾಗೂ ದಬ್ಬಾಳಿಕೆ ದೌರ್ಜನ್ಯ ಇರುವತನಕ ಸಂಘರ್ಷಮಯ ಹೋರಾಟದ ಅನಿವಾರ್ಯತೆ ಸಂವಿಧಾನಾತ್ಮಕವಾಗಿ ಉಸಿರಾಡುತ್ತಲೇ ಇರುತ್ತದೆ. ದೇವನೂರ ಮಹಾದೇವ ಅವರು ಮಾಡಿರುವ ಭಾಷಣದ ಅಷ್ಟೂ ವಿಚಾರಗಳು, ಎತ್ತಿರುವ ಪ್ರಶ್ನೆಗಳು ಚಿಂತಿಸಬಹುದಾದ ಬಹುಕಾಲ ಚರ್ಚಿಸಲ್ಪಡುವಂತವು. ಇದನ್ನು ಬಿಟ್ಟು ಎಲ್ಲೆ ಮೀರಿ ಟೀಕಿಸುವುದು ಆರೋಗ್ಯಕರವಲ್ಲ ಎಂಬುದು 'ಕೆಂಡಸಂಪಿಗೆ'ಯಲ್ಲಿ ಕಾರಿರುವವರಿಗೆ ತಿಳಿಯಲಿ. ಅಬ್ದುಲ್ ರಶೀದ್ ವೈದಿಕರ ಅಂಗಳದಿಂದ ಹೊರಬಂದು ದೇವನೂರ ಮಹಾದೇವ ಅವರ ಅಂತರಂಗದ ಆತಂಕವನ್ನು ಅರ್ಥಮಾಡಿಕೊಳ್ಳಲಿ.

-ಎಂ.ಜನರಾಜ್, ಮೈಸೂರು

ಮನುವಾದಿಗಳಲ್ಲ-ಚಾಣಕ್ಯವಾದಿಗಳು!

'ಕೆಂಡಸಂಪಿಗೆ'ಯಲ್ಲಿ ದೇವನೂರ ಮಹಾದೇವ ಅವರ ವಿರುದ್ಧ ಜಿಜ್ಞಾಸು, ಜನಮೇಜಯ, ವಿಚಾರವಾದಿ, ಜನಸಾಮಾನ್ಯ ಎಂಬ ಹೆಸರಲ್ಲದ ಹೆಸರುಗಳಲ್ಲಿ ತಮ್ಮ ಅಸಹನೆಯನ್ನು ಹೊರಹಾಕಿರುವ ಮಹನೀಯರ ಆತಂಕವನ್ನು ನೋಡಿ ನಗುಬಂತು. ಕೆಲವರಂತೂ ನೇರವಾಗಿ ಮಹಾದೇವರ ಮೇಲೆ ಮುಗಿಬದ್ದಿದ್ದರು ಬೇರೆ. ಬ್ರಾಹ್ಮಣ (ಶೋಷಕ ಅಲ್ಲ ಶೋಷಿತ ಅಂತೆ) ವರ್ಗದಲ್ಲಿ ಹುಟ್ಟಿದ್ದರೆ ಮಹಾದೇವ ಸಾಹಿತಿಯೇ ಆಗುತ್ತಿರಲಿಲ್ಲವೆಂಬ ಅಗಾಧ ಸಂಶೋಧನೆ ಒಬ್ಬರದ್ದಾದರೆ ಮಹಾದೇವರಿಗೆ ಲೋಕಜ್ಞಾನ ಇಲ್ಲ ಎಂಬುದು ಮತ್ತೊಬ್ಬರ ದೂರು. ಇಂತವನ್ನು ಓದಿದಾಗ ನಗುಬಾರದೆ ಇರುತ್ತದೆಯೇ?

ಮೊನ್ನೆ ಲಂಕೇಶ್-75ರಲ್ಲಿ ಮಹಾದೇವರ ಮಾತನ್ನ ಕೇಳಿದ್ದೆ. ನೋವು-ವಿಷಾದ-ಹಾಸ್ಯ ಬೆರೆತ ಅವರ ಮಾತುಗಳಲ್ಲಿ ಪಕ್ವತೆ ಜತೆಗೆ ಮುಗ್ಧತೆ ಇತ್ತೇ ವಿನಃ ಮಾಮೂಲಿ ಚಳವಳಿಕಾರನ ರೀತಿ ಆಕ್ರೋಶಭರಿತವಾಗಿ ಮಾತಾಡಲೇ ಇಲ್ಲ, ದಲಿತ ಹೋರಾಟ, ಸಾಹಿತ್ಯ ರಾಜಕೀಯ ಎಲ್ಲದರಲ್ಲೂ ತೊಡಗಿಸಿಕೊಂಡಿದ್ದ ಹಿರಿಜೀವ ವಯೋಸಹಜವಾಗಿ ಮಾಗಿದ್ದರೂ ಕೆಲವರಿಗೆ ಅವರ ಮಾತುಗಳು ಕೇವಲ ಬ್ರಾಹ್ಮಣ ದ್ವೇಷ, ವೈದಿಕ ದ್ವೇಷದಂತೆ ಕಂಡಿದ್ದರೆ ಅದು ಮಹಾದೇವರ ತಪ್ಪಲ್ಲ, ಕೆಲವರ್ಷಗಳ ಹಿಂದೆ ಇಂಟರ್‌ನೆಟ್‌ನಲ್ಲಿ ಏನೋ ಹುಡುಕುತ್ತಿದ್ದಾಗ ಗೌರಿಯವರ ಕುರಿತಾಗಿದ್ದ ಇಂತದ್ದೇ ಅಭಿಪ್ರಾಯವನ್ನು ಕಂಡಿದ್ದೆ. 'ತಂದೆಯಂತೆ ಈಕೆ ಬ್ರಾಹ್ಮಣರ ಮೇಲೆ ಸದಾ ವಿಷಕಾರುತ್ತಿರುತ್ತಾಳೆ' ಎಂದಿತು ಆ ವಿವರಣೆ. ನನ್ನ ಮಟ್ಟಿಗೆ ಇದೊಂದು ರೀತಿಯ ತಂತ್ರಗಾರಿಕೆಯೇ ಹೌದು. ಬ್ರಾಹ್ಮಣಿಕೆ/ಬ್ರಾಹ್ಮಣವಾದದ ಕುರಿತ ವಿರೋಧವನ್ನು ಬ್ರಾಹ್ಮಣ ವಿರೋಧ ಎಂಬಂತೆ ಸಾರ್ವಜನಿಕವಾಗಿ ಬಿಂಬಿಸಿಕೊಳ್ಳುವ ತಂತ್ರಗಾರಿಕೆ ಇದು. ಅವರೆಲ್ಲ ಹೇಗೂ ಚಾಣಕ್ಯನ ವಂಶಜರಲ್ಲವೇ?

ಹೊಗಳಿಕೆ ತೆಗಳಿಕೆ

ಶಿವಸುಂದರರು ಬರೆದ 'ಕರ್ಕರೆಯನ್ನು ಕೊಂದವರ್‍ಯಾರು' ಲೇಖನದ ಮೂಲ ಪುಸ್ತಕ ಬರೆದ ಎಸ್.ಎಂ.ಮುಶ್ರಿಫ್‌ರೂ ಕೂಡ ಬ್ರಾಹ್ಮಣಿಕೆ/ಬ್ರಾಹ್ಮಣವಾದಿಗಳ ಕುರಿತು ಎಚ್ಚರಿಕೆ ನೀಡುತ್ತಾರೆಯೋ ವಿನಃ ಸಾರಾಸಗಟಾಗಿ ಬ್ರಾಹ್ಮಣರ ಬಗ್ಗೆ ಅಲ್ಲ, ಬ್ರಾಹ್ಮಣರ ವಿರುದ್ಧ ಗೌರಿ ಲಂಕೇಶ್ ವಿಷ ಕಾರುವುದು ಹೌದೇ ಆಗಿದ್ದರೆ ವೈದೇಹಿ, ಶೆಣೈ, ಸರ್ಜಾಶಂಕರ್, ಪಟ್ಟಾಭಿರಾಂ, ಸುರೇಶ್‌ಭಟ್ ಬಾಕ್ರಬೈಲು ಮುಂತಾದವರು ಯಾಕಾದರೂ ಅವರ ಹತ್ತಿರ ಸುಳಿಯುತ್ತಿದ್ದರು?

ಬ್ರಾಹ್ಮಣವಾದ ಎಂತಹ ಅನಾಹುತಕಾರಿ ಎಂಬುದನ್ನು 'ಕರ್ಕರೆಯನ್ನು ಕೊಂದವರ್‍ಯಾರು?' ಪುಸ್ತಕವೇ ವಿವರಿಸುತ್ತದೆ. ದೇಶದ ಅಖಂಡತೆಗೆ ಪೆಟ್ಟು ನೀಡಬಲ್ಲ ಈ ಬೆಳವಣಿಗೆಗಳ ವಿರುದ್ಧ ಜಾಗೃತಿ ಮೂಡಿಸುವಲ್ಲಿ ತಪ್ಪೇನಿಲ್ಲ.

ಅಂದಹಾಗೆ ಹೆಸರಿಲ್ಲದವನೊಬ್ಬ 'ದಲಿತನೊಬ್ಬ ಪೇಜಾವರ ಸ್ವಾಮಿಯಾದರೆ ದೇವರೇ ಗತಿ' ಎಂದಿದ್ದಾನೆ. ಅದಿರಲಿ, ದಲಿತ ಇಲ್ಲದಿದ್ದರೆ ಈ ನಿಮ್ಮ ಸೋಗಲಾಡಿ ಸ್ವಾಮಿಯೇ ಇರುತ್ತಿರಲಿಲ್ಲ ಎಂಬ ಸಂಗತಿ ಈ ಮಹಾಜ್ಞಾನಿಗೆ ಗೊತ್ತಿದ್ದಂತಿಲ್ಲ. ಅಸ್ಪೃಶ್ಯನಾಗಿದ್ದೂ ಮಾನವೀಯತೆ ದೃಷ್ಟಿಯಿಂದ ಬಾವಿಗೆ ಬಿದ್ದ ಪೇಜಾವರನನ್ನು ಬದುಕಿಸಿದ್ದ ದಲಿತನ ಸ್ಥಾನದಲ್ಲಿ ಸೋಗಲಾಡಿ ಪೇಜಾವರ ಇರುತ್ತಿದ್ದರೆ?

ರವಿ ಪುತ್ತೂರು, ದ.ಕ.

ಸಿನಿಮೀಯ ಸ್ವಾಗತ

ಕಳೆದೆರಡು
ಶಕಗಳಿಂದ
ತ್ರರಂಗದಲ್ಲಿರುವ ಎಸ್.
ರಾಯಣ್ ಈ
ವಧಿಯಲ್ಲಿ ಪತ್ರಿಕಾಗೋಷ್ಠಿ ಕರೆದದ್ದೇ ಒಂದೆರಡು ಬಾರಿ ಮಾತ್ರ. ಅದರಲ್ಲೂ ಪಂಚತಾರಾ ಹೋಟೆಲ್‌ನಲ್ಲಿ ಅವರೆಂದೂ ೋಷ್ಠಿ ಮಾಡಿರಲಿಲ್ಲ. ಆದರೆ ಮೊನ್ನೆ ನಾರಾಯಣ್ ಂಚತಾರಾ ಹೋಟೆಲ್‌ನಲ್ಲಿ ಪತ್ರಿಕಾಗೋಷ್ಠಿ ಕರೆದು ಎಲ್ಲರಲ್ಲಿ ಚ್ಚರಿ ಮೂಡಿಸಿದರು.

ಸಿನಿಮಾರಂಗದಲ್ಲಿ ನಾರಾಯಣ್ ಶಿಸ್ತಿನ ಕೆಲಸಗಾರ ಎಂದು ಸರು ಪಡೆದಿದ್ದಾರೆ. ಆದರೆ ಮಾಧ್ಯಮದಲ್ಲಿ ಅವರಿಗೆ ರೆಯದೇ ಇಮೇಜಿದೆ. ಅವರೆಂದೂ ಪತ್ರಕರ್ತರೊಂದಿಗೆ ೀಸಾಗಿ ಬೆರೆಯದಿರುವುದೇ ಇದಕ್ಕೆ ಮುಖ್ಯಕಾರಣವೂ ರಬಹುದು. ಇತ್ತೀಚೆಗೆ ನಾರಾಯಣ್ ಮತ್ತು ಪತ್ರಕರ್ತರ ತುವಿನ ಸಂಬಂಧ ಎಷ್ಟು ಕೆಟ್ಟುಹೋಗಿತ್ತೆಂದರೆ ಅವರು ನ್ನು ಚಿತ್ರದ ಮುಹೂರ್ತಕ್ಕೆ ಪತ್ರಕರ್ತರನ್ನು ಕರೆಯುವುದನ್ನೇ ಲ್ಲಿಸಿದರು. ಅಷ್ಟೇ ಅಲ್ಲ, ಚಿತ್ರೀಕರಣದ ತಾಣಕ್ಕೆ ಾಧ್ಯಮದವರನ್ನು ಕರೆಯುವ ರೂಢಿಗೆ ಗುಡ್‌ಬೈ ಹೇಳಿದರು. ತ್ರ ಬಿಡುಗಡೆಯಾಗುವಾಗ ಮಾತ್ರ ಪಿಆರ್‌ಓ ಮುಖಾಂತರ ಮರ್ಶಕರಿಗೆ ಚಿತ್ರವೀಕ್ಷಿಸುವ ವ್ಯವಸ್ಥೆ ಮಾಡುತ್ತಿದ್ದರು. ತೀರಾ ತ್ತೀಚೆಗೆ ಆ ವ್ಯವಸ್ಥೆಗೂ ಅವರು ತಿಲಾಂಜಲಿ ಇಟ್ಟಿದ್ದರು. ೇಕಾದರೆ ಪತ್ರಕರ್ತರೇ ಟಿಕೆಟ್ ಖರೀದಿಸಿ ಸಿನಿಮಾ ನೋಡಲಿ. ನ್ಯಾಕೆ ಅವರಿಗೆ ಸಿನಿಮಾ ತೋರಿಸಬೇಕು, ಸಿನಿಮಾ ್‌ಗಳನ್ನು ಯಾಕೆ ನೀಡಬೇಕು?" ಎಂಬ ನಿಲುವಿಗೆ ುದಿದ್ದರು ಎಸ್.ನಾಣಿ. ಆಗ ಪತ್ರಕರ್ತರು ತಾವೇ ಹಣಕೊಟ್ಟು ಮಾ ನೋಡಿ ಎಂದಿನಂತೆ ವಿಮರ್ಶೆಯ ಕೆಲಸವನ್ನು ಾಡುತ್ತಿದ್ದರು. ಅಂದಹಾಗೆ, ನಾರಾಯಣ್‌ರ ಮುದ್ದಿನ ಮಗ ಂಕಜ್ ನಟಿಸಿದ ಚಿತ್ರದ ಬಗ್ಗೆ ಕಟುವಾದ ವಿಮರ್ಶೆ ರೆದದ್ದೇ ಪತ್ರಕರ್ತರ ಮೇಲೆ ನಾರಾಯಣ್ ಇಷ್ಟೊಂದು ುನಿಸು ತೋರಿಸಲು ಮುಖ್ಯ ಕಾರಣ. ಅವರು ಅತಿಯಾದ ತ್ರ ವ್ಯಾಮೋಹಕ್ಕೆ ಬಿದ್ದು ಪತ್ರಿಕಾ ಮಾಧ್ಯಮವನ್ನೇ ದೂರವಿಟ್ಟಿದ್ದರು.





ಇಂತಹ ನಾರಾಯಣ್ ಮೊನ್ನೆ ತನ್ನ ಹೊಸ ಸಿನಿಮಾ 'ವೀರ ಪರಂಪರೆ'ಗೆ ಂಬಂಧಿಸಿದಂತೆ ಪಂಚತಾರಾ ಹೋಟೆಲ್‌ನಲ್ಲಿ ಪತ್ರಿಕಾಗೋಷ್ಠಿ ಕರೆದದ್ದು ೂಡ್ಡ ಆಶ್ಚರ್ಯವೇ ಸರಿ. ಆದರಲ್ಲೂ ಅಂದು ನಾರಾಯಣ್ ಸ್ವತಃ ವೇ ಬಾಗಿಲಲ್ಲಿ ನಿಂತು ಎಲ್ಲ ಪತ್ರಕರ್ತರನ್ನು ತುಂಬು ಹೃದಯದಿಂದ ್ವಾಗತಿಸುವ ಮೂಲಕ ಎಲ್ಲರನ್ನು ಬೆಚ್ಚಿ ಬೀಳಿಸಿದರು.

ಹೀಗೆ ಪತ್ರಕರ್ತರೊಂದಿಗೆ ಟೂ ಬಿಟ್ಟಿದ್ದ ಮತ್ತೊಬ್ಬ ನಿರ್ದೇಶಕ ಂದರೆ ರತ್ನಜಾ. ಅವರ ನಿರ್ದೇಶನದ ಎರಡನೇ ಚಿತ್ರ 'ಹೊಂಗನಸು' ರಿಕಂಡಾಗ ಪತ್ರಕರ್ತರೆಲ್ಲಾ ಆ ಚಿತ್ರವನ್ನು ಯದ್ವಾತದ್ವಾ ಬೈದು ಬರೆದರು. ಗ ಪತ್ರಕರ್ತರ ವಿಮರ್ಶೆಯ ಪಾವಿತ್ರ್ಯತೆಯ ಬಗ್ಗೆ ರತ್ನಜಾ ಅನುಮಾನ ್ಯಕ್ತಪಡಿಸಿದ್ದರಲ್ಲದೆ, ಪತ್ರಿಕೆಗಳಲ್ಲಿ ವಿಮರ್ಶಕರನ್ನೇ ಟೀಕಿಸಿ ಜಾಹೀರಾತುಗಳನ್ನೂ ೀಡಿದ್ದರು. "ವಿಮರ್ಶೆಯನ್ನು ಓದಿ ಯಾರೂ ಸಿನಿಮಾ ನೋಡಲು ರುವುದಿಲ್ಲ" ಎಂದು ವಿಮರ್ಶಕರನ್ನು ಹೀಯಾಳಿಸಿದ್ದರು. ಆದರೆ ಅವರೇನೇ ಾಡಿದರೂ ಅವರ 'ಹೊಂಗನಸು' ಬಾಕ್ಸಾಫೀಸ್‌ನಲ್ಲಿ ದುಃಸ್ವಪ್ನ ಕಂಡಿತು.

ಇನ್ನೊಮ್ಮೆ ಒಂದು ಪತ್ರಿಕಾಗೋಷ್ಠಿಯಲ್ಲಿ ರತ್ನಜಾ ಮತ್ತು ಾಧ್ಯಮದವರ ನಡುವೆ ಮಾತಿನ ಜಟಾಪಟಿ ನಡೆದು, ಆ ಗೋಷ್ಠಿಯಲ್ಲೇ ಸಂಗೀತ ನಿರ್ದೇಶಕ ಹಂಸಲೇಖ ಅವರು ರತ್ನಜಾಗೆ ಬುದ್ಧಿವಾದದ ಮಾತು ಹೇಳಿದ್ದರು.

ಆದರೀಗ ಪತ್ರಿಕೆಗಳನ್ನು ಕುರಿತು ಅದೇ ರತ್ನಜಾ ಅವರ ಮಾತು ಮತ್ತು ಶೈಲಿ ಸಂಪೂರ್ಣವಾಗಿ ಬದಲಾಗಿದೆ. ಮೊನ್ನೆ ಅವರ ನಿರ್ದೇಶನದ 'ಪ್ರೇಮಿಸಂ' ಚಿತ್ರ ಬಿಡುಗಡೆಯಾಗುವ ಮೊದಲು ರತ್ನಜಾ ಎಲ್ಲಾ ದಿನಪತ್ರಿಕೆಗಳಿಗೆ ದಿಢೀರ್ ಭೇಟಿ ನೀಡಿ ತನ್ನ ಚಿತ್ರದ ಬಗ್ಗೆ ಮಾಹಿತಿಯನ್ನು ನೀಡಿ ಪತ್ರಿಕೆಯಲ್ಲಿ ಸುದ್ದಿ ಬರುವಂತೆ ನೋಡಿಕೊಂಡರು. ಹಾಗೆಯೇ ಚಿತ್ರ ಬಿಡುಗಡೆ ನಂತರ ಒಳ್ಳೆ ವಿಮರ್ಶೆ ಬರೆದ ಪತ್ರಕರ್ತರಿಗೆಲ್ಲಾ ಥ್ಯಾಂಕ್ಸ್ ಅಂದರು. ಆ ವಿಮರ್ಶೆಗಳ ಸಾಲುಗಳನ್ನೇ ಪತ್ರಿಕೆಗಳಲ್ಲಿ ಜಾಹೀರಾತಾಗಿ ಉಪಯೋಗಿಸಿಕೊಂಡರು. ಅಷ್ಟೇ ಅಲ್ಲ; ಬಿಡುಗಡೆಯಾದ ಒಂದೇ ವಾರಕ್ಕೆ ಮತ್ತೊಮ್ಮೆ ಪತ್ರಿಕಾಗೋಷ್ಠಿ ಕರೆದು ಪತ್ರಕರ್ತರೊಂದಿಗೆ ಹರಟೆ ಹೊಡೆದರು.


ಪತ್ರಕರ್ತರೊಂದಿಗೆ ಹೀಗೆ ಶೀತಲಸಮರ ಸಾರಿದವರಲ್ಲಿ ನಾಯಕ ನಟ ಉಪೇಂದ್ರ ಕೂಡಾ ಒಬ್ಬರು. ಇತ್ತೀಚಿನ ವರ್ಷಗಳಲ್ಲಿ ಉಪೇಂದ್ರ ಮೀಡಿಯಾ ಜೊತೆ ಮನಬಿಚ್ಚಿ ಮಾತಾಡಿದ್ದೇ ಕಡಿಮೆ. ಶೂಟಿಂಗ್ ಸ್ಥಳಕ್ಕೆ ಹೋದ ಪತ್ರಕರ್ತರೊಂದಿಗೆ ಉಪ್ಪಿ ಮಾತಾಡಿದ್ದು ಅಪರೂಪಕ್ಕೆ. ಇದರಿಂದಾಗಿ ನಿರ್ಮಾಪಕರು ಮತ್ತು ನಿರ್ದೇಶಕರು ಉಪ್ಪಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದರು. "ನಮ್ಮ ಚಿತ್ರದ ನಾಯಕ ಪಬ್ಲಿಸಿಟಿ ಎಂದರೆ ಒಂದು ಮೈಲು ದೂರ ಹೋಗುತ್ತಾರೆ. ಚಿತ್ರದ ನಾಯಕಿಗೂ ಕನ್ನಡ ಬರಲ್ಲ, ಇನ್ನು ಚಿತ್ರಕ್ಕೆ ಪ್ರಚಾರ ಸಿಗುವುದು ಹೇಗೆ?" ಎಂದು ನಿರ್ಮಾಪಕರು ಗೋಗರೆಯುತ್ತಿದ್ದರು.

ಆದರೆ ಹತ್ತು ವರ್ಷಗಳ ನಿರ್ದೇಶನಕ್ಕೆ ಹಿಂದಿರುಗಿರುವ ಉಪ್ಪಿ ಮೊನ್ನೆ ಪತ್ರಕರ್ತರೊಂದಿಗೆ ಅದೇ ಹಳೆ ಸಲುಗೆ ಮತ್ತು ಪ್ರೀತಿಯಿಂದ ಮಾತನಾಡಲು ಶುರು ಮಾಡಿದರು. ಪಿಆರ್‌ಓ ಮುಖಾಂತರ ಎಲ್ಲಾ ಪತ್ರಕರ್ತರಿಗೆ ಫೋನಾಯಿಸಿ ಫೋನ್‌ನಲ್ಲೇ ಸಂದರ್ಶನಗಳನ್ನು ನೀಡಲಾರಂಭಿಸಿದರು. ಮೇಲ್ನೋಟಕ್ಕೆ ಇದು ಚಿಕ್ಕ ವಿಷಯದಂತೆ ಕಾಣಬಹುದು, ಆದರೆ ಇದರ ಹಿಂದೆ ಮುದ್ರಣ ಮಾಧ್ಯಮದ ಮಹತ್ವ ಅಡಗಿದೆ.

ಕರ್ನಾಟಕದಲ್ಲಿ ಟಿವಿ ಚಾನೆಲ್‌ಗಳ ಅಬ್ಬರ ಆರಂಭವಾದ ಕೂಡಲೇ ಉದ್ಯಮದವರೆಲ್ಲಾ ಪತ್ರಿಕೆಗಳನ್ನು ಬಿಟ್ಟು ಅತ್ತಕಡೆ ವಾಲಿದರು. ಒಬ್ಬೊಬ್ಬ ನಟರೂ ಒಂದೊಂದು ಚಾನೆಲ್‌ಗೆ ಅಂಟಿಕೊಂಡರು. ಆದರೆ ಚಾನೆಲ್‌ಗಳಲ್ಲಿ ಬರುವ ಸಿನಿಮಾ ಕಾರ್ಯಕ್ರಮಗಳು ಆ ಚಾನೆಲ್‌ನ ಟಿಆರ್‌ಪಿಯನ್ನು ಹೆಚ್ಚಿಸಿದವೇ ಹೊರತು ಅದರಿಂದ ಸಿನಿಮಾಕ್ಕಾಗಲಿ, ನಟನಟಿಯರಿಗಾಗಲಿ ಹೆಚ್ಚು ಲಾಭವಾಗಲಿಲ್ಲ. ಅದನ್ನು ಚಿತ್ರರಂಗದವರು ಈಗ ಅರಿತುಕೊಂಡಿರುವಂತಿದೆ. ಯಾಕೆಂದರೆ ಸಿನಿಮಾ ನೋಡುವ ಪ್ರೇಕ್ಷಕ ಇಂದಿಗೂ ಮುದ್ರಣ ಮಾಧ್ಯಮದಲ್ಲಿ ಬರುವ ಕಥೆ-ಗಾಸಿಪ್ಪು ಮತ್ತು ವರದಿಗಳನ್ನೇ ನಂಬುತ್ತಾನೆ. ಈ ಸಾಂಪ್ರದಾಯಕ ಶೈಲಿಯ ಪ್ರಚಾರವನ್ನು ಅಷ್ಟು ಸುಲಭವಾಗಿ ಅಲುಗಾಡಿಸಲು ಯಾರಿಂದಲೂ ಸಾಧ್ಯವಿಲ್ಲ. ಹೀಗಾಗಿಯೇ ಎಸ್.ನಾರಾಯಣ್, ರತ್ನಜಾ, ಉಪ್ಪಿ... ಮೊದಲಾದವರು ಮತ್ತೆ ಮುದ್ರಣ ಮಾಧ್ಯಮದ ಕಡೆಗೆ ಕಣ್ಣು ಹಾಯಿಸಿದ್ದಾರೆ.

• ಶೆಣೈ
shenoylankesh@gmail.com

ಮಗನ ನೋವಿನಲಿ ಮಧು



ಸಿನಿಮಾಗಳಿಗೆ ಭಾವನಾತ್ಮಕ ಸಂಭಾಷಣೆಯನ್ನು ಬರೆಯುತ್ತಾ, ತಮ್ಮ ಮಾತಿನ ಶೈಲಿಯ ಮೂಲಕ ನೋಡುಗರನ್ನು ನಗಿಸುವ, ಅವರ ಕಣ್ಣಿನಲ್ಲಿ ನೀರುಕ್ಕುವಂತೆ ಮಾಡುವ ಬಿ.ಎ. ಮಧು ಕನ್ನಡ ಚಿತ್ರರಂಗದ ಕ್ರಿಯಾಶೀಲ ಸಂಭಾಷಣಾಕಾರ. ಸದಾ ಮಾತು ಪೋಣಿಸುತ್ತಾ, ಪಾತ್ರಗಳಿಗೆ ಜೀವ ತುಂಬುವ ಮಧು ಈಗ ದುಃಖವನ್ನು ಭರಿಸಲಾಗದೇ ಮೌನಿಯಾಗಿದ್ದಾರೆ.

ಅವರ ದುಃಖಕ್ಕೆ ಕಾರಣ, ತೋಳೆತ್ತರಕ್ಕೆ ಬೆಳೆದು ನಿಂತ ಮಗ ಬಿ.ಎಂ.ಅಂಶುಮಾನ್ ಪ್ರಾಣ ಬಿಟ್ಟಿರುವುದು.

ಕೇವಲ 19ನೇ ವರ್ಷದ ಅಂಶುಮಾನ್ ಮೈಸೂರಿನ ಎನ್.ಐ.ಇ. ಕಾಲೇಜಿನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಓದುತ್ತಿದ್ದ. ಈಗ್ಗೆ ಒಂದೂ ಕಾಲು ತಿಂಗಳ ಹಿಂದಷ್ಟೇ ತನ್ನೊಟ್ಟಿಗೆ ಓದುವ ಹುಡುಗಿಯೊಬ್ಬಳನ್ನು ಆತ ಪ್ರೀತಿಸಲಾರಂಭಿಸಿದ್ದ. ಆ ವಯಸ್ಸಿಗೆ ಸಹಜವಾದ ಮುಗ್ಧತೆಯ ಜೊತೆಗಿನ ಭಾವುಕತೆಯಿಂದಾಗಿ ಆಕೆಯನ್ನು ಆತ ತುಂಬಾ ಹಚ್ಚಿಕೊಂಡಿದ್ದಾನೆ. ಆದರೆ ಒಂದು ದಿನ ಅವರಿಬ್ಬರ ನಡುವೆ ಅದೇನು ಭಿನ್ನಾಭಿಪ್ರಾಯ ಮೂಡಿತೋ, ಗೊತ್ತಿಲ್ಲ. ಇದ್ದಕ್ಕಿದ್ದಹಾಗೆ ಆ ಹುಡುಗಿ "ಇನ್ಮೇಲೆ ನನ್ನನ್ನು ಮಾತಾಡಿಸ್ಬೇಡ" ಎಂದುಬಿಟ್ಟಿದ್ದಾಳೆ.

ಬದುಕು ಅಂದರೆ ಏನು ಎಂದೇ ತಿಳಿಯದ ಆ ಹದಿಹರೆಯದ ಯುವಕ ಅಷ್ಟಕ್ಕೇ ಬೇಸರಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕಳೆದ ಶನಿವಾರ ಮೈಸೂರಿನ ತನ್ನ ಮನೆಯಲ್ಲೇ ನೇಣು ಬಿಗಿದುಕೊಂಡು ಅಂಶುಮಾನ್ ಪ್ರಾಣ ಕಳೆದುಕೊಂಡಿದ್ದಾನೆ.

ಹಾಗೆಂದು ಅಂಶುಮಾನ್ ಕೆಟ್ಟ ಹುಡುಗನಲ್ಲ, ಹುಡುಗಿಯರ ಗೀಳು ಹೊತ್ತಿಸಿಕೊಂಡ ಪುಂಡನೂ ಅಲ್ಲ. ಮೊದಲಿನಿಂದಲೂ ಓದಿನಲ್ಲಿ ಮುಂದಿದ್ದ ಯುವಕನಾತ. ಇಂಥ ಹುಡುಗ ಅದ್ಯಾವ ಘಳಿಗೆಯಲ್ಲಿ ಲವ್ ಅಫೆಕ್ಷನ್‌ಗೆ ಒಳಗಾದನೋ? ಈಗ ತನ್ನ ತಂದೆ, ತಾಯಿ, ತನ್ನ ಇಡೀ ಮನೆಯನ್ನೇ ದುಃಖದಲ್ಲಿ ಮುಳುಗುವಂತೆ ಮಾಡಿದ್ದಾನೆ.

ಮೂಲತಃ ಚಾಮರಾಜನಗರದ ಬಸವೇನಹಳ್ಳಿಯವರಾದ ಮಧು ಮೊದಲಿನಿಂದಲೂ ಮೈಸೂರಿನಲ್ಲೇ ನೆಲೆಸಿದವರು. ಸಾಮಾನ್ಯವಾಗಿ ಗಾಂಧಿನಗರದ ನಂಟಿಗೆ ಬಿದ್ದ ಮಂದಿ ಮೂಲಸ್ಥಳವನ್ನು ಬಿಟ್ಟು ಬೆಂಗಳೂರಿನಲ್ಲೇ ನೆಲೆಸುವುದು ವಾಡಿಕೆ. ಆದರೆ ಮಧು ಮಾತ್ರ ಮೈಸೂರು ವ್ಯಾಮೋಹಿ. ಎರಡು ವರ್ಷಗಳ ಹಿಂದೆಯಷ್ಟೇ ಮೈಸೂರಿನ ಕುವೆಂಪು ನಗರದಲ್ಲಿ ಸ್ವಂತಕ್ಕೊಂದು ಚೊಕ್ಕವಾದ ಮನೆಯೊಂದನ್ನು ನಿರ್ಮಿಸಿಕೊಂಡಿದ್ದರು.


ಹಿರಿಯ ನಿರ್ದೇಶಕ ಸಿದ್ದಲಿಂಗಯ್ಯನವರ 'ಬಾ ನನ್ನ ಪ್ರೀತಿಸು' ಚಿತ್ರದಲ್ಲಿ ಸಂಭಾಷಣೆ ಬರೆಯುವ ಮೂಲಕ ಚಿತ್ರರಂಗಕ್ಕೆ ಎಂಟ್ರಿಕೊಟ್ಟ ಮಧು ಎಸ್.ಮಹೇಂದರ್‌ರ ಸೆಂಟಿಮೆಂಟ್ ಚಿತ್ರಗಳಲ್ಲೇ ಹೆಚ್ಚು ಖ್ಯಾತಿ ಪಡೆದದ್ದು. ನಂತರ ಇಂದ್ರಜಿತ್ ಲಂಕೇಶ್ ಸೇರಿದಂತೆ ಕನ್ನಡದ ಹಲವಾರು ಯುವ ನಿರ್ದೇಶಕರ ಸಿನಿಮಾಗಳಿಗೂ ತಮ್ಮ ಮಾತಿನ ಲಹರಿಯನ್ನು ಹರಿಸುತ್ತಾ ಬಂದಿದ್ದಾರೆ. ಮಧು 'ಮಳೆ ಬರಲಿ ಮಂಜೂ ಇರಲಿ' ಚಿತ್ರದ ತನಕ ಕನ್ನಡದ 50 ಚಿತ್ರಗಳಿಗೆ ಸಂಭಾಷಣೆ ಬರೆದಿದ್ದಾರೆ. ದರ್ಶನ್, ಶಿವಣ್ಣ, ಪುನೀತ್‌ರಂಥ ಸ್ಟಾರ್ ನಟರ ಚಿತ್ರಗಳಿಗೆ ಸಂಭಾಷಣೆ ಬರೆಯುವ ಮಧು ಇನ್ನೇನು ಬಿಡುಗಡೆಗೆ ಸಿದ್ಧವಾಗಿರುವ ಪುನೀತ್‌ರ 'ಪೃಥ್ವಿ' ಚಿತ್ರಕ್ಕೂ ಡೈಲಾಗು ರಚಿಸಿದ್ದಾರೆ. ಕನ್ನಡದಲ್ಲಿ ಇಷ್ಟೊಂದು ಸಂಖ್ಯೆಯ ಚಿತ್ರಗಳಿಗೆ ದುಡಿದಿದ್ದರೂ ಅವರು ಯಾವತ್ತೂ ಯಾರೊಂದಿಗೂ ಕದನಕ್ಕೆ ನಿಂತವರಲ್ಲ. ಸಿನಿಮಾಗೆ ಪರಿಣಾಮಕಾರಿ ಶಬ್ದಗಳನ್ನು ಸೃಷ್ಟಿಸುವ ಮಧು ಇವತ್ತಿಗೂ ಮೃದು ಭಾಷಿಯಾಗೇ ಉಳಿದಿದ್ದಾರೆ.

ಕನ್ನಡದ ಹಲವಾರು ಸೆಂಟಿಮೆಂಟ್ ಚಿತ್ರಗಳಿಗೆ ಸಂಭಾಷಣೆ ರಚಿಸಿ, ದುರಂತಮಯ ಕಥೆಗಳಿಗೆ ಮನಮಿಡಿಯುವ ಸಾಲುಗಳನ್ನು ಹೆಣೆದು ಸೈ ಎನಿಸಿಕೊಂಡಿರುವ ಬರಹಗಾರ ಮಧು ಈಗ ವಾಸ್ತವದಲ್ಲಿ ಹೆತ್ತ ಮಗನನ್ನೇ ಕಳೆದುಕೊಂಡು ಮಾನಸಿಕವಾಗಿ ಕುಸಿದಿದ್ದಾರೆ.

ಸಾಂತ್ವನ ಹೇಳುವುದೊಂದೇ ಎಲ್ಲರಿಗೂ ಉಳಿದಿರುವ ದಾರಿ...


arunodayagc@gmail.com

ಮೈಲಾರಿಯ ಜಾತಿ ವಾಸನೆ



ಮೊನ್ನೆ ಶಿವರಾಜ್‌ಕುಮಾರ್ ಅವರ 99ನೆಯ ಚಿತ್ರ 'ಮೈಲಾರಿ' ಅದ್ದೂರಿಯಿಂದ ಆರಂಭವಾಗಿದ್ದು ನಿಮಗೆಲ್ಲಾ ತ್ತೇ ಇದೆ. ಯುವ ನಿರ್ದೇಶಕ ಆರ್.ಚಂದ್ರು ಅವರ ಮೂರನೆಯ ಚಿತ್ರವಿದು. ಅಂದು ಮುಹೂರ್ತಕ್ಕೆ ಕಾಂಗ್ರೆಸ್‌ನ ಯಕ ಸಿದ್ದರಾಮಯ್ಯ ಆಗಮಿಸಿದ್ದರು. ಸಿದ್ದಣ್ಣ ಬಂದಾಕ್ಷಣ ಚಂದ್ರು ರೋಮಾಂಚನಗೊಂಡು ಅವರ ಕಾಲಿಗೆ ಬಿದ್ದರು.

ಇದೆಲ್ಲವನ್ನು ಗಮನಿಸಿದರೆ ಚಂದ್ರುವಿಗೆ ಸಿನಿಮಾಕ್ಕಿಂತ ಬೇರೆ ವಿಷಯದಲ್ಲೇ ಹೆಚ್ಚು ಆಸಕ್ತಿ ಇದ್ದಂತೆ ಕಾಣಿಸುತ್ತದೆ. ದ್ರು ಕುರುಬ ಜನಾಂಗಕ್ಕೆ ಸೇರಿದವರು. ತಮ್ಮ ಚಿತ್ರಕ್ಕೆ 'ಮೈಲಾರಿ' ಎಂಬ ಹೆಸರು ಬೇಕೇ ಬೇಕು ಎಂದು ಆತ ಹಠ ಡಿಯಲು ಕೂಡಾ ಅದೇ ಕಾರಣ. ಯಾಕೆಂದರೆ ಮೈಲಾರಲಿಂಗೇಶ್ವರ ಕುರುಬ ಜನಾಂಗ ನಂಬಿಕೊಂಡು ಬಂದಿರುವ ವರು. ಹೀಗಾಗಿ ಚಿತ್ರದ ಜಾಹೀರಾತಿನಲ್ಲೂ ದೇವರ ಚಿತ್ರವಿತ್ತು. ಇದೆಲ್ಲಾ ಸಾಕಾಗಲಿಲ್ಲವೆಂಬಂತೆ ಮುಹೂರ್ತಕ್ಕೆ ುಬ ನಾಯಕ ಸಿದ್ದರಾಮಯ್ಯ ಅವರನ್ನೂ ಆಹ್ವಾನಿಸಿದ್ದರು. ಅಷ್ಟೇ ಅಲ್ಲ, ಮುಹೂರ್ತವಾದ ಮರುವಾರ ಪತ್ರಿಕೆಗಳಲ್ಲಿ ತ್ತೊಮ್ಮೆ ಶಿವರಾಜ್‌ಕುಮಾರ್, ಸಿದ್ದರಾಮಯ್ಯ ಮತ್ತು ಚಂದ್ರು ೋಟೋಗಳು ಜಾಹೀರಾತಿನಲ್ಲಿ ರಾರಾಜಿಸಿದವು. ಇದೆಲ್ಲ ಏನನ್ನು ಸೂಚಿಸುತ್ತದೆ? ಇನ್ನೂ ನೆಟ್ಟಗೆ ಎರಡು ಚಿತ್ರ ಮುಗಿಸದಿರುವ ಚಂದ್ರು ಸಿನಿಮಾಕ್ಕೆ ಜಾತಿಯ ಲೇಪನ ನೀಡುತ್ತಿದ್ದಾರೆ ಎಂದಲ್ಲವೇ? ಒಂದು ಉತ್ತಮ ಚಿತ್ರ ಮಾಡುವ ಬಗ್ಗೆ ತಲೆಕೆಡಿಸಿಕೊಳ್ಳದ ಈತ ಇಂತಹ ಗಿಮಿಕ್‌ಗಳಿಗೆ ತೃಪ್ತಿ ಪಡುತ್ತಿರುವುದು ಬೇಸರದ ವಿಷಯ.



ಚಂದ್ರುಗೆ ಒಂದು ವಿಷಯ ಗೊತ್ತಿರುವಂತಿಲ್ಲ. ಅನೇಕ ವರ್ಷಗಳ ದೆ ಇದೇ ಶಿವರಾಜ್‌ಕುಮಾರ್ 'ಕುರುಬನ ರಾಣಿ' ಎಂಬ ಚಿತ್ರದಲ್ಲಿ ಯಕನಾಗಿ ನಟಿಸಿದಾಗ ಅಲ್ಲಿ ಯಾವುದೇ ಕುರುಬ ನಾಯಕ ಬಂದು ಪ ಹಾರೈಸಲಿಲ್ಲ. ಅಥವಾ ಈ ಚಿತ್ರ ಬಿಡುಗಡೆಯಾದಾಗ ಸಮಸ್ತ ುಬ ಬಾಂಧವರು ಇದು ತಮ್ಮ ಚಿತ್ರ ಎಂದು ಜೌಹಾರಿ ಚಿತ್ರ ್ಷಿಸಲೂ ಇಲ್ಲ.


ಕಲೆಗೆ ಜಾತಿಯ ಮತ್ತು ರಾಜಕಾರಣದ ಬಣ್ಣ ಬಳಿಯುವುದು ಚಿತವಾಗಿಯೂ ಒಳ್ಳೆಯ ಲಕ್ಷಣವಲ್ಲ. •


ಅಸುರಪ್ಪನ ಬಾಂಬು

ಸಿನಿಮಾ ಪತ್ರಕರ್ತರನ್ನು ಕಂಡರೆ ಕೆಲವು ನಿರ್ಮಾಪಕರಿಗೆ, ನಿರ್ದೇಶಕರಿಗೆ ಮೊದಲಿನಿಂದಲೂ ಅದೇನೋ ಒಂಥರಾ ಉರಿಉರಿ..

ಮೊನ್ನೆ ಅಂತಹದ್ದೊಂದು ಪ್ರಕರಣ ನಡೆದಿದೆ.

ಪುನೀತ್ ರಾಜ್‌ಕುಮಾರ್ ನಾಯಕನಾಗಿ ಅಭಿನಯಿಸಿರುವ 'ಪೃಥ್ವಿ' ಚಿತ್ರದ ಪತ್ರಿಕಾಗೋಷ್ಠಿ ನಂ 37, ಕ್ರೆಸೆಂಟ್ ಎಂಬ ಐಶಾರಾಮಿ ಹೋಟೆಲ್‌ನಲ್ಲಿ ನಡೆಯಿತು. ಈ ಪತ್ರಿಕಾಗೋಷ್ಠಿಯಲ್ಲಿ ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ, 'ನಮ್ಮ' ಸಿನಿಮಾದಲ್ಲಿ ಪದ್ಮಭೂಷಣ ಕಮಲ್‌ಹಾಸನ್ ಅವರ ಮಗಳು ಶ್ರುತಿ ಒಂದು ಹಾಡನ್ನು ಅದ್ಭುತವಾಗಿ ಹೇಳಿದ್ದಾರೆ' ಎಂದು ಹೇಳಿದರು. ತಕ್ಷಣ ಶರಣು ಹುಲ್ಲೂರು ಎಂಬ ಸಿನಿಮಾ ಪತ್ರಿಕೆಯೊಂದರ ವರದಿಗಾರ "ಈ ಹಾಡು ಹೇಳಲು ಶ್ರುತಿ ಎಷ್ಟು ಟೇಕ್‌ಗಳನ್ನು ತೆಗೆದುಕೊಂಡರು?" ಎಂದು ಕೇಳಿದರು. ಕದ್ರಿ ಅವರಿಂದ ಉತ್ತರವನ್ನೂ ಪಡೆದುಕೊಂಡರು. ಪತ್ರಿಕಾಗೋಷ್ಠಿಯೂ ಮುಗಿಯಿತು...





ಶರಣು ಅವರ ಈ ಪ್ರಶ್ನೆ 'ಪೃಥ್ವಿ' ನಿರ್ಮಾಪಕ ಸೂರಪ್ಪ ಬಾಬು ಕಿವಿಗೆ ಹೇಗೆ ಕೇಳಿಸಿತೋ ಗೊತ್ತಿಲ್ಲ, ನಡುರಾತ್ರಿ ಹನ್ನೆರಡೂವರೆಗೆ ಶರಣು ಅವರಿಗೆ ಫೋನ್ ಮಾಡಿದ ಸೂರಪ್ಪ ಬಾಬು 'ಅಮ್ಮ, ಅಕ್ಕ'ಗಳ ಸುರಿಮಳೆಯನ್ನೇ ಸುರಿಸಿದ್ದಾನೆ. "ನನ್ನ ಮಗನೇ, ನನ್ನ ಸಿನಿಮಾ ಪ್ರೆಸ್‌ಮೀಟ್‌ನಲ್ಲೇ ಪ್ರಶ್ನೆ ಕೇಳೋ ಧೈರ್ಯಾನಾ ನಿನಗೆ" ಎಂದು ಕೆಟ್ಟಾಕೊಳಕು ಮಾತುಗಳಿಂದ ಶರಣು ಅವರನ್ನು ನಿಂದಿಸಿದ್ದಾನೆ.

ಕನ್ನಡದ ಒಳ್ಳೊಳ್ಳೆ ಧಾರಾವಾಹಿಗಳಿಗೆ ಸ್ಕ್ರಿಪ್ಟು, ಸಂಭಾಷಣೆ ಬರೆಯುತ್ತಾ ಸಿನಿಮಾ ಸುದ್ದಿಗಳನ್ನೂ ವರದಿ ಮಾಡುವ ಶರಣು ಮೊದಲೇ ಸಾಫ್ಟ್ ನೇಚರ್‌ನ ಯುವಕ. ಸೂರಪ್ಪನ ಎಗರಾಟದಿಂದ ಮತ್ತು ಅಶ್ಲೀಲ ಮಾತುಗಳಿಂದ ಆತ ತುಂಬಾ ನೊಂದಿದ್ದಾರೆ.

ಇಷ್ಟಕ್ಕೂ ಪತ್ರಿಕಾಗೋಷ್ಠಿ ನಡೆಸಿ, ಪತ್ರಕರ್ತರನ್ನು ಆಹ್ವಾನಿಸಿ 'ಪ್ರಶ್ನೆ ಕೇಳಬೇಡಿ' ಎಂಬ ಸೂರಪ್ಪ ಬಾಬುನ ನಿಲುವು ಎಷ್ಟು ಸರಿ? ಇದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಪತ್ರಕರ್ತರಿಗೇ ಧಮಕಿ ಹಾಕುವ ಇಂಥ ಉಢಾಳರನ್ನು ಛೇಂಬರ್ ಮತ್ತು ನಿರ್ಮಾಪಕರ ಸಂಘ ಸುಮ್ಮನೆ ಬಿಡಬೇಕಾ?

ಕಲಾ ಸಾಂಬ್ರಾಣಿಯ ಓಳು ಪರಂಪರೆ



ಚಿತ್ರರಂಗದ ಜನ ಪ್ರಚಾರಕ್ಕೋಸ್ಕರ ಏನೆಲ್ಲಾ ಮಾಡುತ್ತಾರೆ, ಎಂತೆಂಥಾ ಘೋರ ಸುಳ್ಳುಗಳನ್ನೂ ಸರಾಗವಾಗಿ ಹೇಳಿಬಿಡುತ್ತಾರೆ, ಸತ್ತವರ ಹೆಸರಲ್ಲಿ ಬದುಕಿರುವವರಿಗೇ ಧೂಪ ಹಾಕಿಬಿಡುತ್ತಾರೆ ಎನ್ನುವುದಕ್ಕೆ ಕಲಾ ಸಾಂಬ್ರಾಣಿ ಎಸ್. ನಾರಾಯಣ್ ಎಂಬಾತ ದೊಡ್ಡ ನಿದರ್ಶನ.

ಸಾಹಸಸಿಂಹ ವಿಷ್ಣುವರ್ಧನ್ ತೀರಿಕೊಂಡ ಸಂದರ್ಭದಲ್ಲಿ ಈ ನಾಣಿ ಮಾಧ್ಯಮದವರ ಬಳಿ ಕಲರ್‌ಫುಲ್ ಕಥೆಗಳನ್ನು ಹೇಳಿ ಪಬ್ಲಿಸಿಟಿಯನ್ನು ಪಡೆದಿದ್ದರು. "ವಿಷ್ಣು ವರ್ಧನ್ ಅವರು ಸಿನಿಮಾ ನಟನೆಗೆ ವಿದಾಯ ಹೇಳುವ ಮನಸ್ಸು ಮಾಡಿದ್ದರು. 'ಸಾಯಿಬಾಬಾ' ಅವರ ಜೀವನ ಕುರಿತು ಸಿನಿಮಾವೊಂದನ್ನು ನಿರ್ದೇಶಿಸು ಎಂದು ನನಗೆ ಹೇಳಿದ್ದರು. ಅದರಲ್ಲಿ ಬಾಬಾ ಪಾರ್ಟನ್ನು ತಾವೇ ಮಾಡುತ್ತೇವೆ ಅಂದಿದ್ದರು. ಅವರ ಕೊನೆ ಚಿತ್ರವನ್ನು ಕೂಡಾ ನಾನೇ ನಿರ್ದೇಶಿಸಬೇಕು ಎಂಬುದು ವಿಷ್ಣು ಹೆಬ್ಬಯಕೆಯಾಗಿತ್ತು.. ಅದಕ್ಕಾಗಿ ನಾನು ತಿಂಗಳುಗಟ್ಟಲೆ ಕೂತು ಕಥೆ ಬರೆದು ಅದಕ್ಕೆ 'ವೀರ ಪರಂಪರೆ' ಎಂದು ಹೆಸರಿಟ್ಟಿದ್ದೆ. ಈ ಚಿತ್ರದಲ್ಲಿ ವಿಷ್ಣು ಶಿವಣ್ಣನೊಂದಿಗೆ ನಟಿಸಬೇಕಿತ್ತು, ಶಿವಣ್ಣನ ಬಳಿ ಈ ಸಿನಿಮಾದಲ್ಲಿ ನಟಿಸಲು ಕೇಳಿಕೊಂಡಾಗ "ನನಗೆ ಅಪ್ಪಾಜಿ ಮತ್ತು ವಿಷ್ಣು ಅಂಕಲ್ ಜೊತೆ ನಟಿಸಬೇಕು ಎಂಬುದು ಮೊದಲಿನಿಂದಲೂ ಇರುವ ಆಸೆ. ಆದರೆ ಅಪ್ಪಾಜಿ ಜೊತೆ ನಟಿಸಲು ಆಗಲಿಲ್ಲ, ವಿಷ್ಣು ಅಂಕಲ್ ಜೊತೆಯಾದ್ರೂ ನಟಿಸುತ್ತೇನೆ" ಎಂದು ಒಪ್ಪಿದ್ದರು. ಈ ಚಿತ್ರಕ್ಕಾಗಿ ಒಂದು ರೂಪಾಯಿಯ ಸಂಭಾವನೆಯನ್ನು ತನಗೆ ಕೊಡಕೂಡದೆಂದು ವಿಷ್ಣು ಅವರು ಷರತ್ತು ಹಾಕಿದ್ದರು. ಏಪ್ರಿಲ್ ತಿಂಗಳಲ್ಲಿ 120 ದಿನಗಳ ಚಿತ್ರೀಕರಣವನ್ನು ನಡೆಸಲು ಎಲ್ಲಾ ಸಿದ್ಧತೆಗಳು ನಡೆದಿತ್ತು, ಆದರೆ ವಿಷ್ಣು ಬದುಕಿನಲ್ಲಿ ವಿಧಿ ಹೀಗೆ ಅಡ್ಡಬರಬಾರದಿತ್ತು..." ಈ ಮಾತುಗಳನ್ನು ವಿಷ್ಣು ತೀರಿಕೊಂಡಾಗ, ಅಂದರೆ ಕೇವಲ ಮೂರು ತಿಂಗಳುಗಳ ಹಿಂದೆ ನಾರಾಯಣ್ ಹೇಳಿದ್ದರು. ಅಷ್ಟೇ ಅಲ್ಲ, ಇಂತಹದ್ದೇ ಮಾತುಗಳನ್ನು ಸಂದರ್ಶನಗಳಲ್ಲೂ ಆಡುತ್ತಾ ಗಳಗಳನೆ ಕಣ್ಣೀರು ಹರಿಸಿದ್ದರು.



"ಈ ಚಿತ್ರವನ್ನು ಈಗ ಯಾರೊಂದಿಗೆ ಮಾಡುತ್ತೀರಿ" ಎಂದು ಅಂದು ಪ್ರಶ್ನಿಸಿದರೆ "ಇವು ವಿಷ್ಣು ಮತ್ತು ಶಿವಣ್ಣರಿಗೇ ಸೃಷ್ಟಿಸಿದ ಪಾತ್ರಗಳು. ಒಂದು ವೇಳೆ ನಾನು ಈ ಪಾತ್ರಗಳನ್ನು ಬೇರೆ ನಟರಿಂದ ಮಾಡಿಸಿದರೆ, ಅದು ನನ್ನ ಸ್ವಯಂಕೃತ ಅಪರಾಧವಾಗುತ್ತದೆ..." ಎಂದೂ ಘೋಷಿಸಿದ್ದರು ನಾಣಿ.

ಆದರೆ ನಾಣಿ ಈಗ ಪ್ಲೇಟು ತಿರುಗಿಸಿದ್ದಾರೆ.

"ನನಗೆ ಒಂದೇ ಚಿತ್ರದಲ್ಲಿ ಸುದೀಪ್ ಮತ್ತು ಅಂಬರೀಶ್ ಅವರನ್ನು ಹಾಕಿಕೊಂಡು ಸಿನಿಮಾ ಮಾಡುವ ಬಯಕೆ ಇದ್ದಕ್ಕಿದ್ದಂತೆ ಬಂದುಬಿಟ್ಟಿತು. ಹೀಗಾಗಿ ರಾತ್ರೋರಾತ್ರಿ ಕೂತು ಕಥೆ, ಚಿತ್ರಕಥೆ ಬರೆದು 'ವೀರ ಪರಂಪರೆ'ಯನ್ನು ಸೃಷ್ಟಿಸಿದ್ದೇನೆ... ಈ ಪಾತ್ರಗಳಿಗೆ ಅಂಬಿ ಮತ್ತು ಸುದೀಪ್ ಬಿಟ್ಟರೆ ಬೇರೆ ಯಾರಿಂದಲೂ ಜೀವ ತುಂಬಲು ಆಗುವುದಿಲ್ಲ..." - ಇದು ನಾಣಿಯ ಇವತ್ತಿನ ಮಾತುಗಳು...

ವಿಷ್ಣು ಸತ್ತಾಗ ತಾವಾಡಿದ ಮಾತುಗಳನ್ನು ಸ್ವತಃ ನಾಣಿಯೇ ಮರೆತುಬಿಟ್ಟಂತೆ ಕಾಣುತ್ತಿದೆ. ಯಾವ ಪಾತ್ರಗಳನ್ನು 'ವಿಷ್ಣು-ಶಿವಣ್ಣನಿಗಾಗಿ ಸೃಷ್ಟಿಸಿದ್ದೇನೆ' ಎನ್ನುತ್ತಿದ್ದ ಅದೇ ನಾಣಿ, ತಮ್ಮ ಅದೇ ಬಾಯಲ್ಲಿ 'ಇದು ಅಂಬಿ-ಸುದೀಪ್‌ಗಾಗೇ ಹೆಣೆದ ಕಥೆ' ಎಂದು ಪುಂಗಿ ಊದುತ್ತಿದ್ದಾರೆ.

ಕಾಲಕ್ಕೆ, ಸಮಯಕ್ಕೆ ತಕ್ಕಂತೆ ಮಾತು ಬದಲಿಸುವ ಈ ಕಲಾಸಾಂಬ್ರಾಣಿಯಂಥ ಮನುಷ್ಯನನ್ನು, ಆತನ ಮಾತನ್ನು ನಂಬುವುದಾದರೂ ಹೇಗೆ?

ರಮ್ಯಾ ದಂಡಂ ದಶಗುಣಂ



ರಮ್ಯಾಳ ವಯಸ್ಸು ದಿನದಿನಕ್ಕೆ ಕಡಿಮೆಯಾಗುತ್ತಾ ಹೋಗುತ್ತಿದೆ. ಹೀಗೆಂದು ಗಾಂಧಿನಗರದ ಜನ ಹೇಳುತ್ತಿದ್ದಾರೆ. ಈ ಮಾತನ್ನು ನಂಬುವಂತೆ ರಮ್ಯಾ ಕೂಡಾ ನಡೆದುಕೊಳ್ಳುತ್ತಿದ್ದಾಳೆ. ಮುಂದಿನ ವಾರ ಚಿರಂಜೀವಿ ಸರ್ಜಾ ಜೊತೆ ಆಕೆ ನಾಯಕಿಯಾಗಿ ನಟಿಸಲಿರುವ 'ದಂಡಂ, ದಶಗುಣಂ' ಎಂಬ ಚಿತ್ರ ಸೆಟ್ಟೇರಲಿದೆ. ಚಿರಂಜೀವಿ ಸರ್ಜಾ ಇತ್ತೀಚೆಗಷ್ಟೇ ಕನ್ನಡ ಚಿತ್ರರಂಗದ ದಿಗಂತದಲ್ಲಿ ಕಾಣಿಸಿಕೊಂಡ ಹೊಸತಾರೆ.

ಹೀಗೆ ತನಗಿಂತ ಹೊಸಬರಾದ ನಾಯಕ ನಟರ ಜೊತೆ ಸತತವಾಗಿ ಅವಕಾಶ ಗಿಟ್ಟಿಸಿಕೊಳ್ಳುತ್ತಿರುವ ರಮ್ಯಾ ತಾನಿನ್ನೂ ಸ್ವೀಟ್ ಸಿಕ್ಸ್‌ಟೀನ್ ಎಂಬ ಭಾವನೆ ಮೂಡಿಸುತ್ತಿದ್ದಾಳೆ. ಉದಾಹರಣೆಗೆ 'ಮುಂಗಾರು ಮಳೆ' ಖ್ಯಾತಿಯ ನಂತರ ಗಣೇಶ ಜೊತೆ ಈಕೆ ಕಾಣಿಸಿಕೊಂಡಳು. ಅದಕ್ಕಿಂತ ಮೊದಲು 'ನೆನಪಿರಲಿ' ಚಿತ್ರದಲ್ಲಿ ಪ್ರೇಮ್‌ಗೆ ನಾಯಕಿಯಾಗಿದ್ದಳು. ಗಣೇಶ್ ಮತ್ತು ಪ್ರೇಮ್ ವಯಸ್ಸಿನಲ್ಲಿ ಆಕೆಗಿಂತ ಹಿರಿಯರಾದರೂ ಉದ್ಯಮದಲ್ಲಿ ಆಕೆಗಿಂತ ಜೂನಿಯರ್‌ಗಳಾಗಿದ್ದವರು. ಇದಾದನಂತರ ಆದಿತ್ಯಬಾಬು ಎಂಬ ತೆಲುಗಿನ ಶ್ರೀಮಂತ ಹುಡುಗನ ಜೊತೆ 'ಅಂತೂ ಇಂತೂ ಪ್ರೀತಿ ಬಂತು....' ಚಿತ್ರದಲ್ಲೂ ರಜ್ಯಾ ನಾಯಕಿಯಾಗಿ ಮರ ಸುತ್ತಿದ್ದಳು. ಸಾಧಾರಣವಾಗಿ ನಾಯಕ ನಟರು ತಮ್ಮ ಹೊಸ ಚಿತ್ರಗಳಿಗೆ ಹೊಸ ಯುವತಿಯರೇ ನಾಯಕಿ ಆಗಬೇಕೆಂದು ಇಷ್ಟ ಪಡುತ್ತಾರೆ. ಆದರೆ ರಮ್ಯಾ ಆ ಟ್ರೆಂಡ್‌ಅನ್ನು ರಿವರ್ಸ್ ಮಾಡಿ ತನ್ನ ಹೊಸ ಚಿತ್ರಗಳಿಗೆ ಹೊಸ ಯುವಕರನ್ನೇ ನಾಯಕ ನಟರಾಗಿ ಪಡೆಯುತ್ತಿದ್ದಾಳೆ.

ಹ್ಯಾಟ್ಸ್ ಆಫ್ ಟು ಯು ರಮ್ಯಾ!!

'ಡೆಡ್ಲಿ' ಶ್ರೀವತ್ಸನಿಗೆ ಧರ್ಮದೇಟು!

ಇದು ಬಸವನಗುಡಿಯ ನ್ಯಾಷನಲ್ ಕಾಲೇಜಿನ ಎದುರೇ ಇರುವ ಸತ್ಯ ಪ್ರಮೋದ ಕಲ್ಯಾಣ ಮಂಟಪ. ಅಂದು ಆ ಮಂಟಪದಲ್ಲಿದ್ದವರು ಮದುವೆಯ ಸಡಗರದಲ್ಲಿ ಓಡಾಡಿಕೊಂಡಿದ್ದರು. ಇದ್ದಕ್ಕಿದ್ದಂತೆ ಅವರೊಳಗೆ ನುಗ್ಗಿದ ಏಳೆಂಟು ಮಂದಿ ಗೂಂಡಾಗಳು ಒಬ್ಬರಿಗೊಬ್ಬರು ಹೊಡೆದುಕೊಂಡು ಕದನಕ್ಕಿಳಿದರು. ಸಿನಿಮೀಯ ರೀತಿಯ ಈ ದೃಶ್ಯವನ್ನು ಕಂಡ ಮದುವೆ ಮನೆಯಲ್ಲಿದ್ದ ಬಂಧು-ಬೀಗರು ಗಾಬರಿಗೆ ಬಿದ್ದು ಚೆಲ್ಲಾಪಿಲ್ಲಿಯಾದರು.



ಕಷ್ಟಪಟ್ಟು ನೆರವೇರಿಸುತ್ತಿದ್ದ ಮದುವೆಯೆಂಬ ಶುಭ ಕಾರ್ಯದಲ್ಲಿ ಯಾರೋ ಬಂದು ಹೀಗೆ ಇದ್ದಕ್ಕಿದ್ದಂತೆ ಗಲಾಟೆ ಶುರುಮಾಡಿದರಲ್ಲ ಎಂದು ಟೆನ್ಷನ್‌ಗೆ ಒಳಗಾದ ಮದುವೆಮನೆಯವರು ಆ ರೌಡಿಗಳನ್ನು ಹಿಡಿದು ಸರಿಯಾಗಿ ಝಾಡಿಸಲು ಮುಂದಾದರು. ಆಗ ಹಿಂದಿನಿಂದ ಓಡೋಡಿಬಂದ ಮರಿ ಆನೆಯಂಥ ವ್ಯಕ್ತಿಯೊಬ್ಬ "ಇವರು ನಿಜವಾದ ರೌಡಿಗಳಲ್ಲ, ಇದು ಸಿನಿಮಾ ಶೂಟಿಂಗ್..." ಎಂದ!

ಇದು ವಿಕೃತ ನಿರ್ದೇಶಕನೊಬ್ಬನ ವಿಲಕ್ಷಣ ಚೇಷ್ಟೆಯ ಪರಾಕಾಷ್ಠೆಯಲ್ಲದೇ ಮತ್ತೇನೂ ಅಲ್ಲ!

ಅದು ಮನೋವಿಕಾರಿ ನಿರ್ದೇಶಕ ರವಿ ಶ್ರೀವತ್ಸನದ್ದು.


ಬಹಳ ವರ್ಷಗಳ ಹಿಂದೆ ಸೋಮ ಎಂಬ ಸಮಾಜಕಂಟಕನೊಬ್ಬ ಬಸವನಗುಡಿ ನ್ಯಾಷನಲ್ ಕಾಲೇಜ್‌ನಲ್ಲಿ ಓದಿದ್ದ ಅಲ್ಲಿಂದಲೇ ರೌಡಿಸಂ ಆರಂಭಿಸಿ ಕಡೆಗೊಂದು ದಿನ ಪೊಲೀಸರ ಎನ್‌ಕೌಂಟರ್‌ನಲ್ಲಿ ಪ್ರಾಣಬಿಟ್ಟಿದ್ದ. ಈ 'ಹುತಾತ್ಮ' ರೌಡಿಯ ಬದುಕು, ಬವಣೆಗಳನ್ನೇ ಕಥಾಹಂದರವಾಗಿಟ್ಟುಕೊಂಡು ಶ್ರೀವತ್ಸ ಎಂಬ ನಿರ್ದೇಶಕ ನಾಲ್ಕು ವರ್ಷಗಳ ಹಿಂದೆ 'ಡೆಡ್ಲಿ ಸೋಮ' ಎಂಬ ಚಿತ್ರವನ್ನು ನಿರ್ದೇಶಿಸಿದ್ದ. ಶ್ರೀವತ್ಸನ ಅದೃಷ್ಟಕ್ಕೆ, ಕನ್ನಡಿಗರ ದುರಾದೃಷ್ಟಕ್ಕೆ ಈ ಸಿನಿಮಾ ಬಾಕ್ಸಾಫೀಸ್‌ನಲ್ಲಿ ಗೆದ್ದುಬಿಟ್ಟಿತು. ಆ ನಂತರ ಶ್ರೀವತ್ಸ 'ಗಂಡ ಹೆಂಡತಿ' ಎಂಬ ವಯಸ್ಕರ ಚಿತ್ರವನ್ನೂ, 'ರಾಜೀವ್' ಮತ್ತು 'ಮಾದೇಶ' ಎಂಬ ಪರಮ ದರಿದ್ರ ಸಿನಿಮಾಗಳನ್ನೂ ತೆಗೆದಿದ್ದ. ಆದರೆ ಅವೆಲ್ಲವೂ ಅಡ್ಡಡ್ಡ ಮಲಗಿಬಿಟ್ಟವು. ಇದಾದನಂತರ ಶ್ರೀವತ್ಸನ ತಲೆಗೆ ಏನೂ ತೋಚದೆ ಮತ್ತದೇ ಡೆಡ್ಲಿ ಸೋಮನ ಕಥೆಯನ್ನೇ ಮುಂದುವರೆಸಿ 'ಡೆಡ್ಲಿ ಸೋಮ ಭಾಗ-2'ನ್ನು ಈಗ ರೂಪಿಸುತ್ತಿದ್ದಾನೆ.

ಈ ಶ್ರೀವತ್ಸನಿಗೆ ಮೊದಲಿನಿಂದಲೂ 'ರಿಯಲಿಸ್ಟಿಕ್' ಆದ ಚಿತ್ರವನ್ನು ತೆಗೆಯಬೇಕು ಎಂಬ ಹುಚ್ಚು.

ಈ ಕಾರಣಕ್ಕೇ 'ಡೆಡ್ಲಿ ಸೋಮ' ಮೊದಲ ಭಾಗವ[ನ್ನು] ಚಿತ್ರೀಕರಿಸುವ ಮುನ್ನ ಸೋಮನ ಮ್ಯಾನರಿಸಂ[ಗಳ]ನ್ನು ತಿಳಿದುಕೊಳ್ಳಲು ವಾರಗಟ್ಟಲೆ ಅವನ ಏರಿಯಾಗಳ[ಲ್ಲಿ] ಅಡ್ಡಾಡಿ, ಆತನ ಸ್ನೇಹಿತರನ್ನೆಲ್ಲಾ ಭೇಟಿ ಮಾಡಿ[…] ಸೋಮನ ಪ್ರತಿಯೊಂದು ಹಾವಭಾವವನ್ನೂ ಕಲಿಹಾಕಿದ್ದ. ಸೋಮ ಪಾನ್‌ಪರಾಗ್ ತಿನ್ನುತ್ತಿ[ದ್ದ] ಎಂಬ ಕಾರಣಕ್ಕೆ ನಾಯಕನಟ ಆದಿತ್ಯನಿಗೂ ಪಾನ್[…] ತಿನ್ನುವುದನ್ನು ಅಭ್ಯಾಸ ಮಾಡಿಸಿದ್ದ. ಸೋಮ[ನ] ನಿಕಟವರ್ತಿಗಳನ್ನೆಲ್ಲಾ ಸಂದರ್ಶಿಸಿ, ಬೆಂಗಳೂರಿ[ನ] ರೌಡಿಗಳ 'ಸಂಸ್ಕೃತ-ಸಂಸ್ಕೃತಿ' ಗಳನ್ನೆಲ್ಲ ಸಂಶೋಧಿಸಿ[…] ಅವುಗಳನ್ನು ತನ್ನ ಸಿನಿಮಾದಲ್ಲಿ ಅಳವಡಿಸಿಕೊಂಡಿದ[್ದ]. ಪಾತಕಲೋಕವನ್ನು ಇಷ್ಟು ನಿಯತ್ತಿನಿಂದ ಅನ್ವೇಷಿಸಿ[ದ] ರವಿ ಶ್ರೀವತ್ಸ ಅಕಸ್ಮಾತ್ ಈ ವಲಯವನ್ನು ಬಿಟ್ಟು ಬೇರೆ ಯಾವುದಾದರೂ ಕ್ಷೇತ್ರವನ್ನು ಆಯ[್ಕೆ] ಮಾಡಿಕೊಂಡಿದ್ದರೆ ಆತ ಇಷ್ಟೊತ್ತಿಗೆ 'ಡಾಕ್ಟರೇಟ್' ಪಡೆದಿರುತ್ತಿದ್ದ. ಅದಿಲ್ಲವಾದರೆ ಕನಿಷ್ಠ ಜನಮೆಚ್ಚು[ವ] ನಿರ್ದೇಶಕನಾದರೂ ಆಗಿರುತ್ತಿದ್ದ.

ಆದರೆ 'ರಿಯಲಿಸ್ಟಿಕ್' ಆಗಿ ಚಿತ್ರ ಮಾಡುವುದಕ್ಕೂ, 'ರಿಯಲ್' ಸನ್ನಿವೇಶಗಳಿಗೆ ನುಗ್ಗಿ ದಾಂಧಲೆ ಎಬ್ಬಿಸುವುದಕ್ಕೂ ವ್ಯತ್ಯಾಸ ಗೊತ್ತಿರ[ದ] ಶ್ರೀವತ್ಸ ಇಂತಹ ವಿಕೃತಗಳನ್ನಲ್ಲದೇ ಇನ್ನೇನು ಮಾಡಿಯಾನು?

ಮೊನ್ನೆ ಅದೇ ರೀತಿ ಸತ್ಯ ಪ್ರಮೋದ ಚೌಲ್ಟ್ರಿಯಲ್ಲಿ 'ನೈಜ'ವಾ[ಗಿ] ಚಿತ್ರೀಕರಣ ಮಾಡಲು ಈ ಶ್ರೀವತ್ಸ ಹೋದಾಗ ಅಲ್ಲಿದ್ದ ಜ[ನ] ಈತನ ಚಿತ್ರ ತಂಡದವರಿಗೆ ಹಿಗ್ಗಾಮುಗ್ಗಾ ಬಡಿದಿದ್ದಾರೆ. ಅವ[ರು] ಈ ನಕಲಿ ರೌಡಿಗಳು ತಮ್ಮೊಂದಿಗೆ ತೆಗೆದುಕೊಂಡು ಹೋಗಿ[ದ್ದ] ಮಚ್ಚು, ಲಾಂಗುಗಳನ್ನೇ ಉಲ್ಟಾ ಮಾಡಿ ಅವರಿಗೇ ಬಾರಿಸಿದ್ದಾ[ರೆ]. ಫೈಟ್ ಮಾಸ್ಟರ್ ಡಿಫರೆಂಟ್ ಡ್ಯಾನಿ ಮತ್ತು ನಿರ್ದೇಶಕ ರ[ವಿ] ಶ್ರೀವತ್ಸನಿಗೂ ಮುಖಾಮೂತಿ ನೋಡದೆ ಧರ್ಮದೇಟು ಕೊಟ್ಟಿದ್ದಾ[ರೆ]. ಅಷ್ಟಕ್ಕೂ ಸುಮ್ಮನಾಗದೆ, ಕೊನೆಗೆ ಬಸವನಗುಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪೊಲೀಸರು ಶ್ರೀವತ್ಸನಿಗೆ ಛೀಮಾರಿ ಹಾಕಿ ಕಳಿಸಿದ್ದಾರೆ. ತನ್ನ ನಿರ್ದೇಶನದ ತೆವಲಿಗಾಗಿ ಯಾರದ್ದೋ ಮದುವೆ ಸಮಾರಂಭದಲ್ಲಿ ಗಲಭೆಯೆಬ್ಬಿಸಿದ ಶ್ರೀವತ್ಸನಿಂದ ಇನ್ನೂ ಎಂತೆಂಥ ಅನಾಹುತಗಳು ಕಾದಿದೆಯೋ?



ಶ್ರೀವತ್ಸನಿಗೆ ಇಂತಹ 'ರಿಯಲ್' ಹುಚ್ಚಲ್ಲದೆ, ಅದರ ಜೊತೆಜೊತೆಗೆ ಪುಕ್ಕಟೆ ಪ್ರಚಾ[ರ] ಪಡೆಯುವ ಗೀಳೂ ಇದೆ. ಕೆಲವೇ ದಿನಗಳ ಹಿಂದೆ 'ನಟ ಸುಹಾಸಿ[…] ಚಿಂತಾಮಣಿ ಜೈಲಿನಲ್ಲಿ ಬಂಧಿತರಾಗಿದ್ದಾರೆ' ಎಂಬ ಸುದ್ದಿ ಹಬ್ಬಿಸಿ[ದ್ದ] ಶ್ರೀವತ್ಸ. ಈ ಸುದ್ದಿಯನ್ನು ಕೇಳಿದ ಎಲ್ಲರೂ ದಿಗ್ಭ್ರಾಂತರಾಗಿದ್ದರು. ಆದರೆ ಆಮೇಲೆ ಗೊತ್ತಾಗಿದ್ದೇನೆಂದರೆ, ಅದು 'ಡೆಡ್ಲಿ ಸೋಮ ಭಾಗ-2'ರ ದೃಶ್ಯಕ್ಕಾಗಿ ನಡೆದ ಚಿತ್ರೀಕರಣ ಎಂದು.

ಅದಕ್ಕೂ ಕೆಲದಿನಗಳ ಮುಂಚೆ, ಚಿತ್ರೀಕರಣದ ಸಂದರ್ಭದ[ಲ್ಲಿ] ನಟ ಆದಿತ್ಯ ಬಿದ್ದು ತರಚು ಗಾಯ ಮಾಡಿಕೊಂಡಿದ್ದ. ಅದ[ನ್ನೇ] ನೆಪವಾಗಿಟ್ಟುಕೊಂಡು ಆತನನ್ನು ಖಾಸಗಿ ಆಸ್ಪತ್ರೆಗೆ ದಾಖ[ಲು] ಮಾಡಿ 'ಆದಿತ್ಯನ ಸ್ಥಿತಿ ಚಿಂತಾಜನಕ' ಎಂದು ಸುದ್ದಿ ಹಬ್ಬಿಸಿದ್ದ. ಕೆ[ಲ] ಆತುರಗೇಡಿ ಚಾನೆಲ್‌ಗಳಂತೂ ಅದನ್ನೇ 'ಬ್ರೇಕಿಂಗ್ ನ್ಯೂಸ್'ಆ[ಗಿ] ಬಿಂಬಿಸಿದ್ದವು. ಇದನ್ನು ನೋಡಿ ಆತಂಕಗೊಂಡ ಚಿತ್ರೋದ್ಯಮ[ದ] ಗಣ್ಯರೆಲ್ಲಾ ಆದಿತ್ಯನನ್ನು ನೋಡಲು ಆಸ್ಪತ್ರೆಗೆ ದೌಡಾಯಿಸಿದರು. ಆದರೆ ಅಲ್ಲಿ ಆದಿ ಹಾಸಿಗೆ ಮೇಲೆ ಮಲಗಿ ಖುಷ್‌ಖುಷಿಯ[ಾಗಿ] ಟೀವಿ ನೋಡುತ್ತಾ, ಕೇಕೆ ಹಾಕುತ್ತಿದ್ದುದನ್ನು ಕಂಡು ಹಣೆಹ[ಣೆ] ಚಚ್ಚಿಕೊಂಡು ಬಂದಿದ್ದರು. ಇವೆಲ್ಲಾ ಶ್ರೀವತ್ಸನ ಚೀಪ್ ಗಿಮಿಕ್[ಗಳ] ಸಣ್ಣ ಸ್ಯಾಂಪಲ್ ಅಷ್ಟೇ.

ಆದರೆ ಮೊನ್ನೆ ಹೀಗೆ ಗಿಮಿಕ್ ಮಾಡಲು ಹೋಗಿ ರ[ವಿ] ಶ್ರೀವತ್ಸ ಸಮಾ ರುಬ್ಬಿಸಿಕೊಂಡು ಬಂದಿದ್ದಾನೆ. ಇದರಿಂದಲಾದರ[ೂ] ಆತ ಪಾಠ ಕಲಿಯುವಂತಾಗಲಿ.

● ಅರುಣ್‌ಕುಮಾರ್ […]
arunodayagc@gmail.co[m]

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44